ಮನವಿಗಳು

ಈಗ ಮನವಿಯನ್ನು ಅರ್ಪಿಸುವುದು. ಶ್ರೀ ಕೆ. ಕುಶಾಲ ಅವರು ಮನವಿಯನ್ನು ಒಪ್ಪಿಸಬೇಕು.

ಶ್ರೀ ಕೆ. ಕುಶಾಲ.—ಉಡುಪಿ ತಾಲ್ಲೂಕಿನ ಗ್ರಾಮ ಸಹಾಯಕರ ಸಮಸ್ಯೆಗಳನ್ನು ಕುರಿತು ಮನವಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಂದ ಮನವಿಯನ್ನು ಒಪ್ಪಿಸಲಾಯಿತು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಒಂದು ನಿಲುವಳಿ ಸೂಚನೆ ಇವೆ, ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಈ ವಿಷಯದಲ್ಲಿ ಗಮನ ಸೆಳೆಯುವ ಸೂಚನೆ ಮತ್ತು ನಿಲುವಳಿ ಸೂಚನೆ ಎರಡು ಬಂದಿದೆ. ಈಗ ಮಾನ್ಯ ಬಂಗಾರಪ್ಪನವರು, ಮೊಯಿಲಿಯವರು, ಬಸವಲಿಂಗಪ್ಪನವರು ಮಾತನಾಡಿ..

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ನನಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಇಲ್ಲ. ಇಲ್ಲ, ಸಹಿ ಮಾಡಿದವರಿಗೆ ಎಲ್ಲರಿಗೂ ಅವಕಾಶ ಕೊಡಬೇಕೆಂದು ಇಲ್ಲ. ಈಗ ಬಂಗಾರಪ್ಪನವರು ವಿಷಯದ ಕುರಿತು ಮಾತನಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೆ. ನಾನು ಮತ್ತು ನಮ್ಮ ಪಕ್ಷದ ಮಾನ್ಯ ಸದಸ್ಯರುಗಳು ಅನೇಕ ಜನ ಈ ಒಂದು ಸೂಚನೆಯನ್ನು ತಾವು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಬೇಕೆಂದು, ಕೇಳಿರುವುದರಿಂದ ನಾವು ಈ ಸೂಚನೆಯ ವಿಷಯ ಏನೆಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇವೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಬೆಂಗಳೂರು, ದಕ್ಷಿಣ ಕನ್ನಡ ಹಾಗೂ ರಾಜ್ಯದ ಇನ್ನಿತರ ಪ್ರದೇಶಗಳಲ್ಲಿ ಡಕಾಯಿತರಿಂದ ಕೊಲೆ ಮತ್ತು ದರೋಡೆ

ಅಧ್ಯಕ್ಷರು.—ತಾವು ನೋಟೀಸ್‌ನ್ನು ಓದಿ ಹೇಳಿ.

ಶ್ರೀ ಎಸ್. ಬಂಗಾರಪ್ಪ.—"ಬೆಂಗಳೂರು, ದಕ್ಷಿಣ ಕನ್ನಡ ಹಾಗೂ ರಾಜ್ಯದ ಇನ್ನುಳಿದ ಪ್ರದೇಶದಲ್ಲಿ ಡಕಾಯಿತರ ಹಾವಳಿಯಿಂದ ಜನರು ತತ್ತರಿಸಿದ್ದು, ಪರಿಸ್ಥಿತಿಯ ಗಂಭೀರತೆಯನ್ನು ಗಣನೆಗೆ ತೆಗೆದುಕೊಂಡು ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಅವಕಾಶಕ್ಕಾಗಿ ಈ ಸೂಚನೆಯನ್ನು ನೀಡುತ್ತೇವೆ''—ಈ ಒಂದು ಸೂಚನೆಯನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಈಗಾಗಲೇ ನಮ್ಮ ಸೂಚನೆಯಲ್ಲಿ ಹೇಳಿದ ಹಾಗೆ, ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿ ದರೋಡೆಗಳು ಅವ್ಯಾಹತವಾಗಿ ನಡೆದಿದೆ, ಮತ್ತು ನಡೆಯುತ್ತಾ ಇವೆ, ಅದರಲ್ಲಿಯೂ ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ, ನಗರಕ್ಕೆ ಹೊಂದಿಕೊಂಡಿರತಕ್ಕಂತಹ ಪ್ರದೇಶಗಳಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಈ ಪ್ರಕರಣಗಳು ಬೆಳೆದಿವೆ ಮತ್ತು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ ಕೂಡಾ ಇಂತಹ ಪ್ರಕರಣಗಳು ನಡೆಯುತ್ತಾ ಇವೆ, ಇವೊತ್ತು ಈ ದರೋಡೆ ಪ್ರಕರಣಗಳನ್ನು ಗಮನಿಸಿದಾಗ ಬರೆ ದರೋಡೆ ಮಾಡಿ, ಅಲ್ಲಿರತಕ್ಕಂತಹ ವಸ್ತುಗಳನ್ನು, ಹಣವನ್ನು, ಆಭರಣಗಳನ್ನು ತೆಗೆದುಕೊಂಡು. ಜನರಿಗೆ ತೊಂದರೆ ಕೊಡದೆ ಹೋದರೆ, ಅಂತಹ ಪ್ರಕರಣಗಳ ಸ್ವರೂಪ ಬೇರೆ ಆಗುತ್ತದೆ. ಆದರೆ ಈಗ ನಡೆಯುತ್ತಿರುವ ದರೋಡೆಗಳ ಸ್ವರೂಪದ ಪ್ರಕಾರ ಜನರ ವಸ್ತುವಡವೆಗಳ ಜೊತೆಗೆ, ಅವರ ಜೀವವನ್ನೂ ಕೂಡಾ ದರೋಡೆ ಕೋರರು ತೆಗೆದುಕೊಳ್ಳುತ್ತಾ ಇದ್ದಾರೆ. ಇದು ಎಲ್ಲರ ಗಮನದಲ್ಲಿದೆ. ಇದು ಇತ್ತೀಚಿನ ತಿಂಗಳಲ್ಲಿ ಇಂತಹ ಪ್ರಕರಣಗಳು ಅವ್ಯಾಹತವಾಗಿ ನಡೆದಿವೆ. ಇಂತಹ ಪ್ರಕರಣಗಳಲ್ಲಿ ದರೋಡೆಕೋರರು ಬರೇ ವಸ್ತುವಡವೆಗಳನ್ನು ತೆಗೆದುಕೊಂಡು ಹೋಗಬೇಕೆಂದು ಈ ದರೋಡೆಗಳನ್ನು ಮಾಡುತ್ತಾ ಇಲ್ಲ. ವಸ್ತುಗಳನ್ನು ತೆಗೆದುಕೊಂಡು ಹೋಗತಕ್ಕಂತಹ ಸಂದರ್ಭಗಳಲ್ಲಿ ಅವರಿಗೆ ಅಡ್ಡ ಬರತಕ್ಕಂತಹವರನ್ನು ಹಲ್ಲೆ ಮಾಡುವುದು, ಅವರನ್ನು ಕೊಲೆ ಮಾಡುವುದು. ಹಾಗೆಯೇ ಇಂತಹ ಘಟನೆಗಳು ನಡೆಯತಕ್ಕಂತಹ ಸಂದರ್ಭಗಳಲ್ಲಿ ರಕ್ಷಣೆಗೆ ಬರತಕ್ಕಂತಹರ ಮೇಲೆ ಹಲ್ಲೆ ಮಾಡುವುದು,

ಕೊಲೆ ಮಾಡುವುದು ಮುಂತಾಗಿ ಈ ಮಟ್ಟಕ್ಕೆ ಹೋಗಿದ್ದಾರೆ, ಹೀಗೆ ಹಲ್ಲೆಗೊಳಗಾಗಿ ಕೊಲೆಯಾದವರಲ್ಲಿ ಮುದುಕರು, ಮಕ್ಕಳು, ಹುಡುಗರು, ಹೆಂಗಸರು, ಯುವಕರು ಇದ್ದಾರೆ. ಇಂತಹ ಸುದ್ದಿಗಳು ವಿವರವಾಗಿ ಪತ್ರಿಕೆಗಳಲ್ಲಿ ಬಂದಿವೆ. ಈ ದರೋಡೆ ಮತ್ತು ಕೊಲೆ ಹಾಗೂ ಸುಲಿಗೆ ಮಾಡತಕ್ಕಂತಹ ರೀತಿ ಯಾವ ರೀತಿಯಲ್ಲಿದೆ ಎಂದರೆ, ಅವರು ಆಯುಧಗಳನ್ನು, ಕಬ್ಬಿಣದ ಸಲಾಕೆಗಳನ್ನು ಉಪಯೋಗ ಮಾಡಿ, ಮನೆಯ ಕಿಟಕಿಗಳನ್ನು ಮುರಿದುಹಾಕಿರತಕ್ಕಂತಾದ್ದು, ಬಾಗಿಲುಗಳನ್ನು ಜಜ್ಜಿ ಒಡೆದು ಹಾಕಿರತಕ್ಕಂತಾದ್ದು, ಅಡ್ಡ ಬಂದವರಿಗೆ ಕೊಲೆ ಮಾಡಿರತಕ್ಕಂತಾದ್ದು, ಹಲ್ಲೆಗೊಳಗಾದವರ ರಕ್ಷಣೆಗೆ ಬಂದವರನ್ನು ಕೊಲೆ ಮಾಡಿರತಕ್ಕಂತಾದ್ದು ಇಂತಹ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ ಇಂತಹ ಪ್ರಕರಣಗಳಲ್ಲಿ ಆಯುಧಗಳನ್ನು, ಕೋಲು, ದೊಣ್ಣೆಗಳನ್ನು ಸಲಾಕೆಗಳನ್ನು ಮಾತ್ರ ಉಪಯೋಗ ಮಾಡಿದ್ದಲ್ಲದೆ, ಬಂದೂಕುಗಳ ಪ್ರಯೋಗ ಕೂಡಾ ನಡೆದಿದೆ ಎನ್ನುವ ವಿಷಯವೂ ನಮ್ಮೆಲ್ಲರ ಗಮನದಲ್ಲಿದೆ. ಬೆಂಗಳೂರು ಬಳಿ ವೈಟ್ ಫೀಲ್ಡ್‌ನಲ್ಲಿ ದಿಲೀಪ್ ಸಿಂಗ್‌ರವರ ಮನೆಯ ಒಳಗಡೆ ಡಕಾಯಿತರು ಹೋಗಲಿಲ್ಲ. ಸಿಂಗ್‌ರವರ ಮನೆಯಲ್ಲಿ ಕೋವಿ ಮುಂತಾಗಿ ರಕ್ಷಣೆಗಾಗಿ ಇರುವುದು ಇದ್ದರೂ ಕೂಡಾ, ಆ ಸಂದರ್ಭದಲ್ಲಿ ದರೋಡೆಕೋರರು ಕಿಟಕಿಯಿಂದಲೇ ಬಂದೂಕವನ್ನು ತೂರಿಸಿ ಅವರನ್ನು ಕೊಂದಿದ್ದಾರೆ ಅನಂತರ ಅವರ ಕೆಲಸ ಮಾಡಿದ್ದಾರೆ. ಪಾಪ ಮೃತ ಸಿಂಗ್‌ರವರು ಪಂಜಾಬ್‌ನಿಂದ ಇಲ್ಲಿಗೆ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡಿ ಜೀವನ ನಿರ್ವಹಿಸಲು ಬಂದವರು ಅವರ ಹೆಣ್ಣು ಮಕ್ಕಳು ಅವರ ಹೆಣದ ಬಳಿ ಅಳುತ್ತಿದ್ದ ಹೃದಯವಿದ್ರಾವಕ ದೃಶ್ಯವನ್ನು ನಾವು ನೋಡಿದ್ದೇವೆ. ದರೋಡೆ ಮಾಡತಕ್ಕಂತಹ ಸಂದರ್ಭವಲ್ಲಿ ಅವರು ಸ್ಪಷ್ಟವಾಗಿ ಜನರ ಪ್ರಾಣಕ್ಕೆ ತೊಂದರೆ ಕೊಡದೆ ಮಾಡಿದ್ದರೆ ಅದರ ಸ್ವರೂಪ ಒಂದು ಬೇರೆ ತೆರನಾಗಿ ಇರುತ್ತಿತ್ತು.

ಇವತ್ತು ದರೋಡೆ ಮಾಡಿರತಕ್ಕಂಥ ವಿಷಯಗಳು ನಮಗೂ ಮತ್ತು ನಿಮಗೂ ಸ್ಪಷ್ಟವಾಗಿ ಗೊತ್ತಿದೆ. ಇದರಿಂದ ಜನರ ಪ್ರಾಣಕ್ಕೆ ಗಮನ ಕೊಡದೆ ಜನರನ್ನು ಕೊಂದು ದರೋಡೆ ಮಾಡಿರತಕ್ಕಂಥಾದ್ದು ಕೂಡ ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಇವತ್ತು ಈ ಕೆಲಸವನ್ನು ಮಾಡುವವರು ಸುಮಾರಾಗಿ ಪರಿಣಿತರೇ ಆಗಿದ್ದಾರೆ. ಇದರಲ್ಲಿ ಯಾರಿಗೂ ಅನುಮಾನ ಬೇಕಾಗಿಲ್ಲ. ಇವತ್ತು ರಾಜ್ಯದಲ್ಲಿ ದರೋಡೆಗಳ ಸರಮಾಲೆಯೇ ನಡೆದಿದೆ. ಮೈಸೂರಿನಲ್ಲಿ ದರೋಡೆ ನಡೆದಿರತಕ್ಕಂಥಾದ್ದು ೨೩–೨–೧೯೮೬ರ ಪತ್ರಿಕೆಯಲ್ಲಿ ಬಂದಿದೆ. ಇಲ್ಲಿ ಚಾಕು. ಚೂರಿ, ಚೈನ್ ಮತ್ತು ಚಿನ್ನದ ಸರಗಳನ್ನು ದೋಚಿಕೊಂಡು ಹೋಗತಕ್ಕಂಥ ವಿಚಾರಗಳು ಅಲ್ಲ. ಈ ರೀತಿ ದಿನನಿತ್ಯ ನಡೆಯುತ್ತಿರುತ್ತದೆ. ಆದರೆ ಇಲ್ಲಿ ಮುಖ್ಯವಾಗಿ ನಡೆದಿರತಕ್ಕಂಥಾದ್ದು ದರೋಡೆಗಳು. ಅದೂ ರಾತ್ರಿ ವೇಳೆಯಲ್ಲಿ ದೂರದ ಪ್ರದೇಶಗಳಲ್ಲಿ ಒಂಟಿ ಮನೆಗಳಿಗೆ ಇರಬಹುದು ಅಥವಾ ಫಾರಂ ಹೌಸ್‌ಗಳಲ್ಲಿ ಇರಬಹುದು ಅಥವಾ ಇಂಡಿಪೆಂಡೆಂಟ್ ಹೌಸ್‌ಗಳು ಇರಬಹುದು, ಆ ಮನೆಗಳಿಗೆ ದರೋಡೆಕೋರರು ನುಗ್ಗಿ ಬಂದೂಕು ಉಪಯೋಗಿಸಿ ಜನರಲ್ಲಿ ಭಯ ಮತ್ತು ಭೀತಿಯನ್ನು ಉಂಟು ಮಾಡಿದ್ದಾರೆ. ಇತ್ತೀಚೆಗೆ ವರ್ತೂರಿನಲ್ಲಿ ಕೂಡ ದರೋಡೆ ನಡೆದಿದೆ ಎಂದು ವರ್ತೂರು ಶಾಸಕರಾದಂಥ ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು. ಆದರೆ ಈ ವಿಷಯ ಇನ್ನು ಪತ್ರಿಕೆಗಳಲ್ಲಿ ಬಂದಿಲ್ಲ ಈ ದರೋಡೆಕೋರರು ವರ್ತೂರಿಗೆ ಬಂದಾಗ ಆ ಹಳ್ಳಿಯ ಜನರು ಒಂದು ೬–೭ ಜನ ಸೇರಿ ಗಲಾಟೆ ಮಾಡಿ ಹುಯಿಲೆಬ್ಬಿಸಿದ್ದರಿಂದ ಅವರು ಪರಾರಿಯಾಗಿದ್ದಾರೆ. ಈ ದರೋಡೆಯಿಂದ ಅನೇಕ ಸಾವುಗಳು ಸಹ ಆಗಿವೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೬–೭ ಜನ ಸತ್ತಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ನಮ್ಮ ಒಂದು ಲೆಕ್ಕಾಚಾರದ ಪ್ರಕಾರ ಸುಮಾರು ೮–೧೦ ಸಾವುಗಳು ಆಗಿವೆ. ಇದರಲ್ಲಿ ದರೋಡೆ ಪ್ರಕರಣಗಳು ಕೂಡ ಅಲ್ಲಿ ನಡೆದಿವೆ. ಈ ದರೋಡೆಕೋರರು ಬಹಳ ಪರಿಣಿತರಾಗಿ ಕೆಲಸ ಮಾಡುತ್ತಿದ್ದಾರೆಂದು ನಾನು ಮೊದಲೇ ಹೇಳಿದ್ದೇನೆ. ಇದರಿಂದ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅನೇಕ ಜನ ಬಂದೂಕು ಲೈಸನ್ಸ್ ಬೇಕೆಂದು ಹೇಳಿ ಪೋಲೀಸ್ ಕಮೀಷನರ್ ಆಫೀಸ್ ಅರ್ಜಿಗಳನ್ನು ಬರೆದುಕೊಂಡಿದ್ದಾರೆ. ಈ ವಿಷಯವನ್ನು ನಾನು ನಿನ್ನೆಯ ದಿವಸ ಸಾಯಂಕಾಲ ತಿಳಿದುಕೊಂಡಿದ್ದೇನೆ. ಈ ಜನ ಬಂದೂಕು ಲೈಸೆನ್ಸ್ ಕೇಳಿರುವುದು ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಮತ್ತು ತಮ್ಮ ಆಸ್ತಿಪಾಸ್ತಿಗಳ ರಕ್ಷಣೆಯನ್ನು ಮಾಡಿಕೊಳ್ಳುವ ಸಲುವಾಗಿ ಬಂದೂಕು ಲೈಸೆನ್ಸ್ ಕೇಳಿಕೊಂಡಿದ್ದಾರೆ. ಆದರೆ ಪೋಲೀಸ್ ಕಮೀಷನರ್ ಕಛೇರಿಯಲ್ಲಿ ನಿನ್ನೆಯ ತನಕ ಈ ಬಗ್ಗೆ ಯಾವುದೇ ಕೆಲಸವನ್ನು ಮಾಡಿಲ್ಲ. ಇದರಿಂದ ಜನ ಏನು ಮಾಡಲು ಪ್ರಾರಂಭ ಮಾಡಿದ್ದಾರೆಂದರೆ ಖಾಸಗಿಯಾಗಿ ಬಂದೂಕುಗಳನ್ನು ಇಟ್ಟುಕೊಂಡು ಲೈಸೆನ್‌ಗಳು ಇಲ್ಲದೆ ತಮ್ಮ ಆತ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಜನ ಹೊರಟಿದ್ದಾರೆ. ನಿಜವಾಗಿ

ಜನರ ಮತ್ತು ಜನತೆಯ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಇದೇ ಸಂದರ್ಭದಲ್ಲಿ ನಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರತಕ್ಕಂಥ ದರೋಡೆಗಳ ಬಗ್ಗೆ ತೆಗೆದುಕೊಳ್ಳುವುದಾದರೆ ಅಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು ಸಹ ಕೊಂದು ಹಾಕಿದ್ದಾರೆ. ಆ ಬಗ್ಗೆ ಫೋಟೋಗಳು ಸಹ ನನ್ನಲ್ಲಿ ಇವೆ. ಅದೇ ರೀತಿಯಲ್ಲಿ ಹರಿಹರದಲ್ಲಿ ಕೂಡ ದರೋಡೆ ನಡೆದು ಕೊಲೆ ಸಹ ಆಗಿದೆ. ಅಲ್ಲಿ ಶ್ರೀಮತಿ ಲಕ್ಷ್ಮೀಕಾಂತಮ್ಮ ಮತ್ತು ೫ ಜನ ಅನೇಕ ರಾಬರೀಸ್ ಕೇಸ್‌ಗಳಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಅದು ಸಹ ಪತ್ರಿಕೆಗಳಲ್ಲಿ ಬಂದಿದೆ. ಮತ್ತೆ ಬಂಟ್ವಾಳ್‌ದಲ್ಲಿ Housewife was beaten and her earrings were snatched away. ಆಮೇಲೆ ೧೧-೧-೧೯೮೬ರಲ್ಲಿ ಹರಿಹರದಲ್ಲಿ ಮತ್ತೆ ನಡೆಯಿತು. ಆಗ ರಿಸ್ಟ್ ವಾಚ್‌ಗಳನ್ನು ತೆಗೆದುಕೊಂಡು ಹೊರಟು ಹೋದರು. ಆಮೇಲೆ ಮತ್ತೆ ಯಲಹಂಕದಲ್ಲಿ ೧೧-೧-೧೯೮೬ ರಂದೇ ದರೋಡೆ ನಡೆಯಿತು. ಅದು ಸಹ ಪತ್ರಿಕೆಗಳಲ್ಲಿ ಬಂದಿದೆ. ಅಲ್ಲಿ ಸತ್ತಂತಹ ವ್ಯಕ್ತಿಗೆ ಸುಮಾರು ೩೦ ವರ್ಷಗಳು ಇರಬಹುದು. He was found dead with so many injury marks on the neck and other parts of the body. ಆ ನಂತರ ದಿನಾಂಕ ೯-೧-೧೯೮೬ ರಂದು ಬೆಂಗಳೂರಿಗೆ ಸಮೀಪದ ಸುಂಕದಕಟ್ಟೆಯಲ್ಲಿ ರಾಬರಿ ಮತ್ತು ದರೋಡೆ ಮಾಡಿದರು. ಆ ನಂತರ ದಿನಾಂಕ ೧೮-೧-೧೯೮೬ರಲ್ಲಿ ಮುದ್ದೋಳ ಮತ್ತು ಮಂಡ್ಯದಲ್ಲಿ ದರೋಡೆ ಮತ್ತು ರಾಬರಿಯಾಯಿತು. ಮಂಡ್ಯದಲ್ಲಿ ಒಂದು ಬ್ಯಾಂಕ್ ಅನ್ನು ರಾಬರಿ ಮಾಡಲು ಪ್ರಯತ್ನ ಮಾಡಿ ಸಾಧ್ಯವಾಗಲಿಲ್ಲ ಎನ್ನುವ ವಿಚಾರವನ್ನು ಸಹ ನಾವು ಪತ್ರಿಕೆಗಳಲ್ಲಿ ಕಂಡಿದ್ದೇವೆ. ಈ ದರೋಡೆಗಳಿಂದ ಸತ್ತಿರತಕ್ಕಂಥ ಜನರ ಅನೇಕ ಶವ ಚಿತ್ರಗಳು ಸಹ ನನ್ನಲ್ಲಿ ಇವೆ. ಮತ್ತೆ ಪತ್ರಿಕೆಗಳಲ್ಲಿ ಕೂಡ ಆ ಫೋಟೋಗಳು ಬಂದಿದೆ. ಅವುಗಳನ್ನು ಕೊಡಿ ಎಂದು ಹೇಳಿದರೆ ನಾನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಅಲ್ಲಿಂದ ಮತ್ತೆ ಒಂದು ಪೆಟ್ರೋಲ್ ಬಂಕ್ ದರೋಡೆ ಮಾಡಿರತಕ್ಕಂಥ ಸಂದರ್ಭಗಳು ಮತ್ತು ಮನೆಗೆ ನುಗ್ಗಿ ದರೋಡೆ ಮಾಡಿ ಹೆಣ್ಣು ಮಕ್ಕಳನ್ನು ಮತ್ತು ಮನೆಯವರನ್ನು ಕೊಂದು ಹಾಕಿರತಕ್ಕಂಥ ಪ್ರಕರಣಗಳು ಸಹ ಇವೆ. ಆ ಮೇಲೆ ದಿನಾಂಕ ೧೦-೧-೧೯೮೬ ರಂದು ಅಮೃತಹಳ್ಳಿಯಲ್ಲಿರುವ ಒಂದು ಮನೆಗೆ ನುಗ್ಗಿ ಆ ಮನೆಯಲ್ಲಿದ್ದ ೧೫ ಸಾವಿರ ರೂಪಾಯಿಗಳನ್ನು ಮತ್ತು ಪೆಟ್ರೋಲ್ ಬಂಕ್‌ನಲ್ಲಿದ್ದ ಒಂದು ಸಾವಿರ ರೂಪಾಯಿಗಳನ್ನು ಲೂಟಿ ಮಾಡಿಕೊಂಡು ಹೋಗಿರುವ ಬಗ್ಗೆ ಕೂಡ ಪತ್ರಿಕೆಗಳಲ್ಲಿ ಬಂದಿದೆ. ಆ ಪತ್ರಿಕೆ ಯಾವುದೆಂದರೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬಂದಿದೆ. ಆ ನಂತರ ದಿನಾಂಕ ೧೨-೧-೧೯೮೬ ರಂದು ಮತ್ತೆ ನಗರದಲ್ಲಿ ಡಕಾಯಿತಿ ನಡೆದಿದೆ ಎಂದು ಪತ್ರಿಕೆಗಳಲ್ಲಿ ಬಂತು. ಈ ದರೋಡೆ ಎಲ್ಲಿ ನಡೆಯಿತು ಎಂದರೆ ಬೆಂಗಳೂರು ನಗರದ ಬಾಣಸವಾಡಿಯ ಕಮ್ಮನಹಳ್ಳಿ ಮೈನ್ ರಸ್ತೆಯಲ್ಲಿ ವಾಸವಾಗಿರುವ ಶ್ರೀಯುತ ಎಡ್ವಿನ್‌ರವರನ್ನು ಕೊಂದು ಹಾಕಿದ್ದಾರೆ. ಮತ್ತು ಕೆಲವು ವಸ್ತುಗಳನ್ನು ಸಹ ಅಲ್ಲಿಂದ ದೋಚಿಕೊಂಡು ಹೋಗಿದ್ದಾರೆ. ಅಲ್ಲಿ ಅವರ ಹೆಣ್ಣು ಮಕ್ಕಳ ಮೂಗು ಮತ್ತು ಕಣ್ಣು ಕಿವಿಗಳು ಹೊರಟು ಹೋಗಿವೆ. ಇದನ್ನೆಲ್ಲಾ ನೋಡಿದರೆ ನಿಜವಾಗಿಯೂ ಸಹ ನನಗೆ ಬಹಳ ಬೇಜಾರು ಆಗುತ್ತದೆ. ಅದರಲ್ಲಿಯೂ ಯುವಕರು ಸತ್ತಿರತಕ್ಕಂಥಾದ್ದನ್ನು ನೋಡಿದರೆ ಇನ್ನೂ ಬೇಜಾರು ಆಗುತ್ತದೆ. ಬಾಣಸವಾಡಿಯ ಕಮ್ಮನಹಳ್ಳಿಯಲ್ಲಿ ದರೋಡೆಕೋರರು ಕಳವು ಮಾಡಿಕೊಂಡು ಹೋಗಿರತಕ್ಕಂಥಾದ್ದು ಚಿನ್ನದ ಸರಗಳು, ಟಿ. ವಿ. ಪೋರ್ಟ್‌ಬಲ್ ಇರಬಹುದು ಅಥವಾ ಇನ್ಯಾವುದೇ ತರಹದ್ದು ಇರಬಹುದು. ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಟಿ.ವಿ.ಯನ್ನು ದರೋಡೆಕೋರರು ತಮ್ಮ ಕಿಸೆಯಲ್ಲಿ ಇಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಚಿನ್ನ ಇತ್ಯಾದಿ ವಸ್ತುಗಳಾದರೆ ಗಿರವಿ ಅಂಗಡಿಗಳಲ್ಲಿ ಮಾರಾಟ ಮಾಡಬಹುದು, ಅದೇ ರೀತಿಯಲ್ಲಿ ಟಿ. ವಿ.ಯನ್ನು ಸಹ ಗಿರವಿ ಅಂಗಡಿಗಳಲ್ಲಿ ಮಾರಾಟ ಮಾಡಿಕೊಂಡು ಹೋಗಬಹುದು. ಅವರು ದರೋಡೆ ಮಾಡಿದ ಟಿ.ವಿ.ಯಿಂದ ಚಿತ್ರ ನೋಡಿಕೊಂಡು ಕುಳಿತುಕೊಳ್ಳುವುದಿಲ್ಲ. ಚಿನ್ನದ ಸರಗಳು ಇತ್ಯಾದಿ ಕಳವು ಮಾಡಿ ಗಿರವಿ ಅಂಗಡಿಯವರಿಗೆ ಮಾರಾಟ ಮಾಡಿಕೊಂಡು ಹೋಗಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ನಮಗ ಮತ್ತು ತಮಗೆಲ್ಲಾ ತಿಳಿದಿರುವ ಪ್ರಕಾರ ಟಿ. ವಿ. ಇತ್ಯಾದಿ ದೊಡ್ಡ ದೊಡ್ಡ ವಸ್ತುಗಳನ್ನು ತೆಗೆದುಕೊಂಡು ಹೋಗಲು ಅವರು ವ್ಯಾನ್ ಸಹ ತಂದಿದ್ದರೆಂದು ಪತ್ರಿಕೆಗಳಲ್ಲಿ ಬಂದಿದೆ. ಸಾಮಾನ್ಯವಾಗಿ ಅವರು ದರೋಡೆ ಮಾಡಿರುವ ಸಮಯವನ್ನು ನಾವು ಪತ್ರಿಕೆಗಳಲ್ಲಿ ನೋಡಿದಾಗ ರಾತ್ರಿ ಎರಡು ಗಂಟೆ, ಮೂರು ಗಂಟೆ ಅಥವಾ ನಾಲ್ಕು ಗಂಟೆ ಸಮಯದಲ್ಲಿ. ಆ ಸಮಯದಲ್ಲಿ ಸಾಮಾನ್ಯವಾಗಿ ಪೋಲೀಸಿನವರು ಸಹ ಗಸ್ತು ತಿರುಗುತ್ತಿರುತ್ತಾರೆ. ಸಾಮಾನ್ಯವಾಗಿ ದರೋಡೆಕೋರರು ಮನೆಗೆ ನುಗ್ಗಿ ಬರೀ ಒಂದು ಟಿ.ವಿ.ಯನ್ನೇ ತೆಗೆದುಕೊಂಡು ಹೋಗುವುದಿಲ್ಲ. ಮನೆಯಲ್ಲಿರುವ ಸಣ್ಣ ಪುಟ್ಟ ಸಾಮಾನುಗಳನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ನನಗೆ ಬಂದ ಒಂದು

ವಿವರದ ಪ್ರಕಾರ ಮೊನ್ನೆಯ ದಿವಸ ವೈಟ್‌ಫೀಲ್ಡ್‌ನಲ್ಲಿ ನಡೆದ ದರೋಡೆಗೆ ದರೋಡೆಕೋರರು ವ್ಯಾನ್ ಸಮೇತರಾಗಿ ಬಂದಿದ್ದು, ಆ ವ್ಯಾನ್ ಅನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿದ್ದರೆಂದು ತಿಳಿದುಬಂತು, ಈ ವಿಷಯ ಪತ್ರಿಕೆಗಳಲ್ಲಿ ಸಹ ಬಂದಿದೆ. ಆ ಮನೆಯ ಮಾಲೀಕರಾದಂಥ ಶ್ರೀಮಾನ್ ದಿಲೀಪ್ ಸಿಂಗ್ ರವರನ್ನು ಕೊಂದು ಹಾಕಿ ಅವರ ಮನೆಯ ಸಾಮಾನುಗಳನ್ನು ತೆಗೆದುಕೊಂಡು ವ್ಯಾನ್‌ನಲ್ಲಿ ಹಾಕಿಕೊಂಡು ಪರಾರಿಯಾಗಿದ್ದಾರೆ. ಇದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ.

ಮಧ್ಯಾಹ್ನ ೧೨-೦೦ ಗಂಟೆ

ಅವರು ವ್ಯಾನುಗಳನ್ನು ಉಪಯೋಗ ಮಾಡಿದ್ದಾರೆ. ಮೋಟಾರು ಬೈಸಿಕಲ್‌ನಲ್ಲಿ ಬಂದರು ಎಂದು ತಿಳಿದು ಬಂದಿದೆ ವಾಹನಗಳನ್ನು ದೂರ ನಿಲ್ಲಿಸಿ ಬಂದಿದ್ದಾರೆ. ಮೋಟಾರು ಬೈಸಿಕಲ್ ಮತ್ತು ವ್ಯಾನುಗಳು ಬಂದು ಹೋದವು ಎಂಬುದು ಗೊತ್ತಾಗಿದೆ. ಈ ವಿಚಾರಗಳೆಲ್ಲಾ ಪತ್ರಿಕೆಯಲ್ಲಿ ಬಂದಿದೆ. ಇಲ್ಲಿ ಇರತಕ್ಕಂಥದ್ದು. ಇವೆಲ್ಲಾ ಯಾರಿಗಾಗಿ ಉಪಯೋಗ ಮಾಡಿದ್ದಾರೆ. ಟೆಲಿವಿಷನ್ ಸೆಟ್‌ನ ಕಳವು ನಡೆದಿದೆ. ಅದರ ಜೊತೆಯಲ್ಲಿ ಅನೇಕ ಸಣ್ಣಪುಟ್ಟ ಬಂಗಾರದ ಸಾಮಾನುಗಳು ದರೋಡೆಯಲ್ಲಿ ಕಳುವಾಗಿವೆ. ಅಪಾರ್ಟ್ ಫ್ರಮ್ ಕ್ಯಾಷ್. ಇಲ್ಲಿ ನಮ್ಮ ಮುಂದಿರತಕ್ಕ ಪ್ರಶ್ನೆ, ಇಲ್ಲಿ ಎಷ್ಟು ಜನ ಬಲಿಯಾದರು ಎಂಬುದು ಅದು ಕಮ್ಮನಹಳ್ಳಿ ಇರಬಹುದು, ಅಮೃತಹಳ್ಳಿ ಇರಬಹುದು. ಮಾನ್ಯ ಬಸವಲಿಂಗಪ್ಪನವರ ಕ್ಷೇತ್ರದಲ್ಲಿ ಸುಮಾರು ೬-೭ ಕಡೆಯಲ್ಲಿ ದರೋಡೆಗಳು ನಡೆದಿದೆ ಎನ್ನುವುದು ಗೊತ್ತಿದೆ. ಮಾನ್ಯ ಕಣ್ಣನ್‌ರವರ ಕ್ಷೇತ್ರದಲ್ಲೂ ದರೋಡೆಗಳು ನಡೆದಿವೆ. ಬೆಂಗಳೂರು ಸುತ್ತ ಮುತ್ತಲೂ ಪೂರ್ತಿಯಾಗಿ ದರೋಡೆಗಳು ನಡೆದಿವೆ. ಸುಮಾರು, ಡಕಾಯಿತರೇ, ವ್ಯವಸ್ಥಿತವಾದ ಕೊಲೆ ಜಾಗವನ್ನು ಆರಿಸಿಕೊಂಡು ನಡೆಸಿದ್ದಾರೆ. ಚಿನ್ನಪ್ಪನಹಳ್ಳಿಯಲ್ಲೂ ಕೂಡ ತಮಗೆ ಗೊತ್ತಿರುವಂತೆ ಡಕಾಯಿತಿ ನಡೆದಿದೆ. ಅದು ೧೩ನೇ ತಾರೀಖು ನಡೆದಿದೆ, ೧೪-೧-೮೭ರ ಪತ್ರಿಕೆಯಲ್ಲಿ ಬಂದಿದೆ. ಭಾನುವಾರ ಮಧ್ಯರಾತ್ರಿ ಈ ಡಕಾಯಿತಿ ನಡೆದಿದೆ. ೨೦ ಸಾವಿರ ರೂಪಾಯಿ ನಗದು ಇತ್ಯಾದಿ ದೋಚಿಕೊಂಡು ಹೋಗಿದ್ದಾರೆ. ಐದು ಸಾವಿರ ಮಂದಿ ಪೋಲೀಸರ ಭದ್ರ ಕಾವಲಿದ್ದು. ನಾಕಾಬಂದಿ ಏರ್ಪಾಡು ಮಾಡಿದ್ದರೂ ಕೂಡ ಈ ನಾಲ್ಕು ದಿನಗಳಿಂದೀಚೆಗೆ ಸತತವಾಗಿ ಡಕಾಯಿತಿ ನಡೆಸುವುದರಲ್ಲಿ ಯಶಸ್ವಿಯಾಗಿದ್ದಾರೆ. ನಗರದಲ್ಲಿ ಶುಕ್ರವಾರ ಮತ್ತು ಶನಿವಾರ ನಡೆದ ಪ್ರಕರಣಗಳಲ್ಲಿ ಕಾವಲುಗಾರ ಗಾಯಗೊಂಡ ಈ ಡಕಾಯಿತಿ ಪ್ರಕರಣದಲ್ಲಿ ಇರುವವರಿಗೆ ಎಷ್ಟು ಧೈರ್ಯ ಎಂದರೆ, ಮಲಗಿರುವ ವಾಚ್‌ಮನ್ ಅವರನ್ನು ಎಬ್ಬಿಸಿ ಈ ಕೆಲಸ ಮಾಡಿದ್ದಾರೆ. ಅವನೇನಾದರೂ ತಕರಾರು ಮಾಡಿದರೂ ಕೂಡ ತಮ್ಮ ಡಕಾಯಿತಿ ಕೆಲಸವನ್ನು ಸ್ಪಷ್ಟವಾಗಿ ಮಾಡಿದ್ದಾರೆ. ಆಮೇಲೆ ಪ್ರಜಾವಾಣಿಯಲ್ಲಿ ಇದು ಬಂದಿರುವುದು. ಥಾಮಸ್ ಎನ್ನುವರ ಮನೆಯಲ್ಲಿ ನುಗ್ಗಿ, ಕಾವಲುಗಾರ ತಿಮ್ಮರಾಯಪ್ಪನನ್ನು, ಖಾಕಿ ಪ್ಯಾಂಟ್, ಅಂಗಿ ಧರಿಸಿದ್ದ ಬಂಧೂಕದಾರಿಗಳು ಎಬ್ಬಿಸಿದ್ದಾರೆ. ಆತ, ಇವರನ್ನು ಕಂಡು ಪೋಲೀಸ್ ಎಂದು ಸೆಲ್ಯೂಟ್ ಹೊಡೆದ. ಆ ಧಾಂಡಿಗ, ನಿಮ್ಮ ಯಜಮಾನರು ಯಾರು, ಮನೆಯಲ್ಲಿ ಬಂಧೂಕು ಇದೆಯೇ ಎಂದು ಪ್ರಶ್ನಿಸಿದ. ತಿಮ್ಮರಾಯಪ್ಪ, ಉತ್ತರಿಸುತ್ತಿದ್ದಂತೆಯೇ ಹಿಂದಿನಿಂದ ಇನ್ನೊಬ್ಬ ಬಂದು ಬಲವಾಗಿ ಅವನ ತಲೆಗೆ ಹೊಡೆದ. ಕೈ ಗಡಿಯಾರ ಕಸಿದುಕೊಂಡು ಅವನನ್ನು ಹಿಡಿದುಕೊಂಡೇ ಕಬ್ಬಿಣದ ಹಾರೆಗಳಿಂದ ಬಾಗಿಲನ್ನು ಒಡೆಯತೊಡಗಿದರು.

ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಅವನನ್ನು ಎಬ್ಬಿಸಿ, ಪೋಲೀಸ್ ಡ್ರೆಸ್ ಇತ್ಯಾದಿ ಹಾಕಿಕೊಂಡು ಬಂದು ಮಾಡಿರತಕ್ಕಂಥ ವಿಚಾರ. ಟೆಲಿವಿಷನ್ ಸೆಟ್ ಇತ್ಯಾದಿ ನೋಡಿದರೆ ನನಗನಿಸುತ್ತದೆ, ಡಕಾಯಿತಿ ಮಾಡುವವರು ಯಾರು ? ಡಕಾಯಿತಿ ಮಾಡುವವರು ಖಾಕಿ ಡ್ರೆಸ್ ಹಾಕಿಕೊಂಡು ಬಂದಿದ್ದಾರೆಯೋ ಅಥವಾ ಖಾಕಿ ಡ್ರೆಸ್‌ನವರು ಯಾರಾದರೂ ಸೇರಿಕೊಂಡಿದ್ದಾರೆಯೋ ? I am not charging that your police is directly invelved. That is not my intention here. But ಯಾರು ಹೊಡೆದಿರುತ್ತಾರೆ,' ಅವರು ಪೋಲೀಸ್ ಇಲಾಖೆಯ ಜನ ಎಂಬ ಭ್ರಮೆ ಬರತಕ್ಕಂಥ ರೀತಿಯಲ್ಲಿ ಇದು ನಡೆದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಈ ನಿಲುವಳಿ ಸೂಚನೆಯು ಮೂಲದಲ್ಲಿ ಕಾನೂನು ಪಾಲನೆಗೆ ಸಂಬಂಧಪಟ್ಟಿದ್ದು. ಡಕಾಯಿತಿ ಪ್ರಕರಣಗಳು ನಡೆದಿವೆ, ಸಾಕಷ್ಟು ಕ್ರಮ ತೆಗೆದುಕೊಳ್ಳದೆ ಇರತಕ್ಕಂಥ ಹಿನ್ನೆಲೆಯಲ್ಲಿ ಜನರು ಭಯಗ್ರಸ್ಥರಾಗಿದ್ದಾರೆ, ಈ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆ ತಂದು ಸಭೆಯ ಕಾರ್ಯಕಲಾಪಗಳನ್ನು ಮುಂದೂಡಿ, ಈ ವಿಷಯದ

ಮೇಲೆ ಚರ್ಚೆ ಮಾಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು, ಸದಸ್ಯರೂ ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಇದರ ಬಗೆ ಹಲವಾರು, ಹತ್ತಾರು, ನೂರಾರು ತೀರ್ಮಾನಗಳು ಈ ಸಭೆಯಲ್ಲಿ ಆಗಿವೆ. ಲಾ ಅಂಡ್ ಆರ್ಡರ್ ಕಾನೂನಿಗೆ ಸಂಬಂಧಪಟ್ಟ ನಿಲುವಳಿ ಸೂಚನೆಗಳು ಬರುವುದಿಲ್ಲ ಎಂದು ಹೇಳಿ, ಒಂದೇ ಸಮನೆ ಇದರ ಬಗ್ಗೆ ನಿರ್ಣಯಗಳು ತಮ್ಮ ಸ್ಥಾನದಿಂದ ಹೊರಬಿದ್ದಿವೆ. ಸನ್ಮಾನ್ಯ ವಿರೋಧಪಕ್ಷದ ನಾಯಕರು ಹಲವಾರು ವಿವರಗಳಿಗೆ ಹೊರಟಿದ್ದಾರೆ. ಒಂದೊಂದು ಪ್ರಕರಣಗಳ ಬಗ್ಗೆಯೂ ವಿವರವಾದ, ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ ಅವರು ಯಾವ ಹಂತದಲ್ಲಿದ್ದಾರೆ ಎಂದರೆ, ತಮ್ಮ ಮನ ಒಲಿಸುವುದಕ್ಕೆ ಈ ನಿಲುವಳಿ ಸೂಚನೆ, ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆ ಎನ್ನುವ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ತಾವು ಅನುಮತಿ ಕೊಟ್ಟಿದ್ದೀರೇನೋ ಎನ್ನುವುದು ನನ್ನ ಭಾವನೆ, ಈ ನಿಲುವಳಿ ಸೂಚನೆ ಅರ್ಹವಾಗಿದೆ. ಇದರಲ್ಲಿ ಇಂತಹ ವಿಷಯಗಳು ಇವೆ ಚರ್ಚೆಗೆ ತೆಗೆದುಕೊಳ್ಳಬಹುದು, ಎಂದು ಹೇಳಿದ ಮೇಲೆ, ಏನೇನು ಹೇಳಬೇಕೋ ಅವೆಲ್ಲನ್ನೂ ಈಗಲೇ ಹೇಳುತ್ತಿದ್ದಾರೆ. ಅದಕ್ಕೆ ಅವಕಾಶ ಇಲ್ಲ. ಅವರು ಏನು ಹೇಳಿದರೂ, ಎಷ್ಟೇ ಪ್ರಕರಣಗಳ ಬಗ್ಗೆ ಪ್ರಸ್ತಾಪ ಮಾಡಿದರೂ, ಎಷ್ಟು ವಿವರಗಳನ್ನೂ ಕೊಟ್ಟರೂ ಲಾ ಅಂಡ್ ಆರ್ಡರ್‌ಗೆ ಸಂಬಂಧಪಟ್ಟಿದ್ದು ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದಕ್ಕೆ ಅವಕಾಶ ಇಲ್ಲ. ಆದ್ದರಿಂದ ನನ್ನ ಕ್ರಿಯಾಲೋಪವನ್ನು ಎತ್ತಿಹಿಡಿಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ನಡೆದಿರತಕ್ಕಂಥ ಲೂಟಿಗಳು. ಕೊಲೆಗಳು, ಪ್ರತಿಯೊಂದರ ವಿವರಗಳನ್ನೂ ಕೊಡುತ್ತಾ ಹೋದರೆ, ಸುಮಾರು ಸಾಯಂಕಾಲದವರೆಗೂ ಕೊಡಬಹುದು. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ಮನವೊಲಿಸತಕ್ಕಂಥ ವಿಚಾರದಲ್ಲಿ ವಿವರಗಳಿಗೆ ಹೋಗುವುದಿಲ್ಲ. ಎನ್ನುವ ಮಾತನ್ನು ಪದೇ ಪದೇ ಹೇಳಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಇದು ಗೊತ್ತಿಲ್ಲ. ಕೊಲೆ, ದರೋಡೆಗಳು, ಚಿನ್ನಪ್ಪನಹಳ್ಳಿಯಲ್ಲಿ, ಕಮ್ಮನಹಳ್ಳಿಯಲ್ಲಿ ನಡೆದಿರಬಹುದು. ನಾನು ವಿವರಗಳಿಗೆ ಹೋಗುವುದಿಲ್ಲ ಎನ್ನುವ ಮಾತನಾಡಿ, ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಅಷ್ಟೇ ಅಲ್ಲ ಒಂದೊಂದು ಪ್ರಕರಣಗಳಿಗೂ ಸಾಕಷ್ಟು ವಿವರಗಳು ನಮ್ಮಲ್ಲಿವೆ ಎನ್ನುವ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ, ದಿನಾಂಕ ೧೫-೧-೮೬ ರಂದು, ಮಹಾತ್ಮಗಾಂಧಿ ರೋಡಿನಲ್ಲಿರುವ ವಜ್ರದ ಅಂಗಡಿ, ಸುಮಾರು ೫೦-೫೧ ವರ್ಷ ವಯಸ್ಸಿನ ಆಂತೋನಿ ಎಂಬ ವಾಚ್ ಮನ್ ಕೊಲೆ ಮಾಡಿ, ದರೋಡೆ ನಡೆದಿಗತಕ್ಕಂಥಾದ್ದು. ನಗರದ ಒಳಭಾಗದಲ್ಲಿಯೇ, ವಜ್ರದ ಅಂಗಡಿಯಲ್ಲಿ ಲೂಟಿ ಕೆಲಸ ನಡೆದಿದೆ. ಮಾನ್ಯ ಸಭಾಧ್ಯಕ್ಷರೇ, ನಗರದ ಹೊರ ವಲಯಗಳಲ್ಲಿ ನಡೆದಿರತಕ್ಕಂಥ ವಿಚಾರ ಒಂದು ಆದರೆ, ಇದಕ್ಕೆ ಸರ್ಕಾರ ಹೇಳಬಹುದು, ಒಂದೊಂದು ಮನೆಯಲ್ಲೂ ಕಾವಲು ಕಾಯುವುದಕ್ಕಾಗುತ್ತದೆಯೇ, ಇದು ಬಹಳ ಕಷ್ಟವಾಗುತ್ತದೆ ಎನ್ನುವ ಅಭಿಪ್ರಾಯ ಕೊಡಬಹುದು. ಆದರೆ ಯಾರು ಈ ಲೂಟಿ ಮಾಡಿದರೂ ಕೂಡ ಮೆಯಿನ್ ರೋಡಿನಿಂದ ತಪ್ಪಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಎಲ್ಲೋ ಆದರೂ ಮೆಯಿನ್ ರೋಡಿಗೆ ಬರಲೇಬೇಕಾಗುತ್ತದೆ. ಒಂದು ಟೆಲಿವಿಷನ್ ಸೆಟ್ ಹೊತ್ತುಕೊಂಡು ಹೋದರೆ ಅದು ಜನಕ್ಕೆ ಗೊತ್ತಾಗೇ ಗೊತ್ತಾಗುತ್ತದೆ, ಆದರೆ ನಗರದಲ್ಲಿ ನಡೆದಿರತಕ್ಕಂಥ ಲೂಟಿ ಮತ್ತು ಕೊಲೆಗಳ ವಿಚಾರದಲ್ಲಿ, ಮಹಾತ್ಮಾಗಾಂಧಿ ರೋಡಿನಲ್ಲಿ ಸಾಯಂಕಾಲದ ಕತ್ತಲೂ ಕೂಡ ಆಗಿಲ್ಲ. ಲೂಟಿ ಮಾಡುವ ಪ್ರಯತ್ನ ನಡೆದಿದೆ. ವಾಚ್‌ಮನ್‌ನ್ನು ಕೊಂದಿದ್ದಾರೆ. ಈ ಲೂಟಿಗೆ ಸಂಬಂಧಿಸಿದಂತೆ ಎಲ್ಲಾ ವಿವರಗಳೂ ನನ್ನ ಹತ್ತಿರ ಇವೆ. ಆದರೆ ನಾನು ವಿವರಗಳಿಗೆ ಹೋಗುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ವಿವರಗಳಿಗೆ ಹೋಗುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಾನು ಸಂಪೂರ್ಣವಾದ ವಿವರಗಳಿಗೆ ಹೋಗುವುದಿಲ್ಲ.

ಮಾನ್ಯ ಸಭಾಧ್ಯಕ್ಷರೇ, ಎಂ.ಜಿ. ರೋಡಿನಲ್ಲಿರುವ ವಜ್ರದ ಅಂಗಡಿಯಲ್ಲಿ ದಿನಾಂಕ ೧೫-೧-೧೯೮೬ ರಂದು ಲೂಟಿ ಮಾಡಿದ ಪ್ರಕರಣ ಪತ್ರಿಕೆಯಲ್ಲಿ ಬಂದಿದೆ. ಅಲ್ಲಿ ಇದ್ದಂಥ ವಾಚ್‌ಮನ್ ಸತ್ತಿದ್ದಾನೆ. ಈ ವಿಚಾರದಲ್ಲಿ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ ಆಟೋರಿಕ್ಷಾದಲ್ಲಿ ೨-೩ ಜನರು ಹೋಗುತ್ತಿದ್ದರು, ಅದರಲ್ಲಿ ಒಬ್ಬರನ್ನು ಹಿಡಿದರು ಇನ್ನಿಬ್ಬರು ಓಡಿಹೋದರು ಅನ್ನುವ ವರದಿ ಬಂದಿದೆ. ಕೊನೆಗೆ ಇದರ ಬಗ್ಗೆ ಪೋಲೀಸ್ ಕಮೀಷನರ್‌ರವರಿಂದ ಏನು ಹೇಳಿಕೆ ಬಂದಿದೆ ಎಂದರೆ ಹಿಡಿದಂಥ ವ್ಯಕ್ತಿಗೂ ಇದಕ್ಕೂ

ಯಾವ ರೀತಿಯಾದ ಸಂಬಂಧವೂ ಇಲ್ಲ ಎಂದು. ಇದರ ಅರ್ಥ ಏನು ? ಇನ್ನು ಬೆಂಗಳೂರು ನಗರದ ಸುತ್ತಮುತ್ತ ನಡೆದಿರತಕ್ಕಂಥಾ ಘಟನೆಗಳ ಬಗ್ಗೆ ಈ ತಹಲ್‌ವರೆವಿಗೂ ಸರ್ಕಾರ ಯಾವ ರೀತಿಯಾಗಿಯೂ ಯಾರನ್ನೂ ಬಂಧಿಸಿಲ್ಲದೇ ಇರುವುದು ನಿರ್ವಿವಾದ ವಿಚಾರ.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಪ್ರಕರಣಗಳ ಬಗ್ಗೆ ಹೇಳುವುದಾದರೆ ಅಲ್ಲಿ ದೊಡ್ಡ ಪ್ರಮಾಣದಲ್ಲೇ ನಡೆದಿವೆ. ಮಾನ್ಯ ಸಭಾಧ್ಯಕ್ಷರೇ, ಇದುವರೆಗೆ ಸಾಕಷ್ಟು ಪ್ರಮಾಣದಲ್ಲೇ ದರೋಡೆಗಳು ನಡೆದಿವೆ. ದಿನಾಂಕ ೫–೨–೮೭ರ ಮುಂಗಾರು ಪತ್ರಿಕೆಯಲ್ಲಿ ಹಿರಿಯಡ್ಕ ವಿಧವೆ ಮೇಲೆ ಅತ್ಯಾಚಾರ, ಹಲ್ಲೆ, ದರೋಡೆ ಅಂತ ದಪ್ಪ ಅಕ್ಷರಗಳಲ್ಲಿ ಬಂದಿದೆ. ಹಿರಿಯಡ್ಕ ಪೋಲೀಸ್ ಠಾಣೆಯಿಂದ ಅರ್ಧ ಮೈಲು ದೂರ ಕೊಪ್ಪಳ ಎಂಬಲ್ಲಿರುವ ಮನೆಯೊಂದಕ್ಕೆ ನುಗ್ಗಿ ಮನೆಯಲ್ಲಿರುವ ಕಮಲ ಸೇರಿಗಾರ್ತಿ (೩೫) ಎಂಬುವರ ಮೇಲೆ ದರೋಡೆಕಾರರು ಹಲ್ಲೆ ನಡೆಸಿದ್ದಾರೆ ಏಕಾಂಗಿ ಇರುವ ಕಮಲಮ್ಮ ಅವರನ್ನು ತಲೆ, ಕುತ್ತಿಗೆ, ಮುಖದ ಮೇಲೆಲ್ಲಾ ದೊಣ್ಣೆಯಿಂದ ಹೊಡೆದಿದ್ದಾರೆ. ಉಡುಪಿಯಿಂದ ಆಗುಂಬೆಗೆ ಹೋಗುವಾಗ, ಜಂಕ್ಷನ್ ಹತ್ತಿರ ಈ ಮನೆ ಇದೆ. ಇಷ್ಟೇ ಅಲ್ಲದೆ ೪–೨–೮೭ರ ಪತ್ರಿಕೆಯಲ್ಲಿ ಇನ್ನೊಂದು ವಿಚಾರ ಬಂದಿದೆ. ಮಂಗಳೂರಿಗೆ ೭ ಕಿಲೋಮೀಟರ್ ಇರತಕ್ಕಂಥ ಚೆಕ್‌ಪೋಸ್ಟ್ ಹತ್ತಿರ ತೊಕ್ಕೊಟಿನಲ್ಲಿರುವ ಎರಡು ಮನೆಗೆ ೪ ಮಂದಿ ಡಕಾಯಿತರು ನುಗ್ಗಿ ಅವರನ್ನು ಪಿಕಾಸಿಯಿಂದ ಹಲ್ಲೆ ನಡೆಸಿದ್ದಾರೆ. ಇಷ್ಟೇ ಅಲ್ಲದೆ ದಾರಿಯಲ್ಲಿ ಹೋಗುತ್ತಿದ್ದಂಥ ಮೆಹತಾ ಎಂಬ ಬಸ್ಸಿನಲ್ಲಿ ಸೀಟ್ ನಂಬರ್ ೪೨ರಲ್ಲಿ ಮಲಗಿದ್ದವರನ್ನು ಹೊಡೆದಿದ್ದಾರೆ, ಮತ್ತು ಕ್ಲೀನರ್‌ನ್ನೂ ಸಹ ಹೊಡೆದಿದ್ದಾರೆ. ಈ ಪತ್ರಿಕೆಯಲ್ಲಿ ಅವರ ಫೋಟೋ ಸಮೇತ ಬಂದಿದೆ. ಒಟ್ಟು ೬ ಜನರನ್ನು ದರೋಡೆ ಮಾಡಿರುವ ಪಿಕಾಸಿಯನ್ನು ಉಪಯೋಗಿಸಿರುವ ಚಿತ್ರ ಸಮೇತ ಕೊಟ್ಟಿದ್ದಾರೆ. ಸಫಿಯಾ, ಅಬ್ದುಲ್ ಅಹಮದ್ ಮತ್ತು ಒಂದು ಚಿಕ್ಕ ಮಗು ಇವರಿಗೆಲ್ಲಾ ಏಟು ಬಿದ್ದಿದೆ. ಆ ಚಿಕ್ಕಮಗುವಿನ ತಲೆಗೆ ಬ್ಯಾಂಡೇಜ್ ಕಟ್ಟಿದ್ದಾರೆ. ಈ ರೀತಿ ಅಲ್ಲಿ ೬ ಮಂದಿ ಪೆಟ್ಟು ತಿಂದಿದ್ದಾರೆ. ಇನ್ನು ಟೈಂಸ್ ಆಫ್ ಇಂಡಿಯಾದಲ್ಲಿ ವೈಟ್‌ಫೀಲ್ಡ್ ವಿಚಾರ ಬಂದಿದೆ. ಅದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆ ವಿಚಾರ ಈಗಾಗಲೇ ಗೊತ್ತಾಗಿದೆ. ಮಾನ್ಯ ಸಭಾಧ್ಯಕ್ಷರೇ, ಹಾಗೆಯೇ ಚಾಮುಂಡಿ ನಗರದಲ್ಲಿ ನಡೆದಂಥಾ ದರೋಡೆ ಬಗ್ಗೆಯೂ ತಿಳಿದೇ ಇದೆ. ಇಷ್ಟಾದಾಗೂ ಕೂಡ ಈ ಡಕಾಯಿತರನ್ನು ಹಿಡಿಯುವ ವಿಚಾರದಲ್ಲಿ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಾ ? ಈ ಡಕಾಯಿತರನ್ನು ಹಿಡಿಯುವುದಕ್ಕೆ ಪೋಲೀಸ್‌ವ್ಯಾನ್ ಹೋಯಿತು. ಆ ಪೋಲೀಸ್ ವ್ಯಾನ್ ಕೆಟ್ಟುಹೋಗಿ ಆ ವ್ಯಾನನ್ನು ೧೨–೧೨ ಜನರು ಆ ವ್ಯಾನನ್ನು ತಳ್ಳುತ್ತಿದ್ದಾರೆ, ಕೆಲವು ಜನ ಆ ವ್ಯಾನ್‌ನಲ್ಲಿ ಕೂತಿದ್ದಾರೆ. ಆ ವ್ಯಾನ್‌ಗೆ ಜೀವ ತುಂಬಬೇಕಲ್ಲಾ, ಅದಕ್ಕೆ ತಳ್ಳುತ್ತಿದ್ದಾರೆ, ನೋಡಿ ಈ ಪತ್ರಿಕೆಯಲ್ಲಿ ಅವೆಲ್ಲಾ ಬಂದಿದೆ. ಈ ಡಕಾಯಿಟ್ಸ್‌ಗಳನ್ನು ಹಿಡಿಯುವ ವಿಧಾನ ಹೇಗೆ ! ಇವರು ಯಾವ ರೀತಿಯಾಗಿ ನಿರ್ವಹಣೆ ಮಾಡುತ್ತಿದ್ದಾರೆ ಅವೆಲ್ಲಾ ಚಿತ್ರಗಳನ್ನೂ ಈ ಪತ್ರಿಕೆಯಲ್ಲಿ ಚೆನ್ನಾಗಿ ತೋರಿಸಿದ್ದಾರೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಪತ್ರಿಕೆಯವರನ್ನು ಅಭಿನಂದಿಸಬೇಕಾಗಿದೆ. ದಿನಾಂಕ ೧೨–೨–೧೯೮೭ರಂದು ಕೆ. ವೆಂಕಟಯ್ಯ ಅನ್ನುವವರನ್ನು ಡಕಾಯಿತರು ಹೋಗಿ ಹೊಡೆದಿದ್ದಾರೆ. ಇದು ಒಂದು ಚಾಮುಂಡಿ ನಗರದಲ್ಲಿ ನಡೆದ ಮತ್ತೊಂದು ಘಟನೆ. ಮಾನ್ಯ ಸಭಾಧ್ಯಕ್ಷರೇ, ಹಾಗೆಯೇ ದಿನಾಂಕ ೧೦–೨–೧೯೮೭ರ ಪತ್ರಿಕೆಯಲ್ಲಿ ಇನ್ನೊಂದು ಡಕಾಯಿತರ ಪ್ರಕರಣ ಬಂದಿದೆ. ಅಲ್ಲಿ ಥಾಮಸ್, ಮ್ಯಾಥ್ಯೂಸ್ ಅವರ ಮನೆಗಳಿಗೆ ನುಗ್ಗಿ ಏನು ದರೋಡೆ, ಲೂಟಿ ಮಾಡಿದ್ದಾರೆ. ಆ ವಿವರಗಳೂ ಕೂಡ ನನ್ನ ಹತ್ತಿರ ಇದೆ, ಈ ಬಗ್ಗೆ ಇನ್ನೂ ಬೇಕಾದಷ್ಟು ಪ್ರಕರಣಗಳ ದೊಡ್ಡ ಪಟ್ಟಿಯೇ ಇದೆ. ಅವರುಗಳು ಉಪಯೋಗಿಸತಕ್ಕಂಥಾ ಆಯುಧಗಳು ಬಂದೂಕ, ದೊಣ್ಣೆ, ಪಿಕಾಸಿ ಇವುಗಳಿಂದ ದರೋಡೆ ಕೊಲೆ ಮಾಡಿರುವ ವರದಿಗಳು ನಮಗೆ ಬಂದಿವೆ. ನಾನು ಕೇಳುತ್ತೇನೆ, ಇವಕ್ಕೆ ಸರ್ಕಾರ ಯಾವ ಕಾರ್ಯಕ್ರಮ ಹಾಕಿದೆ ? ಇವರು ಈವೊತ್ತು ನಾಕಾಬಂದಿ ಕಾರ್ಯಕ್ರಮ ಹಾಕಿದ್ದೇವೆ ಎಂದು ಹೇಳಿದ್ದಾರೆ. ಈ ನಾಕಾಬಂದಿ ಕಾರ್ಯಕ್ರಮ ಬಹಳ ಕಾಲದಿಂದಲೂ ಇದೆ, ಇದು ಇಷ್ಟು ಕಾಲದಿಂದ ಇಷ್ಟು ಕಾಲದವರೆಗೆ ನಡೆಯಬೇಕು ಅಂತ ಇದೆ. ರಾತ್ರಿ ಇಷ್ಟು ಹೊತ್ತಿನಿಂದ, ಬೆಳಿಗ್ಗೆ ಇಷ್ಟು ಹೊತ್ತಿನವರೆಗೆ ನಡೆಯಬೇಕು ಅಂತ ಇದೆ. ಈ ನಾಕಾಬಂದಿ ಕಾರ್ಯಕ್ರಮದಲ್ಲೂ ಕೂಡ ಒಬ್ಬರನ್ನೂ ಹಿಡಿದಿಲ್ಲ. ಈ ಕೊಲೆ ಸುಲಿಗೆಗಳು ಅವ್ಯಾಹತವಾಗಿ ನಡೆದುಕೊಂಡು ಬರುತ್ತಾ ಇದ್ದರೂ ಕೂಡ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ನಾನು ಸೆಂಟ್ರಲ್ ಟೀಮ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೆ. ಈ ವಿಚಾರ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆಯೇ ಇರಬಹುದು, ಬೆಂಗಳೂರು

ಸುತ್ತಮುತ್ತ ಸಂಬಂಧಪಟ್ಟ ಹಾಗೇ ಇರಬಹುದು, ಕೋಲಾರ ಜಿಲ್ಲೆಗೆ ಸಂಬಂಧಪಟ್ಟ ಹಾಗೇ ಇರಬಹುದು, ಧಾರವಾಡ ಜಿಲ್ಲೆಗೆ ಸಂಬಂಧಪಟ್ಟ ಹಾಗೇ ಇರಬಹುದು, ಮೈಸೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೇ ಇರಬಹುದು, ಇಲ್ಲವೇ ಮತ್ತೊಂದು ಜಿಲ್ಲೆಗೆ ಸಂಬಂಧಪಟ್ಟ ಹಾಗೇ ಇರಬಹುದು, ಒಂದು ವಾರದಲ್ಲೇ ಆ ಡಕಾಯಿತರನ್ನು ಹಿಡಿಯುತ್ತೇವೆನ್ನುವುದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಶ್ರೀಮಾನ್ ರಾಚಯ್ಯನವರು ಈ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಇದು ನಿಜವೋ ಸುಳ್ಳೋ ನನಗೆ ಗೊತ್ತಿಲ್ಲ. ಅವರಿಗೆ ಈ ದರೋಡೆ ಮಾಡುವವರು ಯಾರು ಎನ್ನುವುದು ಗೊತ್ತಿರಬಹುದು, ಇವರ ಹೇಳಿಕೆಯಿಂದ ಇದು ಪಕ್ಕಾ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಏನು ಹೇಳಿದ್ದಾರೆಂದರೆ ಇದರಲ್ಲಿ ರಾಜಕೀಯ ಪ್ರಚೋದನೆ ನಡೆದಿದೆ ಎಂದು. ಅವರು ಹೀಗೆ ಹೇಳಿದ ಮೇಲೆ ನಿನ್ನೆ ದಿವಸದ ಪತ್ರಿಕೆಯಲ್ಲಿ ಇನ್ನು ಒಂದು ವಾರದಲ್ಲಿ ಆ ಡಕಾಯಿತರನ್ನು ಹಿಡಿಯುವ ಕೆಲಸ ಮಾಡುತ್ತೇವೆಂದು ಬಂದಿದೆ. ಹೀಗೆ ಹೇಳಿದ ಮೇಲೆ ಇದಕ್ಕೆ ಯಾರದೋ ಹಿನ್ನೆಲೆ, ಅಥವಾ ಪ್ರಚೋದನೆ ಇರಬೇಕೆನ್ನುವುದು ಮಾನ್ಯ ಗೃಹ ಮಂತ್ರಿಗಳಿಗೆ ಗೊತ್ತಾದ ಮೇಲೆ ಈ ವಿಷಯವನ್ನು ಈ ಸದನಕ್ಕೆ ತಿಳಿಸದೆ ಕಣ್ಣುಮುಚ್ಚಿಕೊಂಡು ಈ ಕೃತಿ ಮಾಡುವುದು ಸರಿಯೇ ? ಈವೊತ್ತು ಇದರ ಬಗ್ಗೆ ವಿವರವಾಗಿ ಹೇಳಿರುವುದರಿಂದ ಮಾನ್ಯ ಮಂತ್ರಿಗಳಿಗೆ ಈ ವಿಷಯ ಗೊತ್ತಿದ್ದ ಮೇಲೆ ಇದಕ್ಕೆ ಯಾರು ಪ್ರಚೋದನೆ ಮಾಡುತ್ತಿದ್ದಾರೆ ಅನ್ನುವುದನ್ನು ಈ ಸದನಕ್ಕೆ ಬಹಿರಂಗಪಡಿಸಬೇಕು ಎಂದು ನಾನು ಅವರನ್ನು ಕೇಳುತ್ತೇನೆ.

ಅಧ್ಯಕ್ಷರು.—ತಾವು ಭಾಷಣವನ್ನು ಶುರು ಮಾಡಿ ಅರ್ಧ ಗಂಟೆಯಾಯಿತು. ಬೇಗನೆ ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಇಷ್ಟೇ ಅಲ್ಲದೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಈ ಬಗ್ಗೆ ಡಕಾಯಿಟ್ ಪ್ಯಾರಡೈಸ್ ಅಂತ ಬೇರೆ ಬಂದಿದೆ. ಡಕಾಯಿಟ್ಸ್‌ಗಳು ಈ ರೀತಿಯಾಗಿ ಸರಮಾಲೆಯಾಗಿ ಅಲ್ಲಲ್ಲಿ ಏನು ಘಟನೆಗಳನ್ನು ನಡಸುತ್ತಿದ್ದಾರೆ, ದರೋಡೆ, ಲೂಟಿ ಇವುಗಳನ್ನು ಸರಮಾಲೆಯಾಗಿ ನಡೆಸುತ್ತಾ ಇರುವುದರಿಂದ ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದೆ ಅನ್ನುವುದನ್ನು ತಿಳಿಸಬೇಕು. ಸರ್ಕಾರ ಈ ವಿಚಾರ ಏನು ಹೇಳಿಕೆ ಕೊಟ್ಟಿದೆ ಎಂದರೆ, ಏನು ಕಾರ್ಯಕ್ರಮ ಹಾಕಿಕೊಂಡಿದೆ ಅನ್ನುವುದರ ಬಗ್ಗೆ ಅವರು ಹೇಳಿರುವುದು ಈಗ ಪೋಲೀಸ್ ಸಂಖ್ಯೆ ೫ ಸಾವಿರ ಇದೆ, ಇದನ್ನು ಇನ್ನೂ ಜಾಸ್ತಿ ಮಾಡಬೇಕು ಎಂದು ಹೇಳಿಕೆ ಕೊಟ್ಟಿರುವುದು ಕಂಡುಬಂದಿದೆ. ಇಷ್ಟೇ ಅಲ್ಲದೆ ದಿನಾಂಕ ೧೮–೧ ೮೬ರ ಡೆಕನ್ ಹೆರಾಲ್ಡ್‌ನಲ್ಲಿ ಈ ಬಗ್ಗೆ ಪೋಲೀಸಿನವರಿಗೆ ಕರೆ ಕೊಟ್ಟಿದ್ದಾರೆ. ಹಾಗೆಯೇ ೧೯–೧–೧೯೮೬ರ ಕನ್ನಡ ಪ್ರಭಾದಲ್ಲಿ ಮಾಜಿ ಖೈದಿಗಳ ಮೇಲೂ ನಿಗಾ ಇಡಲಾಗಿದೆ, ಪೋಲೀಸಿನವರು ರಾತ್ರಿಯೆಲ್ಲಾ ಗಸ್ತು ತಿರುಗಲು ತೊಡಗಿದ್ದಾರೆಂದು ಹೇಳಿದ್ದಾರೆ. ಈ ಬಗ್ಗೆ ಕೇಂದ್ರ ವಲಯದ ಡಿ. ಐ. ಜಿ. ಪಿ. ಶ್ರೀ ಕೋದಂಡರಾಮಯ್ಯನವರೂ ಸಹ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆಮೇಲೆ ಪೋಲೀಸ್ ಬಗ್ಗೆ ತಾರೀಖು ೧೬–೧–೧೯೮೬ರಲ್ಲಿ ಇಂಡಿಯನ್ ಎಕ್ಸ್‌ಪ್ರೇಸ್‌ನಲ್ಲಿ ಈ ರೀತಿ ಬಂದಿದೆ. ಇದು ಹೆಗಡೆಯವರ ಹೇಳಿಕೆ. "Police Force will be strengthened Hegde—Indian Express dated 16-1-1986". "The strength of the Police force in Bangalore City will be increased to meet the growing demand of the Public-Chief Minister Ramakrishna Hegde told News-men on Wednesday". Kannada Prabha 16-1-1986..............ಎಂದು.

ನಾವು ಪೋಲೀಸ್ ಕಾವಲನ್ನು ಜಾಸ್ತಿ ಮಾಡುತ್ತೇವೆಂದು ಕೂಡ ಹೇಳಿದರು ಮತ್ತು ದರೋಡೆಯಿಂದ, ಸುಲಿಗೆಯಿಂದ ಭೀತರಾದ ಜನತೆಗೆ ಅಭಯ ವಚನವನ್ನು ನೀಡಿ ರಾಜ್ಯದ ಎಲ್ಲಾ ಜನತೆಗೆ ಅಗತ್ಯವಾದ ಭದ್ರತೆಯನ್ನು ಕಲ್ಪಿಸಲು ಸಾಧ್ಯವಾಗುವ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ. ಈ ರೀತಿ ಇವರು ಅಭಯ ವಚನ ಕೊಟ್ಟ ಮೇಲೂ ಸಾಕಷ್ಟು ದರೋಡೆ ಸುಲಿಗೆ ನಡೆದವು. ೧೪–೧–೧೯೮೬ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ರಾಚಯ್ಯನವರು "Government firm on nabbing dacoits". ಎಂದು ಹೇಳಿದ್ದಾರೆ. ಮತ್ತು "The Police have instructedthe owners to open fire arms in case they are attacked by them.

The Deputy Inspector General of Police, Sri Kodandaramaiah said on Monday that citizens are well within the law if they kill in self defence of life and property'' ಎಂದು ಹೇಳಿದ್ದಾರೆ. ತಮ್ಮ ರಕ್ಷಣೆಗಾಗಿ ಆ ಜನರನ್ನು ಗುಂಡಿಕ್ಕಿ ಕೊಲ್ಲಲು ಈಗಾಗಲೇ ಇಂಡಿಯನ್ ಪೀನಲ್ ಕೋಡಿನಲ್ಲಿದೆ. ಡಕಾಯಿತರ ಪತ್ತೆಗೆ ನಿಪುಣರ ಸೇವೆ ಬಳಕೆ ಮಾಡುತ್ತೇವೆ. ಡಕಾಯಿತಿ ಆಗಿರುವುದು ನನಗೆ ಬಹಳ ನಾಚಿಕೆಯಾಗಿದೆಯೆಂದು ಶ್ರೀಮಾನ್ ರಾಚಯ್ಯನವರು ಹೇಳಿದ್ದಾರೆ. ಅಷ್ಟೇ ಅಲ್ಲ, ನಾವು ಇದ್ದೂ ಕೂಡ ದರೋಡೆಗಾರರನ್ನು ಹಿಡಿಯುವುದಕ್ಕೆ ಆಗಿಲ್ಲವೆಂದು, ನಿನ್ನೆ ರಾತ್ರಿ ದುಗುಡ ಮನದಿಂದ ವರದಿಗಾರರಿಗೆ ಹೇಳಿದರು, ಏನೇ ಆದರೂ ಭಯಪಡಲು ಕಾರಣವಿಲ್ಲ. ದರೋಡೆಗಾರರನ್ನು ಪತ್ತೆ ಹಚ್ಚಲು ನಿಪುಣರ ಸೇವೆಯನ್ನು ಪಡೆಯಲು ನಿರ್ಧರಿಸಿದ್ದೇವೆ. ನಿವೃತ್ತರಾಗಿರುವವರ ಸೇವೆಯನ್ನು ಸಹಾ ಪಡೆಯಲಿದ್ದೇವೆಂದು ಹೇಳಿದ್ದಾರೆ. ಯಾರು ನಿಪುಣರು, ಯಾರ್ಯಾರ ಸೇವೆಯನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ನಮಗೆ ತಿಳಿಸಬೇಕು. ಅವರ ಸೇವೆಯನ್ನು ತೆಗೆದುಕೊಳ್ಳಿ. ಬೇಡವೆಂದು ಹೇಳುವುದಿಲ್ಲ. ಆದರೆ ಈ ವಿಚಾರವನ್ನು ನಮ್ಮ ಗಮನಕ್ಕೆ ತರಬೇಕು ಮತ್ತು ಈ ಸದನದ ಗಮನಕ್ಕೆ ತರಬೇಕು. ಈ ಡಕಾಯಿತರನ್ನು ಹಿಡಿದೇ ಹಿಡಿಯುವೆವು, ಪೋಲೀಸ್ ಅಧಿಕಾರಗಳ ಆಶಯ ಎನ್ನುವುದನ್ನು ಅವರು ವ್ಯಕ್ತಪಡಿಸಿದ್ದಾರೆ. ಮತ್ತೊಂದು ವಿಷಯ ಮಹಾರಾಷ್ಟ್ರದ ಪಾರ್ಧಿ ತಂಡದವರು ಸ್ಥಳೀಯ ನೆರವು ಪಡೆದ ಈ ಡಕಾಯಿತಿ ನಡೆಸುತ್ತಾ ಇರಬಹುದೆಂದು ಆಡಿಷನಲ್ ಕಮೀಷನರ ಚಂದೂಲಾಲ್ ಅಭಿಪ್ರಾಯ ಪಟ್ಟಿದ್ದಾರೆಂದು, ತಾರೀಖು ೧೪-೧-೧೯೮೩ರ ಪತ್ರಿಕೆಯಲ್ಲಿ ಬಂದಿದೆ. ಡಕಾಯಿತರ ಚಿತ್ರ ತರಲು ಮುಂಬಯಿಗೆ ಪೋಲೀಸ್ ಅಧಿಕಾರಿಗಳು ಹೋಗಿದ್ದಾರೆಂದು ೧೩-೧-೧೯೮೩ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಆದರೆ No clues yet on city dacoits. ಪೋಲೀಸರು ಇರುವಾಗ ಡಕಾಯಿತರು ಇರುವುದಿಲ್ಲ, ಡಕಾಯಿತರು ಇರುವಾಗ ಪೋಲೀಸರು ಇರುವುದಿಲ್ಲ ಎನ್ನುವ ಭಾವನೆ ಈಗಾಗಲೇ ಬಂದಿದೆ. Opposition Leader's concern over murders–T.N. Narasimha Murthy... ಈ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಟಿ. ಎನ್. ನರಸಿಂಹಮೂರ್ತಿ ಹೇಳಿದ್ದಾರೆ. ದರೋಡೆಗಳ ಹಿಂದೆ ರಾಜಕೀಯ ದುರುದ್ದೇಶ ಇದೆಯೆಂದು ಮುಂಗಾರು ಪತ್ರಿಕೆಯಲ್ಲಿ ರಾಚಯ್ಯನವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಬಹಳ ಮಹತ್ವವಾಗಿರತಕ್ಕ ವಿಚಾರ. ಇವತ್ತು ನಮ್ಮಂತೆ ಹಲವಾರು ರಾಜಕೀಯ ಪಕ್ಷಗಳು ರಾಷ್ಟ್ರದಲ್ಲಿವೆ. ಇವತ್ತು ಟಿ.ವಿ. ಸೆಟ್ಟನ್ನು ಕದ್ದುಕೊಂಡು ಹೋಗಬೇಕಾದರೆ ಚೈನನ್ನು ಕಿತ್ತುಕೊಂಡು ಹೋಗಬೇಕಾದರೆ, ಆ ಸಮಯದಲ್ಲಿ ಯುವಕರು ಸತ್ತಿರಬಹುದು, ಹೆಣ್ಣು ಮಕ್ಕಳು ಸತ್ತಿರಬಹುದು, ಗಂಡು ಮಕ್ಕಳು ಸತ್ತಿರಬಹುದು. ಇದು ಬಹಳ ದೊಡ್ಡದಾದ ವಿಚಾರ. ಸಣ್ಣ ವಿಚಾರವಲ್ಲ. ರಾಜಕೀಯ ದುರುದ್ದೇಶದಿಂದ ಎಂದರೆ ರಾಜಕೀಯದ ಅರ್ಥ ಏನು? ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರತಕ್ಕ ವ್ಯಕ್ತಿಗಳೇ ಆಗಲೀ, ಯಾರ್ಯಾರು ತೊಡಗಿದ್ದರು ಈ ಎಲ್ಲಾ ವಿವರಗಳನ್ನು ಈ ಸದನ ತಿಳಿದುಕೊಳ್ಳಬೇಕಾಗಿದೆ. ನಾನು ಹೇಳುತ್ತೇನೆ. ರಾಚಯ್ಯನವರು ಗೃಹ ಮಂತ್ರಿಯಾಗಿದ್ದಾರೆ, ಸರ್ಕಾರದ ಪರವಾಗಿ ಹಕ್ಕು ಇರತಕ್ಕವರು ಹಾಗೂ ಮಾನ್ಯತೆ ಇರತಕ್ಕವರು ನಾನು ಭಾವಿಸುತ್ತೇನೆ. ಶ್ರೀಮಾನ್ ರಾಚಯ್ಯನವರು ರಾಜಕೀಯ ದುರುದ್ದೇಶ ಈ ದರೋಡೆಯ ಹಿಂದೆ ಇದೆ ಎನ್ನತಕ್ಕ ಮಾತನ್ನು ಹೇಳಬೇಕಾದರೆ ಅವರು ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳಿದ್ದಾರೆ. ನನ್ನ ಉದ್ದೇಶ. ಈ ಮಾತನ್ನು ಈ ಸಭೆಯ ಚರ್ಚೆಗೆ ಒಳಪಡಿಸಬೇಕು. ಯಾವುದೇ ರಾಜಕೀಯ ಪಕ್ಷವಾಗಿರಬಹುದು. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಇದೆ, ಜನತಾ ಪಕ್ಷ ಇದೆ, ಸಿಪಿಎಂ ಇದೆ, ಸಿಪಿಐ ಇದೆ, ಬಿಜೆಪಿ ಇದೆ, ಸ್ವತಂತ್ರ ಪಕ್ಷ ಈ ಎಲ್ಲಾ ಪಕ್ಷಗಳು ಇವೆ, ರಾಜಕೀಯವಾಗಿ ನಾವು ಮಾತನಾಡುತ್ತೇವೆ. ನೀವು ಮಾತನಾಡುತ್ತೀರಿ. ತೀಕ್ಷ್ಣವಾದ ಮಾತುಗಳು ಸಹಾ ಇಬ್ಬರ ನಡುವೆ ಕೆಲವು ಸಾರಿ ನಡೆಯುತ್ತದೆ. ನಾವು ನಿಮ್ಮ ಮೇಲೆ ಮಾತನಾಡುತ್ತೇವೆ. ನೀವು ನಮ್ಮ ಮೇಲೆ ಮಾತನಾಡುತ್ತೀರಿ. ಆದರೆ ದರೋಡೆ ಮಾಡತಕ್ಕ ಮಟ್ಟಿಗೆ ಯೋಚನೆ ಮಾಡಿಲ್ಲ. ನಾನು ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಇಂದಿಗೂ ಕೂಡ ಈ ಮಟ್ಟಿಗೆ ಯೋಚನೆ ಮಾಡಿಲ್ಲ. ಅದೇ ರೀತಿ ಬೇರೆ ಉಳಿದಿರತಕ್ಕ ಪಕ್ಷಗಳು ಯಾರೂ ಕೂಡ ದರೋಡೆ ಮಾಡಿಸಿ, ಕೊಲೆ ಆದರೂ ಚಿಂತೆ ಇಲ್ಲ ಎನ್ನತಕ್ಕ ಮಟ್ಟಿಗೆ ಹೋಗಿಲ್ಲ. ತೋಟದಲ್ಲಿ ವಾಸ ಮಾಡತಕ್ಕ ದೀಲಿಪ್ ಸಿಂಗ್, ಮುನಿಯಪ್ಪ ಅಥವಾ ಬೇರೆ ಯಾರೋ ಮತ್ತೊಬ್ಬರು ಇರಬಹುದು. ಅವರ ಜೊತೆ ಏನು ಸಂಬಂಧ ಇರುತ್ತದೆ? ಯಾವ ರಾಜಕೀಯ ಪಕ್ಷವೂ ಅವರನ್ನು ನೋಡಿರುವುದಿಲ್ಲ. ಗೊತ್ತಿರುವುದಿಲ್ಲ. ಅಂಥಾದ್ದಗಲ್ಲಿ ಇದನ್ನು ತೆಗೆದು

ಗೊಂಡು ಹೋಗಿ ರಾಜಕೀಯ ದುರುದ್ದೇಶದಿಂದ ಕೂಡಿದೆ ಎನ್ನತಕ ಮಾತನ್ನು ಹೇಳಿದರೆ ಹೇಗೆ? ಇದರಿಂದ ಟಿ.ವಿ. ಸೆಟ್‌ಗಳನ್ನು ಕದಿಯಲಿಕ್ಕೆ ಹೇಳಿದಂತಾಗುತ್ತದೆ. ಚೈನುಗಳನ್ನು ಸಲಾಕೆಗಳನ್ನು ತೆಗೆದುಕೊಂಡು ಹೋಗಿಯೆಂದು ಹೇಳಿದಂತಾಗುತ್ತದೆ. ಪಿಸ್ತೂಲುಗಳನ್ನು ತೆಗೆದುಕೊಂಡು ಹೋಗಿ ಕೊಲ್ಲಿಯೆಂದು ಹೇಳಿದಂತಾಗುತ್ತದೆ, ಕಲ್ಲುಗಳಿಂದ ಬಾಗಿಲುಗಳನ್ನು ಒಡೆದು ಹಾಕಿಯೆಂದು ಹೇಳಿದಂತಾಗುತ್ತದೆ, ಇದು ಸಣ್ಣ ವಿಚಾರವಲ್ಲ, ಗಂಭೀರವಾದ ವಿಚಾರ. ಇದು ದೊಡ್ಡ ಅಪಾದನೆಯೂ ಕೂಡ ಹೌದು, ಬೇರೆ ರಾಜಕೀಯ ಪಕ್ಷಗಳು ಹೇಗೆ ತಿಳಿಯುತ್ತಾರೋ ಅದು ಅವರಿಗೆ ಬಿಟ್ಟದ್ದು. ಆದರೆ ನನಗೆ ಗೊತ್ತಿರುವ ಹಾಗೆ ಎಲ್ಲರು ಘನತೆ ಗೌರವದಿಂದ ರಾಜಕೀಯ ಮಾಡತಕ್ಕ ವಿಚಾರದಲ್ಲಿ, ಜವಾಬ್ದಾರಿಯಿಂದ ವರ್ತನೆ ಮಾಡುತ್ತೀರಿ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನನ್ನ ಪಕ್ಷದ ಮಟ್ಟಿಗೆ ಹೇಳುವುದಾದರೆ ಇಂತಹ ಕ್ಷುಲ್ಲಕ ಮಟ್ಟಕ್ಕೆ ನಾವು ಎಂದೂ ಕೂಡ ಇಳಿಯತಕ್ಕವರಲ್ಲ. ರಾಷ್ಟ್ರ ಮಟ್ಟದಲ್ಲಿ ವಿರೋಧ ಪಕ್ಷದ ಜವಾಬ್ದಾರಿ ನನ್ನ ಮೇಲೆ ಇದೆ. ಸಕಾರಣ ಇದ್ದಾಗ ನಾವು ಹೇಳುತ್ತೇವೆ. ನಾವು ಕೊಡತಕ್ಕ ಅಂಶದಲ್ಲಿ ಒಂದೂ ನಿಜ ಇಲ್ಲದಿದ್ದರೆ, ಒಬ್ಬರು ಸತ್ತಿಲ್ಲವೆಂದು ಹೇಳಿ, ಬಾಗಿಲು ಒಡೆದಿಲ್ಲವೆಂದು ಹೇಳಿ, ಗುಂಡು ಹಾರಿಸಿಲ್ಲವೆಂದು ಹೇಳಿ, ನಿಮಗೆ ಸುಳ್ಳು ಅಥವಾ ಸತ್ಯ ಹೇಳುವುದಕ್ಕೆ ಅಧಿಕಾರ ಇದೆ. ತಾವು ತನಿಖೆ ಮಾಡಬಹುದು. ದಕ್ಷಿಣ ಕನ್ನಡ ಜಿಲ್ಲೆ ಇರಬಹುದು, ಕೋಲಾರ ಇರಬಹುದು, ಧಾರವಾಡ ಇರಬಹುದು, ಬೆಂಗಳೂರು ಇರಬಹುದು, ಮೈಸೂರು ಇರಬಹುದು, ನಗರ ಅಥವಾ ಹೊರವಲಯ ಇರಬಹುದು. ನಿಮ್ಮಿಂದ ಈ ದರೋಡೆಯನ್ನು ತಡೆಗಟ್ಟುವುದಕ್ಕೆ ಆಗದಿದ್ದರೆ ನಿಮ್ಮ ವಿಫುಲತೆಯನ್ನು ಮಂತ್ರ್ಯೊಬ್ಬರ ಮೇಲೆ ಹೊರೆಸುವ ಈ ಒಂದು ಕಾರ್ಯವನ್ನು ತಾವು ನಿಲ್ಲಿಸಬೇಕು. ಇದರಿಂದ ಯಾರಿಗೂ ಮಾನ್ಯತೆ ಬರುವುದಿಲ್ಲ. ರಾಜಕೀಯ ದುರುದ್ದೇಶದಿಂದ ಎಂದರೆ ಈ ಮಾತು ನಾಳೆ ನಿಮ್ಮ ಪಕ್ಷಕ್ಕೂ ಅಂಟಿಕೊಳ್ಳತಕ್ಕದ್ದು. ಏಕೆಂದರೆ ಯಾವ ಪಕ್ಷ, ಯಾವ ವ್ಯಕ್ತಿಗಳು, ಯಾರು ದರೋಡೆ ಮಾಡಿಸುತ್ತಿದ್ದಾರೆ. ಈ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಈ ಸದನದ ಮುಂದೆ ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ ನಾವೆಲ್ಲರೂ ಇಷ್ಟನ್ನು ನುಂಗಿಕೊಂಡು ಕುಳಿತುಕೊಳ್ಳುವಂತಹ ರಾಜಕೀಯ ಪಕ್ಷ ನಮ್ಮದಲ್ಲ. ಬೇರೆ ರಾಜಕೀಯ ಪಕ್ಷಗಳು ಆ ರೀತಿಯಲ್ಲಿ ಎನ್ನತಕ್ಕ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇದು ಬಹಳ ಮುಖ್ಯವಾಗಿರತಕ್ಕ ವಿಚಾರ. ಇದು ಮುಂದಕ್ಕೆ ಹಾಕುವ ವಿಷಯವಲ್ಲ. ಇದಕ್ಕೆ ಉತ್ತರವನ್ನು ಈಗಲೇ ಸರ್ಕಾರದಿಂದ ನೇರವಾಗಿ ನಿರೀಕ್ಷೆ ಮಾಡುತ್ತಿದ್ದೇನೆ. ಯಾವ ರಾಜಕೀಯ ದುರುದ್ದೇಶದಿಂದ ಇದು ನಡೆದಿದೆ, ಮತ್ತು ರಾಜಕೀಯ ಅಂದ ತಕ್ಷಣ ಅದರ ಅರ್ಥ ವ್ಯಾಪ್ತಿ, ಇದು ಎಲ್ಲೆಲ್ಲಿ ಹೋಗುತ್ತದೆ, ಆ ಒಂದು ವಿಚಾರಧಾರೆ ತಮ್ಮ ಹತ್ತಿರ ಇದೆ ಎನ್ನುವ ಅಭಿಪ್ರಾಯದಿಂದ ನಾನು ಮಾತನಾಡಿದ್ದೇನೆ. ನಾನು ಇದರ ಬಗ್ಗೆ ಬೇರೆ ಪದಗಳನ್ನು ಉಪಯೋಗಿಸುವುದಕ್ಕೆ ಹೋಗುವುದಿಲ್ಲ. ನಿಮ್ಮ ಅಭಿಪ್ರಾಯವನ್ನು ಪಡೆದು ಆಮೇಲೆ ನಾವು ಏನು ಹೇಳಬೇಕು ಅದನ್ನು ಹೇಳುತ್ತೇವೆ. ಈ ಹಕ್ಕನ್ನು ಹಾಗೆಯೇ ರಿಸರ್ವ್ ಮಾಡಿಕೊಳ್ಳುತ್ತೇವೆ. ಇವತ್ತು ಇನ್‌ವೆಸ್ಟಿಗೇಷನ್ ಏನು ಮಾಡಿದ್ದೀರಿ, ತಮಗೆ ಗೊತ್ತಿರುವ ಹಾಗೆ ಹೇಳಿಕೆಗಳನ್ನು ಬಿಟ್ಟರೆ ಇನ್‌ವೆಸ್ಟಿಗೇಷನ್ ಬರೀ ಸೊನ್ನೆ. ಕೆ.ಎಚ್.ಪಾಟೀಲ್ ಅದನ್ನು ಹೇಳಬೇಕಾದರೆ ಪೂಜಿ ಇದು ಗೊತ್ತಿದೆ ಬಿಜಿ, ಧಾರವಾಡದ ಜಿಲ್ಲೆಯ ಭಾಗ. ತಿಂಗಳು ಗಟ್ಟಲೆ ಇದು ಅವ್ಯಾಹತವಾಗಿ ನಡೆದಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಜನರ ಜೀವನ, ಆರ್ಥಿಕ ರಕ್ಷಣೆ ವಿಚಾರದಲ್ಲಿ, ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಎನ್ನತಕ್ಕ ಮಾತನ್ನು ಶ್ರೀಸಾಮಾನ್ಯರು ಆಡುತ್ತಿದ್ದಾರೆ ವಿರೋಧ ಪಕ್ಷದವರು ಮಾತನಾಡುತ್ತಾರಲ್ಲ ಎನ್ನುವುದಲ್ಲ. ನಾವು ಮಾತನಾಡಿದರೂ ಕೂಡ ಬಹಳ ಜವಾಬ್ದಾರಿಯಿಂದ ಮಾತನಾಡುತ್ತೇವೆ. ಹಿಂದೆಯೂ ಕೂಡ ಕೊಲೆ ಸುಲಿಗೆ ನಡೆಯುತ್ತಾ ಇದ್ದವು, ಇಲ್ಲ ಎನ್ನುವುದಿಲ್ಲ ಆದರೆ ಈವೊತ್ತಿನ ಸಂಖ್ಯೆ ಹಿಂದೆ ಇದ್ದುದಕ್ಕಿಂತ ಜಾಸ್ತಿಯಾಗಿದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಪೋಲೀಸ್ ನಾಯಿಗಳು ಏನಾದವು? ಪರಿಣತರು ಏನಾದರೂ? ಪೋಲೀಸ್ ಇಲಾಖೆಯಲ್ಲಿರತಕ್ಕ ಐದು ಸಾವಿರ ಜನ ಪೋಲೀಸರು ಏನಾದರು? ನಿಮ್ಮ ಇಂಟಲಿಜೆನ್ಸ್ ವಿಂಗ್ ಏನು ಮಾಡುತ್ತಾ ಇದೆ? ಸರ್ಕಾರದ ಗುಪ್ತ-ದಳ ಏನು ಮಾಡುತ್ತಾ ಇದೆ? ದಕ್ಷ ವಿಚಕ್ಷಣ ಕಾರ್ಯದಲ್ಲಿ ಆದಷ್ಟು ಬೇಗ ಸಿಬ್ಬಂದಿಯನ್ನು ತೊಡಗಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

೧೨-೩೦ ಪಿ.ಎಂ.

ಈಗ ಪೋಲೀಸ್ ಇಲಾಖೆ ಏನಿದೆ ಅದು ಸಂಪೂರ್ಣವಾಗಿ ತನ್ನ ಧೈರ್ಯ, ಶಕ್ತಿಯನ್ನು ಇವತ್ತು ಕಳೆದು ಕೊಂಡಿದೆ. ಇವತ್ತು ಯಾರು ಡಕಾಯಿತರಿದ್ದಾರೆ, ಕೊಲೆ ಮಾಡಿರತಕ್ಕವರು ಯಾರಿದ್ದಾರೆ ಅವರನ್ನು ಹಿಡಿಯಂತಕ್ಕ ವಿಚಾರದಲ್ಲಿ ಪೋಲೀಸ್ ಇಲಾಖೆ ಮಲಗಿದೆ ಎಂದು ಹೇಳುವುದಿಲ್ಲ ಸತ್ತು ಸಮಾಧಿಯಾಗಿದೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಎಂದು ಹೇಳಬೇಕಾಗಿದೆ.

ಶ್ರೀ ಕೆ. ಮಲ್ಲಪ್ಪ.—ಇಲಾಖೆ ಸತ್ತು ಸಮಾಧಿಯಾಗಿದೆ ಎಂದು ಹೇಳಿದ ಮೇಲೆ ನೀವು ಯಾರಿಗೆ ಹೇಳುತ್ತೀರಿ.

ಶ್ರೀ ಎಸ್. ಬಂಗಾರಪ್ಪ.—ನಾಳೆ ನಿಮ್ಮ ಮನೆಯಲ್ಲಿ ಡಕಾಯಿತಿ ಆಗಬಹುದು, ಎಂ.ಎಲ್.ಎ. ಕಾಟ್ಟೇಜರ್ಸ್‌ನಲ್ಲಿ ಆಗಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರದ ಕೈಯಲ್ಲಿ ಕೊಲೆ ದರೋಡೆ ಮಾಡಿದವರನ್ನು ಹಿಡಿಯುವುದಕ್ಕೆ ಆಗುವುದಿಲ್ಲವೆಂದು ಮನವರಿಕೆಯಾಗಿ, ಸುಳಿವು ಕೊಟ್ಟವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಕೊಡಲಾಗುವುದೆಂದು ಸರ್ಕಾರ ಘೋಷಣೆ ಮಾಡಿದೆ.

ಅಧ್ಯಕ್ಷರು.—೪೫ ನಿಮಿಷ ಆಯಿತು, ತಾವು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ನಾನು ಆ ಪಾಯಿಂಟನ್ನು ಆ ಮೇಲೆ ಹೇಳಬೇಕೆಂದಿದ್ದೆ. ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಮೊದಲು ೨೫ ಸಾವಿರ ರೂಪಾಯಿ ಎಂದು ಪ್ರಕಟ ಮಾಡಿದರು ಆಮೇಲೆ ೫೦ ಸಾವಿರಕ್ಕೆ ಹೋಗಿ ಈಗ ಒಂದು ಲಕ್ಷದ ರೇಟನ್ನು ಮುಟ್ಟಿದೆ. ಢಕಾಯಿತರನ್ನು ಹಿಡಿದು ಕೊಟ್ಟವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿದೆ. ಈ ಸಂದರ್ಭದಲ್ಲಿ ಈ ಪಾಯಿಂಟನ್ನು ಹೇಳಿದ್ದಕ್ಕಾಗಿ ಮಾನ್ಯ ಯಡಿಯೂರಪ್ಪನವರನ್ನು ಅಭಿನಂದಿಸುತ್ತೇನೆ. ಈ ರೀತಿ ಘೋಷಣೆ ಮಾಡಿರುವುದರ ಅರ್ಥವೇನೆಂದರೆ, ಪೋಲೀಸ್ ಇಲಾಖೆಯಿಂದ ಈ ಕೆಲಸ ಸಾಧ್ಯವಿಲ್ಲ, ಪರಿಸ್ಥಿತಿ ಕೈತಪ್ಪಿಹೋಗಿದೆ ಢಕಾಯಿತರ ಮುಂದೆ ಹ್ಯಾಂಡ್ಸ್ ಅಪ್ ಆಗಿ ನಿಂತಿದ್ದೇವೆ ಪರಿಸ್ಥಿತಿ ಬಿಗಡಾಯಿಸಿದೆ, ಆದ್ದರಿಂದ ಸಾರ್ವಜನಿಕರು ಪೋಲೀಸ್ ಕೆಲಸಮಾಡಿ, ನೀವು ಸುಳಿವುಕೊಡಿ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆ ಎಂದು ಹೇಳಿದ್ದಾರೆ. ಸಾಮಾನ್ಯ ಜನರಿಗೆ ಅನುಮಾನ ಬಂದಾಗ ಕಂಡಲ್ಲಿ ಗುಂಡು ಹಾಕುವುದಕ್ಕೆ ಆದೇಶ ಕೊಡಬಹುದು. ಆದರೆ ಅವರಿಗೆ ಲೈಸನ್ಸ್ ಇಲ್ಲ. ಪೋಲೀಸರ ಹತ್ತಿರ ಸಿಕ್ಕಿಹಾಕಿಕೊಂಡರೆ ಅವರು ಉಳಿಯಬೇಕಲ್ಲ, ಬಂದೂಕು ಲೈಸನ್ಸ್ ಇವರು ಕೊಟ್ಟಿದ್ದಾರೆಯೇ. ಒಂದು ಲಕ್ಷ ರೂಪಾಯಿ ಬಹುಮಾನಕ್ಕೆ ಹೋದರೆ ಅವರ ತಲೆ ಹೋಗಬಹುದು ಎಂಬ ಅನುಮಾನ ಬಂದಿದೆ. ಅವರ ತಲೆ ಉಳಿಯುತ್ತದೆಯೋ ಎನ್ನುವ ಅನುಮಾನ ಈಗಾಗಲೇ ಬಂದಿದೆ. ಒಂದು ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆಂದು ಘೋಷಣೆ ಮಾಡಿದಾಗ ಒಂದೇ ಒಂದು ಢಕಾಯಿತಿಗೆ ಸಂಬಂಧಪಟ್ಟಹಾಗೆ ಒಬ್ಬ ವ್ಯಕ್ತಿಯ ಸುಳಿವನ್ನೂ ಕೂಡ ಪತ್ತೆ ಹಚ್ಚುವುದಕ್ಕೆ ನಿಮ್ಮಿಂದ ಆಗದೇ ಇದ್ದಾಗ, ನಿಮ್ಮ ಶ್ವಾನದಳ ಎಲ್ಲಿ ಹೋಯಿತು. ಇಂಟೆಲಿಜನ್ಸ್ ವಿಂಗ್ ಎಲ್ಲಿ ಹೋಯಿತು. ಇಂತಹ ಹೇಳಿಕೆಗಳನ್ನು ಕೊಡುವುದಕ್ಕೋಸ್ಕರ ಸರ್ಕಾರ ಇರಬೇಕೇ. ಢಕಾಯಿತರನ್ನು ಸರ್ಕಾರದಿಂದ ಹಿಡಿಯುವುದಕ್ಕಾಗದೆ ಸಾರ್ವಜನಿಕರಿಗೆ ಸುಳಿವು ಕೊಟ್ಟವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆಂದು ಘೋಷಣೆಮಾಡಿ, ನಿಮ್ಮ ಆಡಳಿತ ವಿಫಲವಾಗಿ ತುಟ್ಟತುದಿಯನ್ನು ಮುಟ್ಟುವುದಕ್ಕೋಸ್ಕರ ಕಳೆದ ಚುನಾವಣೆಯಲ್ಲಿ ಜನತೆ ನಿಮ್ಮನ್ನು ಚುನಾಯಿಸಲಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಶ್ವಾನದಳದ ನಾಯಿ ಮೂಸಿನೋಡಿ ಅದು ಹಿಡಿದು ಬಿಟ್ಟರೆ ಒಂದು ಲಕ್ಷ ರೂಪಾಯಿ ಕೊಡುತ್ತೀರಾ.

ಶ್ರೀ ಹಿಂಡಸಗೇರಿ ಅಬ್ದುಲ್ ಹಕೀಂ ಮಹಮಂದ್ ಗೌಸ್.—ಬಾಟ್ಲಿಂಗ್ ಕಾಂಟ್ರಾಕ್ಟ್ ಕೊಟ್ಟ ಹಾಗೆ ಡಕಾಯಿತರನ್ನು ಹಿಡಿಯುವುದಕ್ಕೆ ಪ್ರೈವೇಟ್‌ನವರಿಗೆ ಕಂಟ್ರಾಕ್ಟ್ ಕೊಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಬಾಟ್ಲಿಂಗ್‌ಗೆ ಕಾಂಟ್ರಾಕ್ಟ್ ಕೊಟ್ಟಹಾಗೆ ಡಕಾಯಿತರನ್ನು ಹಿಡಿಯುವುದಕ್ಕೆ ಕಾಂಟ್ರಾಕ್ಟ್ ಕೊಡಿ ಎಂದು ಹೇಳುತ್ತಾ ಇದ್ದಾರೆ. ಅದು ಒಳ್ಳೆಯ ಸಲಹೆ, ಯೋಚನೆ ಮಾಡತಕ್ಕ ಸಲಹೆ. ನಾಯಿ ಮೊದಲು ನಿಮ್ಮನ್ನು ಮೂಸಿ ನೋಡಿ ಆ ಮೇಲೆ ಆ ಕಡೆ ಬರುತ್ತದೆ.

ಅಧ್ಯಕ್ಷರು.—ಒಂದು ಗಂಟೆಯಾಯಿತು ಮುಗಿಸಿ,

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಸಂತೋಷವಾಯಿತು.

ಅಧ್ಯಕ್ಷರು.—ನಿಮ್ಮ ಸಂತೋಷವೇ ನನ್ನ ಸಂತೋಷ.

ಶ್ರೀ ಎಸ್ ಬಂಗಾರಪ್ಪ.—ಈ ಸಂದರ್ಭದಲ್ಲಿ ನಾವು ಕೇಳತಕ್ಕಂಥಾದ್ದು ಏನೆಂದರೆ, ಇಷ್ಟೊಂದು ಡಕಾಯಿತಿ, ಕೊಲೆ ನಡೆದರೂ ಸರ್ಕಾರ ಇವರನ್ನು ಹಿಡಿಯುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿರತಕ್ಕ ಸಂದರ್ಭದಲ್ಲಿ ಜನರ ಜೀವ ಹೋದರೂ ಕೂಡ ನಾವು ಪೋಲೀಸ್ ಇಲಾಖೆಯನ್ನು ನಡೆಸುತ್ತೇವೆ, ಶ್ವಾನದಳವನ್ನು ಇಟ್ಟುಕೊಳ್ಳುತ್ತೇವೆ, ಇಂಟಲಿಜನ್ಸ್ ವಿಂಗ್ ಇಟ್ಟುಕೊಳ್ಳುತ್ತೇವೆ ಎಂದು ಹೊರಟರೆ ಜನರ ಜೀವ, ಆಸ್ತಿ ರಕ್ಷಣೆ ಎಲ್ಲಿ ಉಳಿಯುತ್ತದೆ ಎನ್ನುವ ಪ್ರಶ್ನೆ ಬರುತ್ತದೆ, ಸತ್ತುಹೋಗಿರತಕ್ಕವರ ಬಗ್ಗೆ ಏನಾಯಿತು ಎನ್ನುವ ಪ್ರಶ್ನೆ ಬರುತ್ತದೆ, ಇದಕ್ಕೆ ಸರ್ಕಾರ ಉತ್ತರ ಕೊಡಬೇಕು. ಸಂಪೂರ್ಣವಾದ ಹೊಣೆಗಾರಿಕೆ ಇದ್ದರೂ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಅಪರಾಧವನ್ನು ತಪ್ಪನ್ನು ಇವತ್ತು ಸರ್ಕಾರ ಮಾಡಿದೆ ಎನ್ನುವುದನ್ನು ಸ್ಪಷ್ಟಪಸಡಿಬೇಕು. ಇದರಲ್ಲಿ ಸಂಪೂರ್ಣ ಹೊಣೆಗಾರಿಕೆ ಸರ್ಕಾರದ್ದು. ಸರ್ಕಾರದ ಸಂಪೂರ್ಣವಾದ ಬೇಜವಾಬ್ದಾರಿತನದಿಂದ, ದುರಾಡಳಿತದಿಂದ ಆ ಜನರ ಆಸ್ತಿ ಲೂಟಿ ಆಗುವುದಕ್ಕೆ ಕಾರಣವಾಯಿತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಡಕಾಯಿತಿಗೆ ಸಂಬಂಧಪಟ್ಟಹಾಗೆ ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಅನೇಕ ವಿವರಗಳಿವೆ.

ಅಧ್ಯಕ್ಷರು.—ನಿಯಮ ೫೯ರ ಪ್ರಕಾರ ಸ್ಪೆಸಿಫಿಕ್ ಮ್ಯಾಟರ್, ಅರ್ಜೆಂಟ್ ಪಬ್ಲಿಕ್ ಇಂಪಾರ್ಟೆನ್ಸ್ ಇದ್ದರೂ ಕೂಡ ನಾನು ಇದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವಕಾಶ ಕೊಟ್ಟಿದ್ದಕಾಗಿ ನಾವು ನಿಮ್ಮನ್ನು ಅಭಿನಂದಿಸುತ್ತೇನೆ. ಒಂದೊಂದು ಕೇಸಿನ ಬಗ್ಗೆಯೂ ಅನೇಕ ವಿವರಗಳಿವೆ. ಜನರೂ ಕೂಡ ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರು ಒಂದು ಮಾತನ್ನು ಹೇಳಿದರು. ಇದು ಡೇ ಟುಡೇ ಲಾ ಅಂಡ್ ಆರ್ಡರ್ ಮ್ಯಾಟರ್ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಆಡಿದರು. ಮಾನ್ಯ ಸಭಾಧ್ಯಕ್ಷರೆ, ಡಕಾಯಿತಿ ನಡೆದು ಜನ ಸತ್ತರೂ ಕೂಡ, ಡಕಾಯಿತಿ ನಡೆದರೂ ಕೂಡ ಈ ಇಲಾಖೆ ಮಲಗಿಕೊಂಡರೂ ಕೂಡ. ಇದು ಸಂಪೂರ್ಣವಾಗಿ ಲಾ ಅಂಡ್ ಆರ್ಡರ್ ದೃಷ್ಟಿಯಿಂದ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ಸರ್ಕಾರ ಪ್ರತಿಪಾದನೆ ಮಾಡುತ್ತಾ ಹೋದರೆ ಹಾಗಾದರೆ ಸರ್ಕಾರ ಡಕಾಯಿತಿಗಳು ನಡೆಯಬಹುದು, ಜನ ಸಾಯಬಹುದು ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದ ಹಾಗೆ ಕಾಣುತ್ತದೆ. ಈ ಸಂದರ್ಭದಲ್ಲಿ ನಾನು ಈ ವಿಷಯವನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ. ದಯವಿಟ್ಟು ಪ್ರತಿಯೊಂದು ಪ್ರಕರಣದ ಬಗ್ಗೆ ಯಾವರೀತಿ ಕಾರ್ಯಕ್ರಮ ಸರ್ಕಾರ ಹಾಕಬೇಕಾಗುತ್ತದೆ ಎನ್ನುವುದರ ಬಗ್ಗೆ ನಾವು ಸಲಹೆಗಳನ್ನು ಸರ್ಕಾರಕ್ಕೆ ಕೊಡೋಣ. ಅದಕ್ಕಾಗಿ ಚರ್ಚೆ ಅತೀ ಅಗತ್ಯ. ಪ್ರತಿಯೊಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಹಲವಾರು ವಿವರಗಳಿವೆ. ಜನರೂ ಕೂಡ ಕೊಟ್ಟಿದ್ದಾರೆ. ಈ ಡಕಾಯಿತಿ ಮತ್ತು ಕೊಲೆಗಳಿಂದ ಇವತ್ತು ಕರ್ನಾಟಕ ರಾಜ್ಯದ ಜನ ಭಯಭೀತರಾಗಿದ್ದಾರೆ. ಸಾಯಂಕಾಲ ಆದಮೇಲೆ ಯಾರೂ ಹೊರಗಡೆ ಹೋಗುತ್ತಿಲ್ಲ, ಇದರ ಬಗ್ಗೆ ಅನುಮಾನ ಬೇಕಾಗಿಲ್ಲ. ಈ ಡಕಾಯಿತಿಗಳನ್ನು ಏನು ಮಾಡಿದ್ದಾರೆ ಇದನ್ನು ನೋಡಿದಾಗ, ಒಂದು ಸಾರಿ ಮಾಡಿ ಎರಡು ದಿವಸ, ಮೂರು ದಿವಸ ಬಿಟ್ಟು ಮತ್ತೆ ಮಾಡಿದ್ದಾರೆ. ಡಕಾಯಿತಿ ಮಾಡಿಗತಕ್ಕ ತಾರೀಖು, ಘಟನಾವಳಿಗಳ ಸರಮಾಲೆಯನ್ನು ಅಭ್ಯಾಸಮಾಡಿದಾಗ ಈ ವಿಷಯ ಸ್ಪಷ್ಟವಾಗಿ ನಮ್ಮ ಗಮನಕ್ಕೆ ಬರುತ್ತದೆ. ಕೆಲವು ವಿವರಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಈ ವಿಷಯದ ಬಗ್ಗೆ ಚರ್ಚೆಗೆ ಅನುವು ಮಾಡಿಕೊಡಬೇಕು. ಈ ವಿಚಾರದಲ್ಲಿ ಪಕ್ಷ ಪಂಗಡಗಳ ಪ್ರಶ್ನೆಯಿಲ್ಲ. ದಯವಿಟ್ಟು ಇದು ಪಕ್ಷಾತೀತವಾಗಿ ನೋಡತಕ್ಕ ವಿಚಾರ. ಎಲ್ಲರ ಮನಸ್ಸಿಗೂ ನೋವಾಗಿರತಕ್ಕ ವಿಚಾರ. ಸಾರ್ವಜನಿಕರ ಪ್ರಾಮುಖ್ಯತೆ ಪಡೆದಿರತಕ್ಕ ವಿಚಾರ. ಇದು ಚರ್ಚೆಗೆ ಎಲ್ಲಾ ವಿಶೇಷ ಗುಣಗಳನ್ನು ಹೊಂದಿದೆ. ನಿಯಮ ೫೯, ೬೦, ೬೧ರ ಪ್ರಕಾರ ಸಂಪೂರ್ಣವಾಗಿ ಗುಣ ವಿಶೇಷಗಳನ್ನು ಹೊಂದಿದೆ. ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ಆಶಿಸಿ, ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾ ಲೋಪ. ಅದೇನೆಂದರೆ ೨೧ನೇ ತಾರೀಖು ನಿಲುವಳಿ ಸೂಚನೆ ಬಗ್ಗೆ ನೋಟೀಸ್ ಕೊಟ್ಟಿದ್ದೆ. ನನಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಈಗ ಅವಕಾಶ ಕೊಡಬೇಕು.

ಅಧ್ಯಕ್ಷರು,—ಈಗ ಅದಕ್ಕೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ತಾವು ದಯಮಾಡಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ ವೀರಪ್ಪಮೊಯಿಲಿ.—(ಕಾರ್ಕಳ) ಸನ್ಮಾನ್ಯ ಅಧ್ಯಕ್ಷರೆ, ಈಗ ನಮ್ಮ ನಾಯಕರು ಮತ್ತು ಅನೇಕ ಮಂದಿ ಸದಸ್ಯರು ಬೆಂಗಳೂರು, ದಕ್ಷಿಣ ಕನ್ನಡ ಹಾಗೂ ರಾಜ್ಯದ ಇನ್ನುಳಿದ ಪ್ರದೇಶಗಳಲ್ಲಿ ಯಾವ ಒಂದು ಡಕಾಯಿತಿ ಹಾವಳಿಯಿಂದ ಸಾರ್ವಜನಿಕರು ತತ್ತರಿಸಿದ್ದಾರೆ. ಎನ್ನುವ ವಿಚಾರದಲ್ಲಿ ಮಾತನಾಡಲು ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ಈ ಬಗ್ಗೆ ತಮ್ಮ ಮನವೊಲಿಸಲಿಕ್ಕೆ ಸಾಕಷ್ಟು ಪರಿಣಾಮಕಾರಿಯಾಗಿ ನಮ್ಮ ನಾಯಕರು ಪ್ರಯತ್ನ ಮಾಡಿದ್ದಾರೆ. ಈ ನಿಲುವಳಿ ಸೂಚನೆ ಸ್ವೀಕಾರ ಮಾಡತಕ್ಕಂತಹ ಸಂದರ್ಭದಲ್ಲಿ ಸಹಜವಾಗಿ ಕೆಲವು ಮೂಲಭೂತವಾದಂತಹ ಪ್ರಶ್ನೆಗಳನ್ನು ಟ್ರೆಜರಿ ಬೆಂಚ್‌ನವರು ಎತ್ತಿದ್ದಾರೆ ತಾವುಕೂಡ ಸೂಕ್ಷ್ಮವಾಗಿ ತಿಳಿಸಿದ್ದೀರಿ. ಇದಕ್ಕೆ ಕೆಲವು ಸೀಮಿತ ರೇಖೆಗಳು ಇವೆ ಅದರ ಪ್ರಕಾರ ನಡೆಯಬೇಕೆಂದು ತಾವು ಅಪ್ಪಣೆ ಕೊಡಿಸಿದ್ದೀರಿ. ನಮ್ಮ ಕಾನೂನು ಮತ್ತು ಸಂಸದೀಯ ಸಚಿವರೂ ಕೂಡ ಈ ಬಗ್ಗೆ ನಮಗೆ ಮಾರ್ಗದರ್ಶನವನ್ನು ಕೊಟ್ಟಿದ್ದಾರೆ. ಈಗ ಪ್ರಾಮುಖ್ಯವಾದಂತಹ ಮತ್ತು ಗುಣ ವಿಶೇಷಗಳಿಂದ ಕೂಡಿದ ಈ ವಿಷಯಗಳು ಈ ನಿಲುವಳಿ ಸೂಚನೆಯಲ್ಲಿದೆ. ಇದು ನಿರ್ದಿಷ್ಟವಾದಂತಹ, ಡೆಫನೆಟ್ ಆಗಿರಕ್ಕಂತಹ ಡಕಾಯಿತಿ ವಿಚಾರ ಇದರಲ್ಲಿದೆ ವಿಚಾರ ಎರಡು ತಿಂಗಳಿನಿಂದ ಕರ್ನಾಟಕ ರಾಜ್ಯದಲ್ಲಿ ಸತತವಾಗಿ ನಡೆದುಕೊಂಡು ಬಂದಿದೆ. ನಾವು ಈ ವಿಚಾರದಲ್ಲಿ ಮಾತ್ರ ಮಾತನಾಡುತ್ತೇವೆಯೇ ಹೊರತು ಬೇರೆ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ತಮಗೆ ಮನದಟ್ಟು ಮಾಡಬೇಕೆಂದು ನಾವು ಈ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ. ಮಂಗಳೂರಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮–೯ ಪ್ರಕರಣಗಳು ನಡೆದಿದೆ. ಬೆಂಗಳೂರಿನಲ್ಲಿ ಸುಮಾರು ೬–೭ ಪ್ರಕರಣಗಳು ನಡೆದಿದೆ. ಹರಿಹರದಲ್ಲಿ ಒಂದು ಪ್ರಸಂಗ ನಡೆದಿದೆ. ಇದಕ್ಕೆ ಸೀಮಿತವಾಗಿ ನಿಲುವಳಿ ಸೂಚನೆ ಇರತಕ್ಕಂಥಾದ್ದು ನಾವು ಇಲ್ಲಿ ಕಾನೂನು ವ್ಯವಸ್ಥೆಗೆ, ಕ್ರೈಮಿಗೆ ಬರತಕ್ಕಂತಹ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ವಿಚಾರ ಪ್ರಸ್ತುತವೂ ಅಲ್ಲ. ಮಾನ್ಯ ಗೃಹ ಸಚಿವರ ಬೇಡಿಕೆ ಬಂದಾಗ ವಿಸ್ತಾರವಾಗಿ ವಿಶ್ಲೇಷಣೆ ಮಾಡುತ್ತೇವೆ ಕಾನೂನಿಗೆ ಸಂಬಂಧಪಟ್ಟಿದ್ದನ್ನು, ಲಾ ಅಂಡ್ ಆರ್ಡರ್‌ಗೆ ಸಂಬಂಧಪಟ್ಟಿದ್ದನ್ನು, ಇದು ಅದಕ್ಕೆ ಸಂಬಂಧಪಟ್ಟಿದ್ದಲ್ಲ. ಇದು ಬಹಳ ವಿಶಿಷ್ಟವಾದಂತಹ ಮತ್ತು ಇಡೀ ಕರ್ನಾಟಕ ರಾಜ್ಯ ತಲ್ಲಣಗೊಳಿಸುವಂತಹ ಒಂದು ಪ್ರಮುಖವಾದಂತಹ ಡಕಾಯಿತಿ ಪ್ರಕರಣ ನಡೆದಿದೆ ಇದು ಸಾರ್ವಜನಿಕ ಪ್ರಮುಖವಾದಂತಹ ವಿಚಾರ. ತಾವೂ ಕೂಡ ಹೊರಗಡೆ ರಾಜಕಾರಣಗಲ್ಲದೇ ಬಾಕಿಯವರ ಸಂಪರ್ಕವನ್ನು ಸಹ ಬೆಳೆಸುತ್ತೀರಿ. ನಮ್ಮನಮ್ಮ ಕ್ಷೇತ್ರಕ್ಕೆ ಹೋದಾಗ ಅನೇಕ ಜನ ಬುದ್ಧಿಜೀವಿಗಳು, ಜನಸಾಮಾನ್ಯರು. ಅವರು ಹಳ್ಳಿಯಲ್ಲೇ ಇರಬಹುದು ಇಲ್ಲವೇ ಪೇಟೆಯಲ್ಲೇ ಇರಬಹುದು, ಎಲ್ಲರೂ ಹೇಳುವುದು ಏನೆಂದರು ಇಡೀ ರಾಜ್ಯದಲ್ಲಿ ನಮಗೆ ನಿದ್ದೆ ಮಾಡುವುದಕ್ಕೆ ಆಗುತ್ತಿಲ್ಲ ದಿನ ಬೆಳಗಾದರೆ ಡಕಾಯಿತಿ ನಡೆಯುತ್ತಿದೆ ಯಾರನ್ನೂ ಹಿಡಿದಿಲ್ಲ ಇಂತಹ ಡಕಾಯಿತ ಪ್ರಸಂಗ ಬಿಟ್ಟು ತಾವು ಅಸೆಂಬ್ಲಿಯಲ್ಲಿ ಚರ್ಚೆ ಮಾಡಲು ಬೇರೆ ಸಾರ್ವಜನಿಕ ಹಿತಾಸಕ್ತಿಯ ವಿಚಾರ ಏನಿದೆ ಎಂದು. ಈ ಪ್ರಶ್ನೆಯನ್ನು ಎಲ್ಲರಿಗೂ ಹಾಕುತ್ತಿದ್ದಾರೆ. ವಿರೋಧ ಪಕ್ಷದವರಿಗೆ ಮಾತ್ರವಲ್ಲ, ತಮ್ಮನ್ನೂ ಕೇಳುತ್ತಿದ್ದಾರೆ. ಇದನ್ನು ಯಾರೂ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದು ಸಾರ್ವಜನಿಕರ ಗಮನ ಸೆಳೆದಿದೆ. ಸಾರ್ವಜನಿಕರು ಇದರಿಂದ ತತ್ತರಿಸಿಹೋಗಿದ್ದಾರೆ The Legislators have been found guilty of their slackness for having not discussed this subject with seriousness. ಇದನ್ನು ನಾವು ಒಪ್ಪಬೇಕು. ನಾವು ಈ ಸದನದಲ್ಲಿ ಜನಗಳ ಪ್ರತಿನಿಧಿಯಾಗಿ ಆರಿಸಿ ಬಂದ ಮೇಲೆ ಈ ಒಂದು ಲೋಪ ನಮ್ಮಿಂದ ಮತ್ತು ನಿಮ್ಮಿಂದಲೂ ಆಗಿದೆ. I think we must confess that. ನಂತರ ಅನೇಕ ರಾಜಕಾರಣದ ಬೆಳವಣಿಗೆಗಳು ಇರಬಹುದು; ಸರ್ಕಾರದ ವಿಚಾರ, ಇನ್ನೂ ಅನೇಕ ವಿಚಾರಗಳು ಬಂದಿರಬಹುದು. ಆದರೆ ನಾವು ಈ ಸದನಕ್ಕೆ ಪ್ರವೇಶ ಮಾಡಿದಕೂಡಲೇ ಈ ವಿಚಾರವನ್ನು ಎತ್ತಬೇಕಿತ್ತು. ನಾವು ಎತ್ತಲಿಲ್ಲ. It must be of a recent occurence. ಇದು ಜನವರಿ ಆರನೇ ತಾರೀಖಿಗೇ ಮುಗಿದಿಲ್ಲ

ಈಗಲೂ ನಡೆಯುತ್ತಿದೆ, ಇವತ್ತಿಗೂ ನಡೆದಿದೆ. ಇವತ್ತಿಗೂ ಸ್ಪಾಟ್ ವಿಸಿಟ್ ಮಾಡಿ, ದಕ್ಷಿಣ ಕನ್ನಡ ಜಿಲ್ಲೆಗೇ ಬನ್ನಿ ಇಲ್ಲವೇ ಬೆಂಗಳೂರಿನ ಹೊರ ವಲಯಕ್ಕೆ ಹೋಗಿ ರಾತ್ರಿ ಪ್ರಯಾಣ ಮಾಡಿ ನೋಡಿ. ಅಲ್ಲಿ ಜನರು ಮನೆಯಲ್ಲಿ ನಿದ್ದೆ ಮಾಡುತ್ತಿಲ್ಲ. ೨-೩ ದಿವಸದ ಹಿಂದೆ ಆಯಿತು. Dacoities are going on continuously will to-day The possibility is that even to day night they may stricke somewhere or the other side. ಇವತ್ತು ರಾತ್ರಿ ನಾನೇ ಸ್ವತಃ ಹೋಗಿ ನೋಡುತ್ತೇನೆಂದು ಹೇಳಿ, ಸಾರ್ವಜನಿಕ ಮನೆಗಳಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ ಇವರು ಹೋಗಿ ನೋಡುತ್ತಾರೆಂದು ನೋಟೀಸ್ ಕೊಟ್ಟರೆ, ಡಕಾಯಿತಿ ನಡೆಯುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.-ನಮ್ಮ ಊರಿಗೆ ಟೆಲಿಫೋನ್ ಮಾಡಿ ಎಲ್ಲ ಮನೆಗಳಲ್ಲಿ, ಹಳ್ಳಿಗಳಲ್ಲಿ ಪರಿಸ್ಥಿತಿ ಹೇಗಿದೆಯೆಂದು ವಿಚಾರಿಸಿದೆ ನಮ್ಮ ಕಡೆ ಹತ್ತಿರದಲ್ಲಿ ಮನೆಯಿಲ್ಲ ಒಂದು ಮನೆಗೂ ಇನ್ನೊಂದು ಮನೆಗೂ ಸುಮಾರು ಒಂದು ಫರ್ಲಾಂಗ್ ದೂರ ಇರುತ್ತದೆ. ರಾತ್ರಿ ಮನೆಗೆ ಬೀಗ ಹಾಕಿ ಬಯಲಿಗೆ ಬಂದು ಎಲ್ಲರೂ ಮಲಗಿದ್ದಾರೆ. Even now, they are sleeping in Groups. Is it not a matte of recent occurence ಮನೆಗೆ ಬೀಗ ಹಾಕಿ ಒಂದು ಮೈದಾನದಲ್ಲಿ ಮಲಗಿದ್ದಾರೆ, ಇದು ಪ್ರಾಮುಖ್ಯ ಅಲ್ಲವೇ? ಹೀಗಾದರೆ ಅವರ ಗತಿ ಏನಾಗಬೇಕು, ಮನೆಯಲ್ಲಿ ಸಾಮಾನು ಹೋಗಲಿ. ನಮ್ಮ ಮಕ್ಕಳದು ತಾಯಂದಿರದ್ದು ಪ್ರಾಣ, ಮಾನವಾದರೂ ಉಳಿಯಲ್ಲಿ. ಈಗಲೂ ಕೂಡ ಗ್ರೂಪ್ ಬೈ ಗ್ರೂಪ್ ಮಾಡಿಕೊಂಡು ಜನರು ಮೈದಾನದಲ್ಲಿ ಮಲಗುತ್ತಿದ್ದಾರೆ. Even now they are sleeping in groups on the ground Are you notgoing to send them back to to their houses ರಾತ್ರಿ ಮನೆಯಲ್ಲಿ ಹೆಂಗಸರಾದವರು, ಮಕ್ಕಳಾದವರು ಮುದುಕರು ಮಲಗುತ್ತಾರೆ. ಗಂಡಸರು ದೊಣ್ಣೆ ಇಟ್ಟುಕೊಂಡು ಅವರನ್ನು ಕಾಯುತ್ತಿದ್ದಾರೆ. This is happenin- every night as on to-day. ಇದು ಪ್ರತಿದಿನ ರಾತ್ರಿ ನಡೆಯುತ್ತಿದೆ. ಬಾಕಿ ಯುವಕರೆಲ್ಲಾ ತಿರುಗುತ್ತಿದ್ದಾರೆ. ಅವರಿಗೆ ರಾತ್ರಿಯೆಲ್ಲಾ ನಿದ್ದೆಯಿಲ್ಲ. Sir can you not term it as a matter of recent occurrence ? I think on your own, you should have directed us that this is the most important subject. ತಾವು, ಕೇಳಿರಬಹುದು ಅನೇಕ ಸಂದರ್ಭದಲ್ಲಿ ಲೋಕ ಸಭೆಯಲ್ಲಿ ಹೇಳಿದ್ದಾರೆ. In the Lok Sabhar the Speaker asserted and said that this is the most important subject and as such I permit to discuss about it. It is a matter of that public importance which has been agitating every minute and minute and day in and day out. It is matter of recent occurreace. It is of great public importance. ಎಂದು ಒಂದು ದಿವಸ ಬಾಕಿ ಬಿಜಿನೆಸ್ ಮಾಡದಿದ್ದರೆ ಏನೂ ಆಗುವುದಿಲ್ಲ. ಎಲ್ಲ ವಿಚಾರವನ್ನೂ ಚರ್ಚೆ ಮಾಡೋಣ. ನಾವು ಚರ್ಚೆ ಮಾಡುವುದು ವಿರೋಧ ಪಕ್ಷದವರ ತೃಪ್ತಿಗೆ ಅಲ್ಲ. ಸಂಕುಚಿತವಾದಂತಹ ಒಂದು ಭಾವನೆಯಲ್ಲಿ ಈ ವಿಚಾರವನ್ನು ತರಬಾರದು. ಏಕೆಂದರೆ, ಇದರ ಬಗ್ಗೆ ಇಡೀ ಕರ್ನಾಟಕ ರಾಜ್ಯದವರ ದೃಷ್ಟಿ ಇದೆ. They look to this House for inspiration, and confidence. ಅವರ ಜೀವನದಲ್ಲಿ ಒಂದು ರೀತಿಯ ಭರವಸೆ ಬೇಕು, ಮಾನಸಿಕವಾದಂಥ ಒಂದು ದೊಡ್ಡ ಆಘಾತ ಇದೆ. You must have heard that some of them even got diarrhea because of phychosis fear. ಈ ವಿಷಯ ಪತ್ರಿಕೆಯಲ್ಲಿ ಅನೇಕ ಸಂದರ್ಭದಲ್ಲಿ ಬಂದಿದೆ. ಅನೇಕರು ಸಿಕ್ ಆಗಿದ್ದಾರೆ. ಇಂಥಾದ್ದು ಇರುವಾಗ We must not discuss it for the sake of Opposition or for Treasury Benches. ಟ್ರೆಜರಿ ಬೆಂಚ್‌ಗೆ ಹೇಳತಕ್ಕದ್ದು ಅಲ್ಲ. The House will be one in inspiring the confidence in the agitating minds of the people. ಇವತ್ತು ಪ್ರಮುಖವಾದ ಕರ್ತವ್ಯ ಮಾಡಬೇಕಾಗಿದೆ. Though late, I must confess that, it is late. ಆದರೆ, But it should be never. ಇವತ್ತು ಇಲ್ಲಿ ಚರ್ಚೆಯಾಗಬೇಕು. ಸಾರ್ವಜನಿಕ ಜನರಲ್ಲಿ ಕಲುಷಿತವಾಗಿರತಕ್ಕ ಈ ಮಾನಸಿಕ ಸ್ಥೈರ್ಯವನ್ನು ಪುನಃ

ಎತ್ತಿ ಹಿಡಿಯುತಕ್ಕ ಕೆಲಸವನ್ನು ಈ ಸದನದಲ್ಲಿ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. You have been going round Dakshina Kannada District. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಘಟನೆಗಳು ನಡೆದಿದೆ. ಘಟನೆಗಳು ನಡೆದ ಪ್ರದೇಶಕ್ಕೆ ಗೃಹಸಚಿವರು ಹೋಗಿ ಬಂದಿದ್ದಾರೆ. ಇವತ್ತಿನ ದಿವಸ ಈ ಸದನದಿಂದ ಹೋಗತಕ್ಕಂಥ ಸದಸ್ಯರಿಗೆ ನಿಮ್ಮ ಭರವಸೆ ಏನು ನಿಮ್ಮ ಸಂದೇಶ ಏನು ಅನ್ನುವುದು ಕರ್ನಾಟಕ ರಾಜ್ಯದಲ್ಲಿರತಕ್ಕ ಜನರಿಗೆ ಮುಟ್ಟಬೇಕು. ಇದರ ಬಗ್ಗೆ ಬೆಳಗ್ಗೆಯಿಂದ ಸಂಜೆಯುವರೆಗೆ ಚರ್ಚೆಯಾಗಲಿ. This is a matter of utmost importance. ಇದರಲ್ಲಿ ಅರ್ಜೆನ್ಸಿ ಇಲ್ಲ ಎಂದು ತಳ್ಳಿಹಾಕುವ ಕೆಲಸವನ್ನು ಮಾಡಿದರೆ ಜನರು ಏನು ತಿಳಿದುಕೊಳ್ಳುತ್ತಾರೆ. if this matter......

ಅಧ್ಯಕ್ಷರು.—ತಾವು ಇಫ್ ಎನ್ನುವ ಪದವನ್ನು ತೆಗೆಯಿರಿ. ದಯುವಿಟ್ಟು ಆ ಮಾತು ಆಡಬೇಡಿ. ಈಗ ನಿಮ್ಮ ವಾದ ಏನು ಅಂದರೆ ಇಷ್ಟಕ್ಕೆಲ್ಲಾ ಅವಕಾಶ ಕೊಡಬಾರದು ಎಂದು ಅನ್ನುವುದು.

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೆ, ತಮ್ಮ ಬಗ್ಗೆ ಸಂಪೂರ್ಣ ವಿಶ್ವಾಸ ಇದೆ. ಭರವಸೆ ಇದೆ. ಆ ಕಾನ್‌ಫಿಡೆನ್ಸ್ ಇಟ್ಟುಕೊಂಡು ಇಷ್ಟು ಧೈರ್ಯದಿಂದ ಮಾತನಾಡುತ್ತಿದ್ದೇನೆ. ಆದ್ದರಿಂದ, ಇದು ನಮ್ಮ ಒಳಗಿನ ಪ್ರಶ್ನೆ ಅಲ್ಲ. ವ್ಯಾಪಕವಾದಂಥ ಪ್ರಕರಣಗಳು ನಡೆದಿದೆ. ಇದು ಸಾರ್ವಜನಿಕರ ಪ್ರಶ್ನೆ. ಆದ್ದರಿಂದ ಇದರ ಬಗ್ಗೆ ಇವತ್ತು ಚರ್ಚೆಯಾಗಬೇಕು ನಮ್ಮ ಕರ್ನಾಟಕ ರಾಜ್ಯದ ಜನತೆಯ ಹಿತ ದೃಷ್ಟಿಯಿಂದ ಚರ್ಚೆಯಾಗಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಈ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ನಾನು ಬಹಳ ವ್ಯಾಖ್ಯಾನ ಮಾಡುವುದಿಲ್ಲ. ಅಡ್ಜರ್ನ್‌ಮೆಂಟ್ ಮೋಷನ್ ಪ್ರಾಮುಖ್ಯತೆಯ ಬಗ್ಗೆ ಗಂಟೆಗಟ್ಟಲೆ ಮಾತನಾಡಬಹುದು, ಅದರಿಂದ ಸರ್ಕಾರ ಏನೂ ಉರುಳಿ ಹೋಗುವುದಿಲ್ಲ ಆದರೆ The very purpose of the adjournment motion gets frustrated. ಇದು ಬಹಳ ಪ್ರಾಮುಖ್ಯವಾದಂಥ ಅಡ್ಜರ್ನ್‌ಮೆಂಟ್ ಮೋಷನ್; ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಮುಖವಾದಂಥ ವಿಷಯುವನ್ನು ಗಂಭೀರವಾಗಿ ಪರಿಗಣನೆಗೆ ತಂದು ಅದರ ಬಗ್ಗೆ ಜನತೆಯ ಮುಂದೆ ಇಡಬೇಕಾಗುತ್ತದೆ. This is a very serious matter. ಈ ಹಿನ್ನಲೆಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಈ ಒಂದು ಆಡಳಿತದಲ್ಲಿ ಇದರ ಬಗ್ಗೆ ವ್ಯಾಪಕವಾದ ಪರಿಸ್ಥಿತಿ ಏನು ಅನ್ನುವ ಹಿನ್ನೆಲೆಯಲ್ಲಿ ನಾವು ಒಂದು ಇನ್‌ಸಿಡೆಂಟ್ ನೋಡಬೇಕಾಗಿದೆ. ಮತ್ತೊಂದು ಕಡೆ ಪೋಲೀಸರು ಹೋಗಿದ್ದಾರೆ, ಇಷ್ಟಕ್ಕೆ ಸೀಮಿತವಾಗಿ ಈ ವಿಚಾರವನ್ನು ಪರಿಗಣನೆಗೆ ನಾವು ಇಡಬಾರದು. We need not look into the matter individually. The incident will have to be looked with the background of the whole State administration. ಡಕಾಯತ್ ವಿಚಾರದಲ್ಲಿ ಆಡಳಿತ ಹೇಗೆ ನಿರ್ವಹಿಸಬೇಕಾಗಿದೆ, ಎಷ್ಟು ಪರಿಣಾಮಕಾರಿಯಾಗಿ ನಿಭಾಯಿಸಬೇಕು ಇದರ ಬಗ್ಗೆ ಪರಿಗಣನೆಗೆ ತೆಗೆದುಕೊಂಡು ಯೋಚನೆ ಮಾಡ ಬೇಕಾಗುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್ ವಿಚಾರದ ಬಗ್ಗೆ ಚರ್ಚೆ ಮಾಡಿದರೆ ಸರ್ಕಾರ ಯಾವ ಆಟಿಟ್ಯೂಡ್ ತೆಗೆದುಕೊಂಡಿದೆ, ಯಾವ ರೀತಿ ವರ್ತನೆ ಮಾಡಿದೆ, ಅದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿ ಒಟ್ಟು ಅಭಿಪ್ರಾಯ ಪಡೆಯುತಕ್ಕದ್ದು ಅವಶ್ಯ ಇದೆ. ಆದ್ದರಿಂದ, ಬಹಳ ಪ್ರಮುಖವಾಗಿರತಕ್ಕ ಈ ನಿಲುವಳಿ ಸೂಚನೆ ಇಲ್ಲಿ ಚರ್ಚೆಯಾಗಬೇಕು. ಆದ್ದರಿಂದ ಈ ನಿಲುವಳಿ ಸೂಚನೆಯ ಪ್ರಾಸ್ತಾವಿಕ ವಿಚಾರವನ್ನು ಇಲ್ಲಿ ಎತ್ತಿದ್ದೇನೆ. ಬೆಂಗಳೂರಿನಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಲಿಕ್ಕೆ ಅನುಮತಿ ಕೊಟ್ಟರೆ ಚರ್ಚೆ ಮಾಡುತ್ತೇವೆ, ಆ ಸ್ಕೋಪ್ ಈಗ ಇಲ್ಲ. ಸೂಕ್ಷ್ಮವಾಗಿ ಯಾವ ರೀತಿಯಲ್ಲಿ ಯೋಗ್ಯ ಇದೆ ಅದನ್ನು ಮನವರಿಕೆ ಮಾಡುವುದು ನಮ್ಮ ಕರ್ತವ್ಯ. ಬೆಂಗಳೂರಿನಲ್ಲಿ ಏನಾಗಿದೆ, ೬ ಜನ ಡಕಾಯಿತರು ಅಶ್ವತ್ಥಯ್ಯ ಎನ್ನುವವರ ಮನೆಗೆ ಪ್ರವೇಶ ಮಾಡಿ ಅಟ್ಯಾಕ್ ಮಾಡಿದರು. ಅನಂತರ ಪೆಟ್ರೋಲ್ ಬಂಕ್‌ನಲ್ಲಿ ಅಟ್ಯಾಕ್ ಮಾಡಿದರು. ಅನಂತರ ಫ್ರೇಜರ್‌ಟೌನ್ ಹತ್ತಿರ ಮಾಡಿದರು. ಹಾಗೆ ಎನ್ ಪಿ. ಥಾಮಸ್, ಥಾಮಸ್ ಮಾಥ್ಯೂಸ್, ಎಂ. ರಾಮಣ್ಣ ಹಾಗೆ ಹೆಚ್. ಎ. ಎಲ್. ಎಂಪ್ಲಾಯಿ ಡೆನ್ನಿಸ್ ಮೇಲೆ ಹಲ್ಲೆ ಆಯಿತು. ದಿಲೀಪ್‌ಸಿಂಗ್ ಅವರ ಮೇಲೆ ಹಲ್ಲೆಯಾಗಿದೆ. ಹೀಗೆ ಒಂದು ರೀತಿಯ ಘಟನೆಗಳ ಸರಮಾಲೆ ಹಾಗೆ ನಡೆದುಕೊಂಡು ಬಂದಿದೆ. ಈಗ ಇನ್ನು ಕೆಲವು ವಿಚಾರಗಳು ಉದ್ಭವವಾಗಿವೆ. ಕೆಲವು ಪೋಲೀಸ್ ಅಧಿಕಾರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಾರ್ವಜನಿಕರು ಯಾರು ಬಲಿಯಾಗಿದ್ದಾರೆ ಅವರು ಕೂಡ ಹೇಳಿಕೆಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ವಿವರಗಳನ್ನು ವಿಶ್ಲೇಷಣೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಪೋಲೀಸ್ ಅಧಿಕಾರಿ

ಗಳಾದಂಥ ಪಿ. ಜಿ. ಹರ್ಲಂಕರ್‌ರವರು ಈ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. "Yes, we are baffled. They have certain advantageous factors on their side and they are planning their exploits cunningly. They have choice of a vast rough terrain of the target. But we will get them." ಎಂದು ಏನು ಇದರ ಅರ್ಥ, Whether this Government is facing a Guerilla War? Whether the Police are incapable of fighting? Hon'ble Minister says that it is a question of law and order. No, it is not a question of law and order. It is a question of war between the dacoits and the Government or some revolt. We don't understand the nature of the statement given by the police Commissioner. The Police Commissioner says that dacoits have certain advantageous factors on their side. Have you worked out the strategies to over come their strateges ಇಷ್ಟೆಲ್ಲಾ ಮಾಡರ್ನೈಸ್. ಆಗಿರುವಾಗ ವೆಹಿಕಲ್ಸ್ ಇರುವಾಗ, ತಾವು ಅವರಿಗೆ ಅಡ್ವಾನ್‌ಟೇಜ್ ಇದೆ ಎಂದು ಹೇಳಿದ್ದರೂ ನಮಗೆ ಅಡ್ವಾನ್‌ಟೇಜ್ ಇಲ್ಲ ಅಂದರೆ ಇದೇನು ಚಂಬಲ್ ಕಣಿವೆ ಏನು ? ಬೆಂಗಳೂರು ಸುತ್ತ ಮರಗಳು ಇವೆ. Where is the difficulty ? I do not understand. I must compliment the Police that they have realised the gravity of the situation. But what is their strategy ? They are thinking that they are incapable and they cannot act. Then they are pleading their helplessness ? Call the Police from Madhya Pradesh, if you are incapable of handling the dacoits ?

1-00 P.M.

After all it requires expertise. You confess your difficulty. ನಮ್ಮ ಹತ್ತಿರ ಮೂರು ಸಾವಿರ ಜನ ಪೋಲೀಸಿನವರು ಇದ್ದಾರೆಂದು ಹೇಳಿಬಿಟ್ಟರೆ ಆಗುತ್ತದೆಯೇ ? "We can handle them and we can get them." When are you getting them ? It is a very serious matter. Have you realised the seriousness of the problem ? It is the lapse on the part of the administration. ತಾವು ಫೇಲಾಗಲಿಲ್ಲವೆ ? ಆಡಳಿತ ಕುಸಿದು ಬೀಳಲಿಲ್ಲವೆ ? ಕೆರೆಯಲ್ಲಿ ಮುಳುಗಿಬಿಡುತ್ತೇವೆಂದು ಹತಾಶಭಾವನೆಯಿಂದ ಕೈ ಎತ್ತಿದರೆ, ಮುಳುಗಿ ಬಿಡುತ್ತಾರೆ. "We can swim, we have the advantage. We know swimming very well. We have the equipment" ಆದರೆ ಇದರಲ್ಲಿ ನಂಬಿಕೆ ಪೋಲೀಸಿನಲ್ಲಿ ಇಲ್ಲದೇ ಇದ್ದಂಥ ಪರಿಸ್ಥಿತಿ ಇದೆ ಎನ್ನುವುದು ಈ ಹೇಳಿಕೆಯಿಂದ ಗೊತ್ತಾಗುತ್ತದೆ But they express their inability by saying that they are in a disadvantageous position. That is the statement which the Government cannot take very lightly. You can take away the case from him and hand over to a person who is competent and who has got confidence and can say, "Yes. We will not yield. We are in an advantageous position." If the higher Officer is not confident ? How can you expect any subordinate Officer to be confident ? When you do not know the tactics and strategy or a plan of action to catch them, you cannot catch them. These statements are very important. I must congratulate the Deccan Herald for having done this work. I have seen another statement of Sri Harlankar. One of the victims felt :

> "Once contact was made, the police arrived in five minutes. Moreover if a helicopter with powerful search-lights could be used soon after an attach, it would be sure to flush out the dacoits".

ಹೆಲಿಕಾಪ್ಟರ್ ನಿಮ್ಮ ಹತ್ತಿರ ಇದೆ. ಬೆಂಗಳೂರು ಸುತ್ತ ದಟ್ಟವಾದ ಕಾಡು ಯಾವುದೂ ಇಲ್ಲ. ಏನಾದರೂ ಇದ್ದ ಪರಿಸ್ಥಿತಿಯಲ್ಲಿಯೇ ಸುಧಾರಿಸಿಕೊಂಡು ಹಿಡಿಯುವುದಕ್ಕೆ ಆಗುತ್ತದೆಯೆ ? ತೂತು ಬಿದ್ದ ಬಲೆಯನ್ನು ಪ್ಯಾಚ್‌ಮಾಡಿಕೊಂಡು ಮೀನುಹಿಡಿಯುವುದಕ್ಕೆ ಹೋದರೆ ಮೀನು ಸಿಗುವುದಿಲ್ಲ. ಬಲೆ ಕೂಡ ಕೈಗೆ ಸಿಗುವುದಿಲ್ಲ. ನಮ್ಮ ಪೋಲೀಸಿನವರ ಪರಿಸ್ಥಿತಿ ಹಾಗೆ ಇದೆ. ಪೋಲೀಸಿನವರ ಪ್ರತಿಷ್ಠೆ ಕಡಿಮೆಯಾಗುತ್ತದೆಯೇ ? ನಿಮಗೆ ಇರತಕ್ಕ ತೊಂದರೆ ಏನು ಎನ್ನುವುದನ್ನು ಹೇಳಿ. ಹೆಲಿಕಾಪ್ಟರ್ ಬಳಸಿದರೆ You can comb the area. "But Mr. Harlankar said this could not be considered at present due to practical difficulties." What are the practical difficulties ? Let us know about it. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇರೀತಿ ನಡೆದಿದೆ. ಬೆಂಗಳೂರಿನಲ್ಲಿಯೂ ನಡೆದಿದೆ. ಡಕಾಯಿತಿ ನಡೆದ ಕೂಡಲೇ ವಿ.ಐ.ಪಿ.ಗಳು ಬರುತ್ತಾರೆ. ಅವರು ಹೋದಕೂಡಲೇ ಯಾರೂ ಇರುವುದಿಲ್ಲ. ತನಿಖೆ ಕೂಡ ಯಾರೂ ಮಾಡುವುದಿಲ್ಲ ಇದು ಸಾರ್ವಜನಿಕರ ಮನಸ್ಸಿನಲ್ಲಿದೆ. ಮಾನ್ಯ ರಾಜಯ್ಯನವರು ಹಾವಂಜೆಗೆ ಬಂದರು. ಅವರು ಬಂದು ಹೋದ ೫-೧೦ ನಿಮಿಷದಲ್ಲಿ ನಾನು ಹೋದೆ. ಅಲ್ಲಿ ಇಬ್ಬರು ಪೋಲೀಸಿನವರು ಮಾತ್ರ ಇದ್ದರು. ಸಬ್ ಇನ್ಸ್‌ಪೆಕ್ಟರು ಇಲ್ಲ, ಯಾರೂ ಇಲ್ಲ. ಜನತೆ ಮಂತ್ರಿಗಳು ಬಂದಾಗ ಅಧಿಕಾರಿಗಳು ಬರುತ್ತಾರೆ. ಅವರು ಹೋದ ಕೂಡಲೇ ಒರ್ ಎಂದುಹೋಗುತ್ತಾರೆಂದು ಹೇಳಿದರು. ತನಿಖೆ ಮಾಡಲು ಸಾದಾ ಉಡುಪಿನಲ್ಲಿ ಕೂಡ ಯಾರೂ ಹೋಗುವುದಿಲ್ಲ. ಅಲ್ಲಿ ಅನೇಕ ವಿಚಾರಗಳು ಬಂದಿದ್ದು. ನಾನು ಕೂಡ ತಮ್ಮ ಹತ್ತಿರ ಚರ್ಚೆಮಾಡಿದ್ದೇನೆ. ಇಲ್ಲಿ ಪ್ರಸ್ತಾಪ ಮಾಡುವುದರಿಂದ ತಮ್ಮ ತನಿಖೆಗೆ ತೊಂದರೆಯಾಗುತ್ತದೆ. ಅದೇ ಅಭಿಪ್ರಾಯ ಇಲ್ಲೂ ಕೂಡ ಇದೆ.

> "The murder took place at around the same time as the police patrol reached. How they did not see or hear anything ? We do not want VIPs charging over here after the event, We want protection now, they said,"

ಗುಡ್ಡೆ ಅಂಗಡಿಯಲ್ಲಿ ನಡೆದ ಘಟನೆ ಕೂಡ ಇದೆ. ಹಿರಿಯಡ್ಕ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ ಘಟನೆ ನಡೆದ ಅರ್ಧ ಗಂಟೆಯಲ್ಲಿ ಪೋಲೀಸಿನವರು ಬಂದಿದ್ದಾರೆ. ಕಾಡಿಗೆ ಹೋಗಿ ಹುಡುಕಿದ್ದರೆ ಡಕಾಯಿತರು ಸಿಗುತ್ತಿದ್ದರು. ಸಾರ್ವಜನಿಕರು ಪೋಲೀಸಿನವರು ನಮ್ಮ ಜೊತೆ ಪೋಲೀಸಿನವರನ್ನು ಕೊಡಿ ಎಂದು ಸಾರ್ವಜನಿಕರು ಕೇಳಿದರೂ ಕೊಡಲಿಲ್ಲ. ಪೋಲೀಸಿನವರೇ ಹೆದರಿದರೆ ಡಕಾಯಿತರನ್ನು ಹುಡುಕುವುದು ಹೇಗೆ ? ಈ ವಿಷಯದಲ್ಲಿಯೂ ಕೂಡ ತಾವು ತೀವ್ರ ಗಮನಕೊಡಬೇಕಾಗುತ್ತದೆ.

> "In cases where police had arrived at the scene of the dacoity promptly, they had shown considerable reluctance to go into the dark forests in pursuit of the criminals according to two of the victims."

This has been every-where. Police are reluctant to carry on further search. ಪ್ರಾಮಾಣಿಕವಾಗಿ ಬಂದರೂ ಕೂಡ ಪೋಲೀಸಿನವರು ಮುಂದೆ ಬಂದಿಲ್ಲ. ಇದು ನಡೆದಿದೆ. ಸರ್ಚ್ ಲೈಟ್ ಕೊಡತಕ್ಕಂಥ ಹೆಲಿಕಾಪ್ಟರ್ ಬಳಸತಕ್ಕ ಪ್ರಯತ್ನ ಮಾಡಬೇಕು.

> "Other police officials seemed to feel that a helicopter equipped with massive searchlights would help greatly in combing the area after an attack."

ಇದನ್ನು ಏತಕ್ಕೆ ಮಾಡುವುದಿಲ್ಲ. ತಮಗೆ ಕೆಲವು ಸಾಧ್ಯತೆಗಳು ಇವೆ. ಇದರ ವಿಚಾರವಾಗಿ ತಾವು ಚಿಂತನೆ ಮಾಡುತ್ತಿಲ್ಲ. ಕಾರ್ಯೋನ್ಮುಖರಾಗುತ್ತಿಲ್ಲ. ಹತಾಶರಾಗಿ, ಹಿಡಿಯಲಿಕ್ಕೆ ಆಗುವುದಿಲ್ಲ.

ಎಂದು ಕೊಡುಕೊಳ್ಳತಕ್ಕ ಪ್ರಯತ್ನ ಏತಕ್ಕೆ ಮಾಡುತ್ತೀರಿ ? ಸ್ಥಳೀಯ ಸಂಪರ್ಕ ಇದೆಯೆಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಲೀಸ್ ಅಧಿಕಾರಿಗಳು ಹೇಳಿದ್ದಾರೆ. ಬೆಂಗಳೂರಿನಲ್ಲಿ ಕೂಡ ಲೋಕಲ್ ಸಂಪರ್ಕ ಚೆನ್ನಾಗಿದೆಯೆಂದು ಹೇಳಿಕೆ ಕೊಟ್ಟಿದ್ದಾರೆ. ಹೊರಗಡೆಯಿಂದ ಬಂದು ಪ್ಲಾನ್ ಮಾಡಿ, ಡಕಾಯಿತಿ ಮಾಡುವುದು ಬೇರೆ ವಿಚಾರ. ಸ್ಥಳೀಯರ ಸಂಪರ್ಕ ಇದ್ದರೂ ಹಿಡಿಯಲಿಕ್ಕೆ ಏತಕ್ಕೆ ಆಗಲಿಲ್ಲ. ಈ ಒಂದು ಹತಾಶ ಮನೋಭಾವನೆ, ನಿಮ್ಮಲ್ಲಿ ನಿಮ್ಮ ಇಲಾಖೆಯಲ್ಲಿ ಕಾಣುತ್ತಿದೆ. ರಾಜೀನಾಮೆ ಕೊಡಿ ಎಂದು ನಾವು ಹೇಳಬಹುದು. ನಿಮ್ಮಲ್ಲಿ ಮಂತ್ರಿಗಳಾಗುವುದಕ್ಕೆ ಛಾನ್ಸೇ ಇಲ್ಲ, ನಿಮ್ಮನ್ನು ರಾಜೀನಾಮೆ ಕೊಡಿ ಎಂದು ಏತಕ್ಕೆ ಕೇಳಬೇಕು, ಗೃಹ ಮಂತ್ರಿಯವರು ರಾಜೀನಾಮೆ ಕೊಡಿ ಎಂದು ಸುಲಭವಾಗಿ ಹೇಳಬಹುದು. ಆದರೆ ಆ ಜಾಗಕ್ಕೆ ಮತ್ತೊಬ್ಬರು ಯಾರಿದ್ದಾರೆ ! ಅದಕ್ಕಾಗಿ ನಾವು ರಾಜೀನಾಮೆ ಕೊಡಿ ಎಂದು ಕೇಳುವ ಪ್ರಸಂಗಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇ ಬೇಜಾರಾಗಿ ನಾನೇ ಕೊಡುತ್ತೇನೆಂದರೆ ಆವಾಗ ಏನು ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಬಹುಶಃ ಶ್ರೀ ಲಕ್ಷ್ಮೀಸಾಗರ್‌ರವರು ತಾಂತ್ರಿಕವಾಗಿ ಹೇಳಿರ ಬೇಕೆಂದೆನಿಸುತ್ತಿದೆ. ಏಕೆಂದರೆ ಎರಡು ತಿಂಗಳಿಂದ ನಡೆದಿರುವ ಡಕಾಯಿತಿ ಪ್ರಕರಣಗಳನ್ನು ಸರ್ಕಾರ ನ್ಯಾಯ ಪರಿಪಾಲನೆಯ ದೃಷ್ಟಿಯಿಂದ ತೆಗೆದುಕೊಂಡಿಲ್ಲ ಎನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮೊಯ್ಲಿಯವರೂ ಮಂತ್ರಿಗಳಾಗಿದ್ದವರು. ಆಗ ನಾವೂ ಇಂಥ ಪ್ರಕರಣಗಳನ್ನು ಎತ್ತಿದ್ದೇವೆ, ಇಲ್ಲ ಎಂದೇನಲ್ಲ. ಆದರೆ ಯಾವುದೇ ಸಮಯದಲ್ಲಿ ಲಾ ಅಂಡ್ ಆರ್ಡರ್ ಬಗ್ಗೆ ನಿಲುವಳಿ ಸೂಚನೆ ತಂದಿರುವುದು ಇದೆಯೇ ಹೇಳಲಿ.

SRI K.H. PATIL.—This is not a law and order problem. This is the break-down of the Government.

ಶ್ರೀ ಎ. ಲಕ್ಷ್ಮೀಸಾಗರ್.—ಮಾತುಗಳ ಬಳಕೆಗೆ ನೀವಾರೇಖೆ ಇಲ್ಲವಲ್ಲ. ಆದರೆ ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾತಾಡಬೇಕಾಗುತ್ತದೆ. ವಾರ್ ಎಂದು ಹೇಳುತ್ತಿದ್ದಾರೆ. ಈ ಸ್ಟೇಟ್‌ನಲ್ಲಿ ಸಮಾಜದಲ್ಲಿ ಇನ್ಯಾವ ರೀತಿ ಮಾಡಬೇಕು ? ಇಲ್ಲ, ರೆವಲ್ಯೂಷನ್ ಆಗಬಹುದು. ದರೋಡೆ ಶುರುವಾಗಿ ಒಂದು ತಿಂಗಳಾಯಿತು. ಎರಡು ತಿಂಗಳಾಯಿತು ಎಂದು ಹೇಳಿದ್ದಾರೆ. ಸರ್ಕಾರ ಎಲ್ಲ ಪ್ರಯತ್ನ ಮಾಡುತ್ತಿದ್ದರೂ ನಿಲುವಳಿ ಸೂಚನೆ ಏತಕ್ಕೆ ಬೇಕಾಗಿದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ..................

ಅಧ್ಯಕ್ಷರು.—ಅವರು ರೂಲ್ಸ್ ಪ್ರಕಾರ ಹೇಳುತ್ತಿದ್ದಾರೆ, ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕಾನೂನು ಪ್ರಕಾರವೇ ಎಲ್ಲರೂ ಮಾತನಾಡಬೇಕು. ನಾನು ಬೇಡ ಎನ್ನುತ್ತಿಲ್ಲ. ಆ ಪ್ರಕಾರವೇ ನಾನೂ ಮಾತನಾಡುತ್ತಿದ್ದೇನೆ. ಎಲ್ಲವೂ ಕಾನೂನು ಪ್ರಕಾರವೇ ನಡೆದಿದ್ದರೆ ಈಗ ನಾನು ಪ್ರಸ್ತಾಪ ಮಾಡಬೇಕಿರಲಿಲ್ಲ. This is the statement of the Police Commissioner. What did he say? He said that the dacoits have advantage and they are working in a difficult terrain. These are the ingredints of a guerrila war. That is what the Police have said, I dont want that situation to come. ಇದು ನನ್ನ ಸ್ಟೇಟ್‌ಮೆಂಟ್ ಅಲ್ಲ. ಆದ್ದರಿಂದ ಅಧ್ಯಕ್ಷರೇ, ನಾಳೆ ಭಾರತ ಬಂದ್ ಎಂದು ಕರೆ ಕೊಟ್ಟಿದ್ದಾರೆ ಕರ್ನಾಟಕದಲ್ಲಂತೂ ಡಕಾಯಿತ ರನ್ನು ಹಿಡಿಯುವುದಕ್ಕೆ ಸರ್ಕಾರದಿಂದ ಆಗಲಿಲ್ಲ. ಒಂದು ತರಹದ ಹತಾಶ ಮನೋಭಾವನೆ ಇದೆ. ನಾಳೆ who should protect the life and properties of the citizens of Karnataka I thought that the Hon. Chief Minister would tell the people at Delhi that Karnataka should be exempted from this. ಈಗ ಏನಾಗಿದೆ ಎಂದರೆ, this is relevant. ಏಕೆಂದರೆ ನಾಳೆ ಈ ಬಂದಿನ ಸಂದರ್ಭದಲ್ಲಿ ಯಾರೇ ಆದರೂ ಪರಿಸ್ಥಿತಿಯ ದುರ್ಲಾಭ ಪಡೆಯಬಹುದು, ದುಷ್ಟಶಕ್ತಿಗಳು ಜನ ಮನೆಗಳನ್ನು ದೋಚಬಹುದು. ಆದ್ದರಿಂದ ಇದಕ್ಕೆ ಜಾಸ್ತಿ ಇಂಪಾರ್ಟೆನ್ಸ್ ಕೊಡಬೇಕು. This is an additional point which strengthens

our argument. ಏಕೆಂದರೆ ನಾಳೆ ಬಂದ್ ಆಗುವುದರಿಂದ ಇವತ್ತು ಇದರ ಬಗ್ಗೆ ಡಿಸ್ಕಷನ್ ಆಗಲಿ. ಯಾವ ರೀತಿ ರಕ್ಷಣೆ ಕೊಡುತ್ತಾರೆಂದು ಉತ್ತರಿಸಲಿ.

ಶ್ರೀ ಎಂ. ಎಸ್. ಕೃಷ್ಣನ್.—ಬಂದ್ ವಿಷಯವನ್ನು ಇದಕ್ಕೆ ಸೇರಿಸಬೇಡಿ. ಏಕೆಂದರೆ ಇಂಥ ಡಕಾಯಿತಿ ಪ್ರಕರಣಗಳು, ಕೊಲೆ ದರೋಡೆಗಳು ಎಲ್ಲ ರಾಜ್ಯದಲ್ಲೂ ಆಗಿವೆ. ನೀವಿದ್ದಾಗಲೂ ಆಗಿವೆ. ಡಕಾಯಿತರು ಮನೆಯಲ್ಲಿ ಜನರಿಲ್ಲದಾಗ ಬಂದು ದರೋಡೆ ಮಾಡುತ್ತಾರೆ. ಬಂದುವೇಳೆ ನಾಳೆ ಜನ ಎಲ್ಲ ಮನೆಗಳಲ್ಲೇ ಇದ್ದರೆ ಯಾವ ದರೋಡೆಯೂ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಏನು ಅಭಿಪ್ರಾಯ ಪಡುತ್ತಿದ್ದೇನೆಂದರೆ ನಾಳೆ ಬಂದ್ ಅನ್ನು ಮಾಡಿದ ಕೂಡಲೇ ಡಕಾಯಿತರು ಮನೆ ಮೇಲೆ ಬೀಳಬಹುದು. I am fore-warning this Government to take precaution.

ಶ್ರೀ ಆರ್. ವೆಂಕಟರಾಮಯ್ಯ.—ಈ ಡಕಾಯಿತಿ ದರೋಡೆ ತಿಂಗಳಿಗೆ ಐದು ಸಲ ಆಗುತ್ತಿವೆ. ನಿಮ್ಮ ರಾಜ್ಯಭಾರದ ರಾಜ್ಯಗಳಲ್ಲೂ ಆಗುತ್ತಿವೆ ಡಕಾಯಿತಿಯ ಭಯ ಕರ್ನಾಟಕದಲ್ಲಿ ಮಾತ್ರ ಅಲ್ಲ ಎಲ್ಲ ಕಡೆಯೂ ಆಗಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ವೆಂಕಟರಾಮಯ್ಯನವರಿಗೆ ಡಬಲ್ ಟಂಗ್ ಇರಬಹುದು. ಇಲ್ಲಿ ನಿಲುವಳಿ ಸೂಚನೆಗೆ ಸೈನ್ ಮಾಡಿ ಅಲ್ಲಿ ವಿರೋಧಿಸುವಂತೆ ಮಾತಾಡುತ್ತಿದ್ದೀರಿ. ಡೆಲ್ಲಿಯಲ್ಲಿ ಡಕಾಯಿತಿ ಆದರೆ ಇಲ್ಲಿ ಹೇಗೆ ನಾವು ನಿಲುವಳಿ ಸೂಚನೆ ತರುವುದು ? ಪಶ್ಚಿಮ ಬಂಗಾಳದಲ್ಲಿ ಆದರೆ ನಾವು ಇಲ್ಲಿ ಹೇಗೆ ನಿಲುವಳಿ ಸೂಚನೆ ತರುವುದು ?

ಶ್ರೀ ಆರ್. ವೆಂಕಟರಾಮಯ್ಯ.—ನನಗೆ ಎರಡು ಟಂಗ್ ಎಂದು ಹೇಳುತ್ತಿದ್ದಾರೆ. ಆದರೆ ಕಾಂಗ್ರೆಸ್‌ನವರಿಗೆ ಟಂಗೇ ಇಲ್ಲ. ಏನು ಬೇಕಾದರೂ ಮಾತನಾಡುತ್ತಿದ್ದಾರೆ. ನಿಲುವಳಿ ಸೂಚನೆಗೆ ನಾನು ಸೈನ್ ಮಾಡಿರಬಹುದು. ಆದರೆ ಬಂದ್‌ಗೂ ಇದಕ್ಕೂ ಏನು ಸಂಬಂಧ ಇದೆ ? ಈಗಲೂ ಹೇಳುತ್ತೇನೆ. ನನ್ನ ನಿಲುವಳಿ ಸೂಚನೆಗೆ ಸಪೋರ್ಟ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಇದು ಯಾವ ಸರ್ಕಾರದಲ್ಲಿ ನಡೆಯುತ್ತದೆ ಎಂದು ಅಲ್ಲ. ನಮ್ಮ ಮುಂದೆ ಈಗಿರುವುದು ಏನೆಂದರೆ ಇಷ್ಟು ಡಕಾಯಿತಿ ಆದರೂ ಒಂದನ್ನೂ ಈ ಸರ್ಕಾರ ಹಿಡಿಯಲಿಲ್ಲ. ಅದಕ್ಕಾಗಿ ಚೀಮಾರಿ ಹಾಕಬೇಕು ಎಂದು ನಮ್ಮ ಸರ್ಕಾರ ಹಿಡಿಯದಿದ್ದರೆ ಚೀಮಾರಿ ಹಾಕೋಣ, ನಿಮ್ಮ ಸರ್ಕಾರ ಹಿಡಿಯದಿದ್ದರೂ ಚೀಮಾರಿ ಹಾಕೋಣ.

ಶ್ರೀ ಆರ್. ವೆಂಕಟರಾಮಯ್ಯ.—ಅಷ್ಟಕ್ಕೇ ಕನ್‌ಫೈನ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಪ್ರಸ್ತಾಪ ಮಾಡಲು ಇಷ್ಟಪಡುವುದೇನೆಂದರೆ ಬಂದ್ ಸಮಯದಲ್ಲಿ ಕೆಲವು ದುಷ್ಟಶಕ್ತಿಗಳು ದುರ್ಲಾಭ ಪಡೆಯಬಹುದು. You may not do it but some vested interests, reactionaries and criminals may do. ನೀವು ಮಾಡುತ್ತೀರೆಂದು ನಾನು ಹೇಳುವುದಿಲ್ಲ. ಕೆಲವು ಕ್ರಿಮಿನಲ್ಸ್ ಲಾಭ ಪಡೆಯುತ್ತಾರಷ್ಟೆ.

ಶ್ರೀ ಜಿ. ನಾರಾಯಣ ಕುಮಾರ್.—ಬಂದ್‌ಗೆ ವಿರೋಧವಾಗಿ ಇವರು ಇರುವುದರಿಂದ ಇವರೇ ಡಕಾಯಿತರನ್ನು ಆ ಸಮಯದಲ್ಲಿ ಬಿಟ್ಟು ಮಾಡಿಸಬಹುದೇನೋ ಎಂದು ಸಂಶಯ ಬರುತ್ತಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದ್ದರಿಂದ ಈ ಬಗ್ಗೆ ಸರ್ಕಾರಕ್ಕೆ ಮುನ್ನೆಚ್ಚರಿಕೆ ಕೊಡುವುದೇನೆಂದರೆ ಸಾರ್ವಜನಿಕರ ಆಸ್ತಿ ಮತ್ತು ಪ್ರಾಣವನ್ನು ಕರ್ನಾಟಕದಲ್ಲಿ ರಕ್ಷಿಸುವ ಹೊಣೆ ಸರ್ಕಾರಕ್ಕೆ ಇದೆ. ಈ ಸಂದರ್ಭದಲ್ಲಿ ಡಕಾಯಿತರ ಧಾಳಿಯನ್ನು ಪ್ರಾಮುಖ್ಯವಾಗಿ ನೋಡಬೇಕು. ಆದ್ದರಿಂದ ಸದನದ ಬೇರೆ ಕಾರ್ಯಕಲಾಪಗಳನ್ನು ಬದಿಗಿಟ್ಟು ಇದರ ಬಗ್ಗೆ ಚರ್ಚೆಮಾಡೋಣ. ಸಾರ್ವಜನಿಕರಿಗೆ ವಿಶ್ವಾಸ ಉಂಟಾಗುವ ರೀತಿಯಲ್ಲಿ ಈ ಸದನ ಕೆಲಸ ಮಾಡಲಿ ಎಂದು ಮಾನ್ಯ ಸದಸ್ಯರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಆದ್ದರಿಂದ ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬೇಕಾದಷ್ಟು ಡಕಾಯಿತಿ ಪ್ರಕರಣ ಆಗಿರುವುದರಿಂದ ಅಲ್ಲಿನ ಶಾಸಕರಿಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗಾಗಲೇ ೬೦ ನಿಮಿಷ ಕೊಟ್ಟಿದ್ದೇನೆ. ಅಷ್ಟು ಸಾಕು.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಅಭಾರಿಯಾಗಿದ್ದೇವೆ. ಅಲ್ಲಿ ಸೀರೀಸ್ ಆಗಿ ಡಕಾಯಿತಿ ನಡೆದಿದೆ. ಆ ಕ್ಷೇತ್ರದಿಂದ ಬಂದಿರತಕ್ಕ ಉಮರಬ್ಬ, ಇದಿನಬ್ಬ, ಪ್ರತಾಪ ಚಂದ್ರಶೆಟ್ಟರು ಇದ್ದಾರೆ. ಅವರೂ ಮಾತನಾಡಲಿ.

ಅಧ್ಯಕ್ಷರು.—ಎಲ್ಲರಿಗೂ ಆಗುವುದಿಲ್ಲ. ಬೇಕಾದರೆ ನೀವು ಹೇಳಿದ್ದರಿಂದ ಇದಿನಬ್ಬರು ಐದು ನಿಮಿಷ ಮಾತಾಡಲಿ.

ಶ್ರೀ ಎಸ್. ಬಂಗಾರಪ್ಪ.—ಒಬ್ಬರಿಗೆ ಕೊಡಿ ಎಂದು ನಾನು ಹೇಳಲಿಲ್ಲ. ನೀವು ಹೇಳಿದ್ದು.

ಅಧ್ಯಕ್ಷರು.—ನೋಡಿ, ನೀವು ೨೨ ಜನ ಸೈನ್ ಮಾಡಿದ್ದಾರೆಂದು ೨೨ ತಾಸು ಕೊಡುವುದಕಾಗುವುದಿಲ್ಲ. ನನಗೂ ಕೆಲವು ಅಧಿಕಾರ ಇದೆ. ಚೇಂಬರಿನಲ್ಲೇ ಇವನ್ನು ನಾನು ರಿಜೆಕ್ಟ್ ಮಾಡಬಹುದಿತ್ತು. ಆದರೆ ಇಲ್ಲಿ ಇಬ್ಬರದೂ ಅಭಿಪ್ರಾಯ ಕೇಳೋಣ ಎಂದು ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಮಗೆ ಅಧಿಕಾರ ಇದೆ ಎಂದು ತಾವು ಹೇಳಬಾರದು.

ಅಧ್ಯಕ್ಷರು.—ಈ ಸದನದ ೨೨೫ ಸದಸ್ಯರು ಕೊಟ್ಟಿರುವ ಅಧಿಕಾರ ನನ್ನದು. ದಯವಿಟ್ಟು ಕೂರಿ.

ಶ್ರೀ ಎಸ್. ಬಂಗಾರಪ್ಪ.—ನೀವ್ಯಾಕೆ ಪದೇ ಪದೇ ನನಗೆ ಅಧಿಕಾರ ಇದೆ ಎಂದು ಹೇಳಿಕೊಳ್ಳುತ್ತೀರಿ? ಅದನ್ನು ನಾವು ಹೇಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಮಗೂ ಸಹ ಈ ಬಗ್ಗೆ ಮಾತನಾಡಲು ಅವಕಾಶ ಬೇಕು. ದಕ್ಷಿಣ ಕನ್ನಡದಲ್ಲಿ ಆಗಿರುವಂತೆಯೇ ಬೆಂಗಳೂರಿನಲ್ಲೂ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಮುಖ್ಯವಾದ ವಿಚಾರ ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) — ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಮತ್ತು ವೀರಪ್ಪಮೊಯಿಲಿಯವರು ತಮ್ಮ ಮನತಟ್ಟುವಂತೆ ಮನ ಕರಗುವಂತೆ ದಕ್ಷಿಣ ಕನ್ನಡ ಜಿಲ್ಲೆಯ ಮೂರು ತಿಂಗಳ ಚರಿತ್ರೆಯನ್ನು ವಿವರಿಸಿ ಹೇಳಿದ್ದಾರೆ. ದರೋಡೆಗಳು ಯಾವ ರೀತಿಯಲ್ಲಿ ಆಗುತ್ತಿವೆ ಎಂಬುದನ್ನು ಹೇಳಿದ್ದಾರೆ. ನಮ್ಮ ನಾಯಕರು ಬೆಂಗಳೂರಿನ ಸುತ್ತಮುತ್ತ ನಡೆಯುತಕ್ಕ ದರೋಡೆ ಡಕಾಯಿತಿ ಇನ್ನು ಬೇರೆ ಬೇರೆ ವಿಚಾರಗಳನ್ನು ಹೇಳಿದ್ದಾರೆ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗತಕ್ಕಂಥ ದರೋಡೆ. ಕಳವು ಇವುಗಳ ಬಗ್ಗೆ ತಮ್ಮ ಮನಕರಗಿಸುವ ರೀತಿಯಲ್ಲಿ ಹೇಳಿ ಆಗಿದೆ. ಕಳೆದ ಒಂದೂವರೆ ತಿಂಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಂತಹ ದರೋಡೆ ಡಕಾಯಿತಿಯಿಂದ ಅಲ್ಲಿಯ ಜನ ೨೪ ಗಂಟೆಗಳ ಕಾಲ ಜನ ಎಚ್ಚರಿಕೆಯಿಂದ ಇರಬೇಕಾಗಿದೆ. ರಾತ್ರಿಯ ಸಮಯದಲ್ಲಿ ದೀಪ ಹಚ್ಚಿಕೊಂಡು ಗಂಡಸರು ಕಾಯಬೇಕು, ಹೆಂಡತಿ ಮಕ್ಕಳು ನಿದ್ದೆ ಮಾಡಬೇಕು. ಇಂತಹ ಒಂದು ಪರಿಸ್ಥಿತಿ ಎಲ್ಲೂ ಇಲ್ಲ. ವಿಟ್ಲ, ಬ್ರಹ್ಮಾವರ ಕುಂದಾಪುರ ಮತ್ತು ನನ್ನ ಮತಕ್ಷೇತ್ರದಲ್ಲಿ ನಡೆದಿದೆ. ತುಕ್ಕೋಟೆ ಚೆಕ್‌ಪೋಸ್ಟ್ ಕೇರಳ ಹೆದ್ದಾರಿಗೆ ೧೦ ಗಜ ದೂರವಿದೆ. ಉಳ್ಳಾಳ ಪೋಲೀಸ್ ಸ್ಟೇಶನ್‌ಗೆ ೨ ಕಿಲೋಮೀಟರ್ ಇದೆ. ಮಂಗಳೂರಿಗೆ ೬ ಕಿಲೋಮೀಟರ್ ದೂರವಿದೆ. ಇಂತಹ ಜನ ಸಂಚಾರ ಇರತಕ್ಕ ಚೆಕ್‌ಪೋಸ್ಟ್ ಎರಡು ಕಡೆಗಳಿಂದ ಇರತಕ್ಕ ಜಾಗದಲ್ಲಿ ದಿನಾಂಕ ೨೨-೨-೧೯೮೬ರ ರಾತ್ರಿ ಡಕಾಯಿತಿ ಆಯಿತು. ಡಕಾಯಿತಿ ನಡೆಸುವಾಗ ಮನೆಯ ಹತ್ತಿರವಿದ್ದ ಬಸ್ಸಿನ ಕಂಡಕ್ಟರ್ ಮತ್ತು ಅಲ್ಲಿದ್ದವರನ್ನು ಹೊಡೆದಿದ್ದಾರೆ. ಅವರ ತಲೆಗೆ ಪೆಟ್ಟು ಮಾಡಿ, ಹೆಂಚು ತೆಗೆದು ಮನೆಯ ಒಳಗೆ ಹೋಗಿ ಹೊಡೆದಿದ್ದಾರೆ. ಈ ದರೋಡೆ ಮಾಡಿದ ಮೇಲೆ ಅಲ್ಲೆ ೨೦೦ ಗಜ ದೂರದಲ್ಲಿ ಮತ್ತೊಂದು ದರೋಡೆ ಮಾಡಿದ್ದಾರೆ. ಅಲ್ಲಿ ಹಮೀನ ಮತ್ತು ಆತನ ಹೆಂಡತಿ ಮಗುವಿಗೆ ಹೊಡೆದಿದ್ದಾರೆ, ಇವರುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಮುಸಲ್ಮಾನ ಜಾತಿಗೆ ಸೇರಿದ ಕಂಡಕ್ಟರ್ ಸಾಹೀರ. ಹಮೀನ ಮತ್ತು ಆತನ ಹೆಂಡತಿ ಅವರು ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಆಸ್ಪತ್ರೆಯಲ್ಲಿರುವ ಇನ್ನೂ ಕೆಲವರ ಜೀವಕ್ಕೆ ಅಪಾಯವಿದೆ. ಅವರು ಬಡವರು ಬಹಳ ಕಷ್ಟದಲ್ಲಿದ್ದಾರೆ. ಮತ್ತೊಂದು ಡಕಾಯಿತಿ ಕಣ್ಣಾನೂರು ಅಲ್ಲಿ ಡಕಾಯಿತರು ಮುಸಲ್ಮಾನ ಮಹಿಳೆ ಮತ್ತು ಮಗಳಿಗೆ ಬೇಕಾದಷ್ಟು ಹೊಡೆದು ಬೇರೆ ಏನೆಲ್ಲವನ್ನು ಮಾಡಿ ಅವರಲ್ಲಿದ್ದ ಹಣವನ್ನು ದೋಚಿಕೊಂಡು ಹೋಗಿದ್ದಾರೆ. ಅವರು ಆಸ್ಪತ್ರೆಯಲ್ಲಿ ಎರಡೂವರೆ ತಿಂಗಳು ಇದ್ದರು. ಡಕಾಯಿತರು ಇನ್ನೂ ಸಿಗಲಿಲ್ಲ. ಕಳವು ದರೋಡೆ, ಸುಲಿಗೆ ಮಾಡತಕ್ಕವರನ್ನು ಇನ್ನು ಹಿಡಿಯತಕ್ಕ ವ್ಯವಸ್ಥೆಯಾಗಿಲ್ಲ. ಇದು ಏತಕ್ಕೆ? ಇದೊಂದು ತೊಡ್ಡ ಸಮಸ್ಯೆಯಾಗಿದೆ. ಸಬ್‌ಇನ್ಸ್‌ಪೆಕ್ಟರ್ ಹಸಟ್ಟಿಯವರನ್ನು ಕೊಲೆ ಮಾಡಿದಂತಹವರನ್ನು ಎರಡು ದಿವಸಗಳಲ್ಲಿ ಪೋಲೀಸ್‌ನವರು ಹಿಡಿದಿದ್ದಾರೆ. ಉಡುಪಿಯಲ್ಲಿ ಕಳ್ಳರನ್ನು ಹಿಡಿದಿದ್ದಾರೆ ವಜ್ರದಂಗಡಿಯಲ್ಲಿ ಕಳ್ಳತನ ಮಾಡಿಓಡಿ ಹೋಗುತ್ತಿದ್ದವರನ್ನು ಪೋಲೀಸಿನವರು ಹಿಡಿದಿದ್ದಾರೆ. ಎಲ್ಲಾ ಕಡೆಗಳಲ್ಲೂ ಪೋಲೀಸಿನವರು ಕಳ್ಳರನ್ನು ಮತ್ತು ದರೋಡೆ ಮಾಡುವವರನ್ನು ಹಿಡಿದಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕಳ್ಳತನ ಡಕಾಯಿತಿ ಮಾಡುವವರನ್ನು ಇದುವರೆಗೆ ಏತಕ್ಕೆ ಹಿಡಿಯಲಿಲ್ಲ? ಇದುವರೆಗೆ ಒಬ್ಬ ಕಳ್ಳನನ್ನು ಹಿಡಿಯಲಿಕ್ಕೆ ಪೋಲೀಸಿನವರಿಗೆ ಏತಕ್ಕೆ ಆಗಲಿಲ್ಲ? ಇದನ್ನು ನನ್ನ ಕ್ಷೇತ್ರದ ಜನ ಹೇಳುತ್ತಿದ್ದಾರೆ. ನೀವು ಇದರ ಬಗ್ಗೆ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿ ನಮಗೆ ಸಹಾಯವಾಗುತ್ತದೆಂದು ಅಲ್ಲಿಯ ಜನ ಹೇಳುತ್ತಿದ್ದಾರೆ. ಎಲ್ಲರೂ ಕೂಡ ಭಯಭೀತರಾಗಿದ್ದಾರೆ. ಪೋಲೀಸ್‌ನವರು ಅನೇಕ ಕಡೆಗಳಲ್ಲಿ ದರೋಡೆ ಮತ್ತು ಕಳ್ಳತನ ಮಾಡುವವರನ್ನು ಹಿಡಿದಿದ್ದಾರೆ, ನಮ್ಮಲ್ಲಿ ನಡೆದ ಕಳ್ಳತನ ಮತ್ತು ದರೋಡೆ ಮಾಡತಕ್ಕವರಲ್ಲಿ ಒಬ್ಬನನ್ನು ಹಿಡಿಯಲಿಕ್ಕೆ ಸಾಧ್ಯವಾಗಿಲ್ಲ. ಒಬ್ಬನನ್ನು ಹಿಡಿದರೆ ಖಂಡಿತವಾಗಿಯೂ ಎಲ್ಲರೂ ಸಿಗುತ್ತಾರೆ. ಪೋಲೀಸ್ ಇಲಾಖೆಯಲ್ಲಿ ದಕ್ಷ ಅಧಿಕಾರಿಗಳು ಜೀಪುಗಳು ಮತ್ತು ವೈರ್‌ಲೆಸ್ ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ಕಳ್ಳನನ್ನು ಹಿಡಿಯಲಿಕ್ಕೆ ಆಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನ ಭಯಭೀತರಾಗಿದ್ದಾರೆ. ಇದರ ಬಗ್ಗೆ ನಮ್ಮ ನಾಯಕರು ಮಾನ್ಯ ಮೊಯ್ಲಿಯವರು ಬೇಕಾದಷ್ಟು ಹೇಳಿದ್ದಾರೆ. ತಮ್ಮ ಮನಸವನ್ನು ಒಲಿಸಿದ್ದಾರೆ. ಇದರ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದೂ, ಡಕಾಯಿತರು ಸಿಗುತ್ತಾರೆನ್ನುವ ಭಾವನೆ ನಮ್ಮ ಜಿಲ್ಲೆಯ ಜನರಿಗೆ ಬಂದರೆ ಸಂತೋಷವಾಗುತ್ತದೆಂದು ಹೇಳಿ, ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎ. ಉಮರಬ್ಬ.— ನಾನು ಮಾತನಾಡಲಿಕ್ಕೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.— ತಾವು ದಯವಿಟ್ಟು ಕೂಡಿ, ಮಂತ್ರಿಗಳನ್ನು ಮಾತನಾಡಲಿಕ್ಕೆ ಕರೆದಿದ್ದೇನೆ.

(ಗೊಂದಲ)

ಅಧ್ಯಕ್ಷರು — ಈಗಾಗಲೆ ಈ ಬಗ್ಗೆ ೧೦೦ ನಿಮಿಷಗಳ ಕಾಲ ಮಾತನಾಡಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿದ್ದಾರೆ, ಮೊಯಿಲಿಯವರು ಮಾತನಾಡಿದ್ದಾರೆ. ಇದಿನಬ್ಬನವರು ಮಾತನಾಡಿದ್ದಾರೆ ಎಲ್ಲರೂ ಸವಿಸ್ತಾರವಾಗಿ ಹೇಳಿದ್ದಾರೆ. ಈ ತರಹ ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ನಾಲ್ಕು ದಿವಸಗಳಾದರೂ ಮುಗಿಯುವುದಿಲ್ಲ. ತಮ್ಮ ಮುಖಂಡರು ಒಳ್ಳೆಯ ರೀತಿಯಲ್ಲಿ ಮನವೊಲಿಸಲಿಕ್ಕೆ ಏನೇನು ಮಾಡಬೇಕೋ ಅಷ್ಟನ್ನು ಮಾಡಿದ್ದಾರೆ. ಈಗ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ.......

ಅಧ್ಯಕ್ಷರು.— ತಾವು ಕೂಡಿ, ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ತಾವೇನು ಹೇಳುತ್ತೀರಿ? ನಿಮಗೆ ಅವಕಾಶ ಕೊಡುವುದಿಲ್ಲ. ತಾವು ಕೂಡ್ರಿ. ಮಂತ್ರಿಗಳು ಮಾತನಾಡಲಿಕ್ಕೆ ಕರೆದಿದ್ದೇನೆ. ಈ ತರಹ ಆದರೆ ಸಭೆ ನಡೆಸುವುದು ಹೇಗೆ?

ಶ್ರೀ ಎಂ. ಎಸ್. ಕೃಷ್ಣನ್.— ತಮ್ಮಲ್ಲಿ ಕೇಳುವುದು ಇಷ್ಟೆ......

ಅಧ್ಯಕ್ಷರು.— ತಾವು ಏನು ಮಾತನಾಡಿದರೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.— ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡುವುದಿಲ್ಲವೆಂದು ಹೇಳಿದ್ದರಿಂದ ನಾನು ನಿಲುವಳಿ ಸೂಚನೆ ತೆಗೆದುಕೊಂಡು ಬರಲಿಲ್ಲ. ಇವತ್ತು ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಅದೇ ರೀತಿ ನಮಗೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.— ಅವರಿಗೆ ಅವಕಾಶ ಕೊಡುವುದಿಲ್ಲ ಅಂದರೆ ನಿಮಗೆ ಹೇಗೆ ಅವಕಾಶ ಕೊಡಬೇಕು? ರೂಲ್ಸ್ ರೆಗ್ಯುಲೇಷನ್ಸ್ ಪ್ರಕಾರ ನಾಳೆ ಕಾಲಿಂಗ್ ಅಟೆನ್ಷನ್ ಹಾಕಿದರೆ ಮಂತ್ರಿಗಳು ಉತ್ತರ ಕೊಡುತ್ತಾರೆ

(ಗೊಂದಲ)

ಅಧ್ಯಕ್ಷರು.— ಅವರು ೨೨ ಜನ ಸಹಿ ಮಾಡಿ ಕೊಟ್ಟಿದ್ದಾರೆ. ವಿರೋಧ ಪಕ್ಷದ ನಾಯಕರು ಮಾಜಿ ವಿರೋಧ ಪಕ್ಷದ ನಾಯಕರು ಮತ್ತು ಇದಿನಬ್ಬನವರು ಈಗಾಗಲೆ ೧೦೦ ನಿಮಿಷಗಳ ಕಾಲ ಮಾತ ನಾಡಿದ್ದಾರೆ. ಈಗ ಮಂತ್ರಿಗಳು ಉತ್ತರ ಹೇಳುತ್ತಾರೆ ತಾವು ಕೇಳಿ. ನೂರು ನಿಮಿಷದಲ್ಲಿ ಇದರ ಬಗ್ಗೆ ಸಾಕಷ್ಟು ಆರ್ಗುಮೆಂಟ್ ಆಗಿದೆ.

೧-೩೦ ಪಿ.ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಆ ಪಾಯಿಂಟ್ ಅಲ್ಲ. ನಾನು ಹೇಳಬೇಕೆಂದಿರುವುದು ಬೇರೆ ಪಾಯಿಂಟ್.

ಅಧ್ಯಕ್ಷರು.—ಬೇರೆ ಪಾಯಿಂಟ್ ಏನೂ ಇಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಾವು ಹಿಂದೆ ಈ ವಿಚಾರದಲ್ಲೇ ನಿಲುವಳಿ ಸೂಚನೆಯ ಬಗ್ಗೆ ನೋಟೀಸ್ ಕೊಟ್ಟಾಗ, ಅದು ನಿಲುವಳಿ ಸೂಚನೆಯಾಗುವುದಿಲ್ಲವೆಂದು ನಮಗೆ ಹೇಳಿ ಇವತ್ತು ಅದನ್ನು ಅಲೋ ಮಾಡುತ್ತಿದ್ದೀರಲ್ಲಾ ಅದಕ್ಕೆ ಹೇಳುತ್ತಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—೨೧ನೇ ತಾರೀಖು ನಾವು ಈ ಬಗ್ಗೆ ನೋಟೀಸ್ ಕೊಟ್ಟಾಗ ನಿಲುವಳಿ ಸೂಚನೆಯಾಗುವುದಿಲ್ಲವೆಂದು ಹೇಳಿದಿರಿ.

ಅಧ್ಯಕ್ಷರು.—ದಯಮಾಡಿ ತಾವು ಕುಳಿತುಕೊಳ್ಳಿ. ಶ್ರೀ ಬಂಗಾರಪ್ಪನವರು ಸೇರಿದಂತೆ ಅವರ ಪಕ್ಷದವರು ೨೦ ಜನ ಸದಸ್ಯರು ಸಹಿ ಮಾಡಿ ಆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿಯೇ ಅವರಿಗೆ ೧೦೦ ನಿಮಿಷ ಅವಕಾಶ ಮಾಡಿಕೊಟ್ಟಿದ್ದೇನೆ. ನಾನು ಈಗಾಗಲೇ ಮಂತ್ರಿಗಳನ್ನು ಕರೆದಿದ್ದೇನೆ. ತಾವು ದಯಮಾಡಿ ಕುಳಿತುಕೊಂಡು ಸಭೆಯನ್ನು ನಡೆಸುವುದಕ್ಕೆ ಅನುವು ಮಾಡಿಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಏಕೆ ತಾರತಮ್ಯ ಮಾಡುತ್ತೀರಿ ?

ಶ್ರೀ ಎಸ್. ಬಂಗಾರಪ್ಪ —ನಾವ್ಯಾರೂ ಮಾತನಾಡುವುದಿಲ್ಲ. ಮಂತ್ರಿಗಳು ಹೇಳಿಕೆಯನ್ನು ಕೊಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಆ ಒಂದು ಸೂಚನೆಗೆ ಸಹಿ ಹಾಕಿಲ್ಲ ನಿಜ. ಆದರೆ ನಾವು ಹಿಂದೆ ಈ ಒಂದು ವಿಚಾರವನ್ನು ನಿಲುವಳಿ ಸೂಚನೆಯಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂಬ ನೋಟೀಸನ್ನು ಕೊಟ್ಟಾಗ, ತಾವು ಅದನ್ನು ತಳ್ಳಿಹಾಕಿದ್ದೀರಿ.

ಅಧ್ಯಕ್ಷರು.—ಈಗ ಅದು ಬೇಡ. ತಮಗೆ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಿಲ್ಲ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ಸುತ್ತ-ಮುತ್ತ ದರೋಡೆ ಮಾಡುತ್ತಿದ್ದಾರೆ. ಅದನ್ನು ನೋಡಿಕೊಂಡು ನಾವು ಇಲ್ಲಿ ಸುಮ್ಮನೆ ಕುಳಿತುಕೊಂಡಿದ್ದರೆ ಜನ ನಮ್ಮನ್ನು ಏನೆಂದು ತಿಳಿದುಕೊಂಡಾರು ?

(ಗೊಂದಲ)

ಅಧ್ಯಕ್ಷರು.—ನನ್ನನ್ನು ನೀವೆಲ್ಲರೂ ಸೇರಿ ಆಯ್ಕೆ ಮಾಡಿ ಇಲ್ಲಿ ಕೂರಿಸಿದ್ದೀರಿ. ನನ್ನ ಮುಂದೆ ನಿಯಮದ ಪುಸ್ತಕ ಇದೆ. ಆ ಪುಸ್ತಕದಲ್ಲಿರುವ ನಿಯಮಗಳಿಗನುಸಾರವಾಗಿ ನಾನು ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂಬುದು ತಮಗೆಲ್ಲರಿಗೂ ಗೊತ್ತಿದೆ. ಯಾವುದೇ ವಿಚಾರ

ದಲ್ಲಿಯಾದರೂ ಸಹಿ ಮಾಡಿದವರಿಗೆ ಅವಕಾಶ ಕೊಡಬೇಕೆಂದು ನಿಯಮದಲ್ಲಿದೆ. ಅದರಂತೆ ನಾನು ನಡೆಯಬೇಕಾಗುತ್ತದೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಕೊಟ್ಟಂತಹ ತಿಲುವಳಿ ಸೂಚನೆಯನ್ನು ತಾವು ಅಲೋ ಮಾಡಲಿಲ್ಲ. ಈಗ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಸರಿಯೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಜನವರಿ–ಫೆಬ್ರುವರಿ ತಿಂಗಳಲ್ಲಿ ನಡೆದಂತಹ ದರೋಡೆ ಪ್ರಕರಣಗಳ ವಿಷಯದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ಮಾಜಿ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಸಾಕಷ್ಟು ವಿಚಾರದಲ್ಲಿ ಈ ಸಭೆಯ ಗಮನಕ್ಕೆ ತಂದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಮಾಜಿ ವಿರೋಧಪಕ್ಷದ ನಾಯಕರಲ್ಲ ವಿರೋಧಪಕ್ಷದ ಮಾಜಿ ನಾಯಕರು ಅಂತ ಹೇಳಿ.

ಶ್ರೀ ಬಿ. ರಾಚಯ್ಯ.—ವಿರೋಧಪಕ್ಷದ ಮಾಜಿ ನಾಯಕರು ಹಾಗೂ ಶ್ರೀಮಾನ್ ಇದಿನಬ್ಬರವರೂ ಕೂಡ ಈ ಒಂದು ಪ್ರಮುಖವಾಗಿರತಕ್ಕಂತಹ ವಿಷಯದ ಕಡೆಗೆ ಸಭೆಯ ಇತರೆ ಕಾರ್ಯಕಲಾಪಗಳನ್ನು ಬದಿಗೊತ್ತಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸಾಕಷ್ಟು ಸುಧೀರ್ಘವಾಗಿಯೇ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ನಿಯಮಾವಳಿನುಸಾರ ಇರತಕ್ಕಂತಹ ರೀತಿ ಯಲ್ಲಿ ನೋಡಿದಾಗ ಇದು ಕಾನೂನು ಹಾಗೂ ಪರಿಪಾಲನೆಯ ವಿಷಯಕ್ಕೆ ಸಂಬಂಧಪಟ್ಟಿದ್ದು ಆಗಿರು ವುದರಿಂದ ಇದನ್ನು ತಳ್ಳಿಹಾಕಬೇಕೆಂದು ಇದ್ದರೂ, ಈ ವಿಚಾರದಲ್ಲಿ ಅವರು ಏನು ವಿಷಯಗಳನ್ನು ಹೇಳುತ್ತಾರೆ ಅದನ್ನು ಕೇಳಬೇಕು, ಅದು ಸರಿಯೆಂದು ತಿಳಿದುಕೊಂಡು ಅವರು ಹೇಳಿದಂತಹ ವಿಚಾರ ಗಳನ್ನು ಕೇಳಿದ್ದೇನೆ. ಇದುವರೆವಿಗೂ ನಡೆಯದೇ ಇರತಕ್ಕಂತಹ ರೀತಿಯಲ್ಲಿ ಅಲ್ಲಿ ಡಕಾಯಿತಿ ನಡೆದಿದೆ ಎನ್ನುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಬಹುಶಃ ಜನತೆ ತಲ್ಲಣಿಸಿದ್ದಾರೆಂದೂ ಕೂಡ ನಾನು ತಿಳಿದುಕೊಂಡಿದ್ದೇನೆ. ಅದರ ವಿವರಗಳನ್ನು ನಂತರ ಕೊಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಸ್ಥಳಗಳಲ್ಲಿ ಈ ಒಂದು ಡಕಾಯಿತಿ ನಡೆದಿದೆ. ಆ ಸ್ಥಳಗಳಿಗೆ ತಕ್ಷಣವೇ ನಾನು ಹೋಗಿ ನೊಂದಂತಹವರ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಿದ್ದೇನೆ. ಅಲ್ಲದೆ ಸಾಕಷ್ಟು ಮಟ್ಟಿಗೆ ಗಾಯಾಳುಗಳಾಗಿ ಆಸ್ಪತ್ರೆಯಲ್ಲಿ ಇದ್ದಂತಹ ಜನರನ್ನೂ ಕೂಡ ಭೇಟಿಯಾಗಿ ಅವರಿಗೆ ಸಾಕಷ್ಟು ನೆರವು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನಮ್ಮ ಅಧಿಕಾರಿಗಳಿಗೆ ಸ್ವಲ್ಪ ಮಟ್ಟಿಗೆ ಅವರಿಗೆ ಧೈರ್ಯವನ್ನು ತುಂಬಿಸಿ ಇವನ್ನು ಹೇಗಾದರೂ ಮಾಡಿ ಕಂಡು ಹಿಡಿಯಲೇಬೇಕೆಂದು ಸಾಕಷ್ಟು ರೀತಿಯಲ್ಲಿ ಪ್ರೋತ್ಸಾಹ ವನ್ನೂ ಕೂಡ ಕೊಟ್ಟು ಬಂದಿದ್ದೇನೆ. ನಮ್ಮ ಶಾಸಕರಾಗಿರುವಂತಹ ಶ್ರೀಮಾನ್ ಬಸವರಾಜ್‌ರವರೂ ಕೂಡ ನನ್ನ ಜೊತೆಯಲ್ಲಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಂತಹ ಪ್ರಕರಣದಲ್ಲೂ ಕೂಡ ಪ್ರತಿಯೊಂದು ಸ್ಥಳಕ್ಕೂ ನಾನು ಹೋಗಿಬಂದಿದ್ದೇನೆ. ಆ ಸಂದರ್ಭದಲ್ಲಿ ಏನಾಯಿತು ಎಂದರೆ, ಅಲ್ಲಿಗೆ ಶ್ರೀ ಜಾನ್ ಪೋಪ್‌ರವರು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿಕೊಟ್ಟಂತಹ ಸಮಯ ಅದು. ಆಗ ಎಲ್ಲ ಅಧಿಕಾರಿಗಳೂ ಆ ಒಂದು ಕಾರ್ಯಕ್ರಮದ ಕಡೆಗೆ ಹೆಚ್ಚು ಆಸಕ್ತಿ ಹೊಂದಿದ್ದಂತಹ ಸನ್ನಿವೇಶ ಅದು. ಅದರಲ್ಲೂ ಅವರು ಅಮಾವಾಸ್ಯೆ ದಿವಸಗಳನ್ನು ಅನುಸರಿಸಿಕೊಂಡು ಈ ಒಂದು ಡಕಾಯಿತಿ ಪ್ರಕರಣ ಗಳು ನಡೆದಿವೆ. ಅದರ ವಿವರಗಳನ್ನು ಮುಂದೆ ಕೊಡುತ್ತೇನೆ. ಅಲ್ಲೇ ಇರತಕ್ಕಂತಹ ಅಪರಾಧಿಗಳು ಮಾಡಿರುವಂತಹ ಕೃತ್ಯ ಇದು ಎಂದು ನನಗೆ ಭಾಸವಾಗಿದೆ. ಕಾರಣ ಅವರು ಆಯ್ಕೆಮಾಡಿಕೊಂಡಿರ ತಕ್ಕಂತಹ ಸ್ಥಳ ರೈಲ್ವೇ ರಸ್ತೆ, ಹಾಗೂ ರಾಷ್ಟ್ರೀಯ ಹೆದ್ದಾರಿ ಇವೆರಡೂ ಕೂಡುವ ಸ್ಥಳಗಳನ್ನೇ ಹೆಚ್ಚು ಆಯ್ಕೆ ಮಾಡಿಕೊಂಡಿದ್ದಾರೆ. ಮತ್ತೆ ಈ ಒಂದು ಪ್ರಕರಣದಲ್ಲಿ ಹೊರಗಿನಿಂದ ಬಂದಂತಹ ಅಪರಾಧಿಗಳು ಮಾಡಿರುವಂತಹ ಕೃತ್ಯವಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಮನೆಯ ಪಕ್ಕದಲ್ಲಿ ಸಿಕ್ಕಿದಂತಹ ಗುದ್ದಲಿಯ ಹಿಂದುಗಡೆ ಇರತಕ್ಕಂತಹ ಕಾವಿನಿಂದ ತಲೆಗೆ–ಮುಖಕ್ಕೆ ಬಡಿದು ಸಿಕ್ಕಿದ್ದನ್ನು ದರೋಡೆ ಮಾಡಿದ್ದಾರೆ. ಮತ್ತೆ ಅವರು ಧನಿಕರ ಮನೆಗೆ ಮಾತ್ರ ಅವರು ನುಗ್ಗಿಲ್ಲ. ಸಾಮಾನ್ಯ ಜನಗಳ ಮನೆಗೂ ಕೂಡ ನುಗ್ಗಿ ಏನು ಸಿಕ್ಕುತ್ತದೆಯೋ ಅದನ್ನು ತೆಗೆದುಕೊಂಡು ಹೋಗಿದ್ದಾರೆ. ಏನು ಸಿಕ್ಕದಿದ್ದರೂ ಹಾಗೆ ಹೋಗಿದ್ದಾರೆ. ಆ ಸಂದರ್ಭದಲ್ಲಿ ಏನು ಅನ್ನಿಸಿತು ಎಂದರೆ. ಶಾಸನ ಸಭೆ ಪ್ರಾರಂಭವಾಗುವುದಕ್ಕಿಂತ ಒಂದು ತಿಂಗಳು ಮೊದಲೇ ಇದು ಪ್ರಾರಂಭವಾಗಿದೆ. ಅಲ್ಲಿಯವರೆಗೂ ಹೆಚ್ಚಿನ ಪ್ರಕರಣಗಳು ನಡೆದಿರುವಂತಹ ನಿದರ್ಶನಗಳು ಇಲ್ಲ. ಅದರಿಂದ ಇದರ ಹಿನ್ನಲೆಯಲ್ಲಿ

ಏನಾದರೂ ರಾಜಕೀಯ ಕೈವಾಡ ಇದೆಯೇ ಅಥವಾ ಇಲ್ಲವೇ ಎಂಬ ಎರಡನ್ನೂ ತಳ್ಳಿಹಾಕುವುದಕ್ಕಾಗು ವುದಿಲ್ಲಾ ಎಂಬ ಅಭಿಪ್ರಾಯಕ್ಕೆ ನಾನು ಬರಬೇಕಾಗಿದೆ ಈ ದೃಷ್ಟಿಯಿಂದ ಇದು ಬಹಳ ದೊಡ್ಡ ಡಕಾಯಿಂತಿ ಏನಲ್ಲ. ಒಂದೊಂದು ಕಡೆ ಗುತ್ತಿಗೆಯಲ್ಲಿರತಕ್ಕಂತಹ ಚೈವನ್ನು ಕಿತ್ತುಕೊಂಡು ಹೋಗಿದ್ದಾರೆ. ವೇತ್ತೆ ದಾರಿಯಲ್ಲಿ ಹೋಗುತ್ತಿದ್ದಂತಹವರನ್ನು ಹೆದುರಿಸಿ, ಅವರಲ್ಲಿರತಕ್ಕಂತಹ ಅಲ್ಪಸ್ವಲ್ಪ ಹಣವನ್ನು ಕಿತ್ತುಕೊಂಡು ಹೋಗಿದ್ದಾರೆ. ಇವೆಲ್ಲ ಒಳನಾಡಿನಲ್ಲಿರತಕ್ಕಂತಹ ಡಕಾಯಿತಿಗಳೇ ಮಾಡಿರತಕ್ಕ ಕೃತ್ಯಗಳು ಇವು. ಇಂತಹವರು ಅನೇಕ ಸಂದರ್ಭಗಳಲ್ಲಿ ಕಾರಣರಾಗಿದ್ದಾರೆಂದು ಜನಗಳು ನನ್ನ ಗಮನಕ್ಕೆ ತಂದಿದ್ದಾರೆ. ಈ ದೃಷ್ಟಿಯಲ್ಲೂ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ನನಗೆ ಸಿಕ್ಕಿರತಕ್ಕಂತಹ ಕೆಲವಾರು ಸಣ್ಣ ಅಪರಾಧಿಗಳನ್ನು ಈ ಬಗ್ಗೆ ಪ್ರಶ್ನೆ ಮಾಡಲಾಗುತ್ತಿದೆ. ಇದನು ನಾನು ಮುಂದೆ ತಿಳಿಸುತ್ತೇನೆ. ಡಕಾಯಿತಿಗೆ ಸಂಬಂಧಪಟ್ಟ ಹಾಗೆ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರತಕ್ಕ ಪ್ರಕರಣಗಳ ಬಗ್ಗೆ ನಾನು ಈಗಾಗಲೇ ಕೆಲವಾರು ಸಂದರ್ಭಗಳಲ್ಲಿ ನನ್ನ ಹೇಳಿಕೆ ಮುಂಖಾಂತರ ಸಭೆಯ ಗಮನಕ್ಕೆ ಅಲ್ಲಿ ನಡೆದಂತಹ ಕೃತ್ಯಗಳ ಬಗ್ಗೆ ವಿವರಗಳನ್ನು ನೀಡಿದ್ದೇನೆ.

> "ದಿನಾಂಕ ೨೩ನೇ ನವೆಂಬರ್ ೧೯೮೫ ರಂದು ಮಂಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಕಣ್ಣೂರು ಗ್ರಾಮದ ಬಳ್ಳೂರ್ ಗುಡ್ಡದಲ್ಲಿದ್ದ ಶ್ರೀಮತಿ ಅಯ್ಯಮ್ಮ ಎಂಬುವರ ಮನೆಗೆ ಕೆಲವು ಅಪರಿಚಿತ ವ್ಯಕ್ತಿಗಳು ನುಗ್ಗಿ ಆಕೆಯನ್ನು, ಆಚರಮ್ಮ ಮತ್ತು ಲತೀಫ್ ಎಂಬುವರಿಗೆ ಹಲ್ಲೆ ಮಾಡಿ ತೀವ್ರ ಗಾಯಗೊಳಿಸಿ ಐಯಮ್ಮನ ಹಾಗೂ ಅಚಾರಮ್ಮನ ಕಿವಿಯ ರಿಂಗ್‌ಗಳನ್ನು ತೆಗೆದುಕೊಂಡು ಹೋದರು."

ದಿನಾಂಕ ೯-೧-೧೯೮೬ರಂದು ರಾತ್ರಿ ಬಂಟವಾಳದ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಕಂಟ್ಟ ಗ್ರಾಮದ ಕುಪ್ಪಿಲ ರಾಮಣ್ಣ ಶೆಟ್ಟಿ, ಆತನ ಪತ್ನಿ ಉಮಾವತಿ ಮತ್ತು ಮಕ್ಕಳು ಇವರ ಮೇಲೆ ಕೆಲವು ಅಪರಿಚಿತ ದುಷ್ಕರ್ಮಿಗಳು ಅತಿಕ್ರಮಣ ನಡೆಸಿ ಅವರಿಗೆ ಗುದ್ದಲಿಯ ಹಿಂಬಾಗದಿಂದ ಗಾಯ ಗಳನ್ನು ಉಂಟು ಮಾಡಿ ಸುಮಾರು ೧೫೦೦ ರೂ. ಗಳ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಂಡು ಹೋದರು.

ದಿನಾಂಕ ೧೭-೧-೧೯೮೬ರಂದು ರಾತ್ರಿ ಸುಮಾರು ೧–೧೦ ಗಂಟೆ ಸಮಯದಲ್ಲಿ ಮೇಲ್ಕಂಡ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಬಸ್ತಿಪಡ್ಪು ಎಂಬ ಸ್ಥಳದಲ್ಲಿ ಪುಷ್ಪಾವತಿ ಎಂಬುವರ ಮನೆಗೆ ಇಬ್ಬರು ಅಪರಿಚಿತ ದುಷ್ಕರ್ಮಿಗಳು ನುಗ್ಗಿ ಆಕೆಯನ್ನು, ಆಕೆಯ ಗಂಡ ಸುಂದರ ಮತ್ತು ಇಬ್ಬರು ಮಕ್ಕಳನ್ನು ಮಾರಕ ಆಯುಧಗಳಿಂದ ಹೊಡೆದು ತೀವ್ರ ಗಾಯಗೊಳಿಸಿ ಸುಮಾರು ೯ ಸಾವಿರ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಂಡು ಹೋದರು.

ದಿನಾಂಕ ೨೬-೧-೧೯೮೬ರಂದು ಮಧ್ಯ ರಾತ್ರಿ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಆವಂಜೆ ಗ್ರಾಮದ ನೀರಪಾಲ್ಕೆಯ ಲಚ್ಚುನಾಯಕನ ಮನೆಗೆ ಕೆಲವು ಅಪರಿಚಿತ ದುಷ್ಕರ್ಮಿಗಳು ನುಗ್ಗಿ ಲಚ್ಚುನಾಯಕ ಆತನ ಪತ್ನಿ ಪಡು ಬಾಯಿ ಹಾಗೂ ಮಕ್ಕಳಾದ ಗಿರಿಜ, ಸುಮಾ, ಪ್ರೇಮ, ಜಯಂತ, ಮೊಮ್ಮಗ ರಾಘವೇಂದ್ರ ಇವರುಗಳನ್ನು ಗುದ್ದಲಿಯ ಹಿಂಬಾಗದಿಂದ ಹೊಡೆದು ಗಾಯ ಗಳನ್ನು ಉಂಟು ಮಾಡಿ ಸುಮಾರು ೭೦೦ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ದೋಚಿ ಕೊಂಡು ಹೋದರು. ಈ ಪ್ರಕರಣದಲ್ಲಿ ೫ ವರ್ಷ ವಯಸ್ಸಿನ ರಾಘವೇಂದ್ರನು ಮೃತಪಟ್ಟನು.

ದಿನಾಂಕ ೧-೨-೧೯೮೬ರಂದು ಮಧ್ಯ ರಾತ್ರಿ ಹಿರಿಯಡ್ಕ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಗುಡಿಯಾರ್ ತೋಟದ ಚಂದಪ್ಪ ಮೌಲ್ಯ ಎಂಬುವರ ಮನೆಗೆ ಕೆಲವು ಅಪರಿಚಿತ ದುಷ್ಕರ್ಮಿಗಳು ನುಗ್ಗಿ ಆತನನ್ನು, ಆತನ ಪತ್ನಿ ಇಬ್ಬರು ಮಕ್ಕಳು ಮತ್ತು ಮಂಗಳನ್ನ ಮಾರಕ ಆಯುಧಗಳಿಂದ ಹೊಡೆದು ಗಾಯಗೊಳಿಸಿ ಪರಾರಿಯಾದರು.

ದಿನಾಂಕ ೫-೨-೧೯೮೬ರಂದು ರಾತ್ರಿ ಸುಮಾರು ೨ ಗಂಟೆ ಸಮಯದಲ್ಲಿ ಉಲ್ಲಾಳ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಪರಮಾಣ್ಣರ್ ಗ್ರಾಮದ ತೊಕೊಟ್ಟು ಗ್ರಾಮದ ಅಬ್ಬಾಸ್‌ರವರ ಪತ್ನಿ ಶ್ರೀಮತಿ ಐಸಮ್ಮನವರ ಮನೆಯ ಮುಂದೆ ನಿಲ್ಲಿಸಿದ್ದ ಸಿಟಿ ಬಸ್ ಒಳಗೆ ಒಬ್ಬ ಅಪರಿಚಿತನು ನುಗ್ಗಿ ನಿದ್ರಿಸುತ್ತಿದ್ದ ಕ್ಲೀನರ್ ಸಾಹಿಬ್ ಎಂಬುವನ ತಲೆಗೆ ಪಿಕಾಶಿಯಿಂದ ಹೊಡೆದು ತೀವ್ರ ಗಾಯಗಳನ್ನು ಮಾಡಿದನು. ಅನಂತರ ಮೇಲ್ಕಂಡ ದುಷ್ಕರ್ಮಿಯು ಆಕೆಯ ಮನೆಯ ಹೆಂಚುಗಳನ್ನು ತೆಗೆದು ಒಳ ನುಗ್ಗಿ ಕೊಠಡಿಯಲ್ಲಿ ನಿದ್ರಿಸುತ್ತಿದ್ದ ಇಸ್ಮಾಯಿಲ್ ಎಂಬುವರ ತಲೆಗೆ ಪಿಕಾಶಿಯಿಂದ ಹೊಡೆದು ಗಾಯ ಗೊಳಿಸಿ ೮೫೦ ರೂಪಾಯಿ ಹಣವನ್ನು ದೋಚಿಕೊಂಡು ಹೋದರು.

ಅದೇ ರೀತಿ ರಾತ್ರಿ ಸುಮಾರು ೨-೩೦ ಗಂಟೆ ಸಮಯದಲ್ಲಿ ಅದೇ ಗ್ರಾಮದ ಅಬ್ದುಲ್ ಅಮೀದ್ ಎಂಬುವರ ಮನೆಗೆ ನುಗ್ಗಿ ಮನೆಯಲ್ಲಿದ್ದ ಆತನ ಪತ್ನಿ ಹಾಗೂ ೬ ತಿಂಗಳ ಹೆಣ್ಣು ಮಗುವಿನ ತಲೆಗೆ ಪಿಕಾಸಿಯಿಂದ ಹೊಡೆದು ತೀವ್ರ ಗಾಯಗೊಳಿಸಿ ವಸ್ತುಗಳನ್ನು ದೋಚಲು ಪ್ರಯತ್ನಿಸಿದ. ಆ ಸಮಯದಲ್ಲಿ ಶ್ರೀ ಅಬ್ದುಲ್ ಅಮೀದ್‌ರವರು ಎಚ್ಚರಗೊಂಡು ಪಿಕಾಸಿಯನ್ನು ಕಿತ್ತುಕೊಂಡರು, ಆಗ ದುಷ್ಕರ್ಮಿಯು ಓಡಿ ಹೋದನು.

ದಿನಾಂಕ ೩-೨-೧೯೮೬ರಂದು ರಾತ್ರಿ ಹಿರಿಯಡ್ಕ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಬೊಮ್ಮರಬೆಟ್ಟು ಗ್ರಾಮದ ಕೊಪ್ಪಲದಲ್ಲಿರುವ ಶ್ರೀಮತಿ ಕಮಲ ಮಾಹಿಲತಿ ಎಂಬುವರ ಮನೆಗೆ ಕೆಲವು ಅಪರಿಚಿತ ದುಷ್ಕರ್ಮಿಗಳು ನುಗ್ಗಿ ಆಕೆಯ ತಲೆಗೆ ತೀವ್ರವಾಗಿ ಗಾಯಗೊಳಿಸಿ ಆಕೆಯ ಕಿವಿ ರಿಂಗ್‌ಗಳನ್ನು ದೋಚಿಕೊಂಡು ಹೋದರು, ಆಕೆಯು ಮಣಿಪಾಲದಲ್ಲಿರುವ ಕೆ. ಎಂ. ಸಿ. ಆಸ್ಪತ್ರೆಯಲ್ಲಿ ದಿನಾಂಕ ೧೫-೨-೧೯೮೬ರಂದು ಮೃತಪಟ್ಟಳು.

ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲೂ ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿದೆ. ಗಾಯಗೊಂಡವರನ್ನು ಸೂಕ್ತ ಚಿಕಿತ್ಸೆಗಾಗಿ ಆ ಸ್ಥಳಗಳಿಗೆ ಹತ್ತಿರವಿದ್ದ ಆಸ್ಪತ್ರೆಗಳಿಗೆ ಕಳುಹಿಸಲಾಯಿತು.

ಈಗ ಬೆಂಗಳೂರಿಗೆ ಸಂಬಂಧಪಟ್ಟ ವಿಚಾರವನ್ನು ಹೇಳಿ ಅಮೇಲೆ ನಾವೇನು ಕ್ರಮ ತೆಗೆದುಕೊಂಡಿದ್ದೇವೆಂಬುದನ್ನು ಹೇಳುತ್ತೇನೆ.

ದಿನಾಂಕ ೧೦-೧-೧೯೮೬ರಂದು ಯಲಹಂಕ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ೨ ಡಕಾಯಿತಿ ಪ್ರಕರಣಗಳು ವರದಿಯಾಗಿವೆ. ದಿನಾಂಕ ೧೧-೨-೧೯೮೬ರಂದು ಹೆಬ್ಬಾಳ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ೩ ಡಕಾಯಿತಿಯ ಪ್ರಕರಣಗಳು ವರದಿಯಾದವು.

ಮೊದಲ ಡಕಾಯಿತಿ ಪ್ರಕರಣದಲ್ಲಿ ಅಮೃತಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀ ಎ.ಬಿ. ಅಶ್ವಥಯ್ಯನವರ ಮನೆಯಲ್ಲಿ ೮ ಜನರ ಗುಂಪೊಂದು ರಾತ್ರಿ ೧ ಗಂಟೆ ಸಮಯದಲ್ಲಿ ಡಕಾಯಿತಿ ನಡೆಸಿದೆ. ಈ ಡಕಾಯಿತಿಯಲ್ಲಿ ಸದರಿ ಅಶ್ವಥಯ್ಯನವರು ಅವರ ಗುಂಡಿಗೆ ಬಲಿಯಾದರು. ಈ ಪ್ರಕರಣದಲ್ಲಿ ಸುಮಾರು ೧೬,೯೦೦ ರೂಪಾಯಿ ನಷ್ಟು ಆಸ್ತಿ ದೋಚಲಾಗಿದೆ. ಅದೇ ದಿನ ರಾತ್ರಿ ಸುಮಾರು ೧-೫೦ ಗಂಟೆ ಸಮಯದಲ್ಲಿ ನಡೆದ ಇನ್ನೊಂದು ಪ್ರಕರಣದಲ್ಲಿ ದರೋಡೆಕೋರರು ಬಳ್ಳಾರಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕನ್ನು ಲೂಟಿ ಮಾಡಿ ೧೦೧೫ ರೂಪಾಯಿಗಳು ಹಾಗೂ ಒಂದು ಕೈ ಗಡಿಯಾರವನ್ನು ದೋಚಿಕೊಂಡು ಪರಾರಿಯಾಗಿರುತ್ತಾರೆ.

ದಿನಾಂಕ ೧೧-೧-೧೯೮೬ರಂದು ರಾತ್ರಿ ೧-೫೫ ಗಂಟೆ ಸಮಯದಲ್ಲಿ ಬಾಣಸವಾಡಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಾಮನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಶೋಭಾ ಕೋಳಿ ಫಾರಂ ಮನೆಯಲ್ಲಿ ೬-೮ ಜನ ಡಕಾಯಿತರು ಅದೇ ರೀತಿ ಡಕಾಯಿತಿ ನಡೆಸಿರುತ್ತಾರೆ. ಈ ಡಕಾಯಿತರ ಗುಂಡಿಗೆ ಈ ಮನೆಯಲ್ಲಿದ್ದ ಎಡ್ವಿನ್‌ರವರು ಬಲಿಯಾದರು. ಮತ್ತು ಬಿನ್ನಿ ಎಂಬುವರ ತಲೆಗೆ ಗಾಯ ಉಂಟು ಮಾಡಿದರು. ಈ ಪ್ರಕರಣದಲ್ಲಿ ೧೪೯೮ ರೂಪಾಯಿಗಳು ಬೆಲೆ ಬಾಳುವಂಥ ೨ ಚಿನ್ನದ ಸರಗಳು, ಒಂದು ಪೋರ್ಟಬಲ್ ಟಿ.ವಿ. ಒಂದು ಕೈಗಡಿಯಾರ, ಒಂದು ಬ್ರೀಫ್ ಕೇಸ್, ಒಂದು ಸೂಟ್‌ಕೇಸ್, ದೋಚಿಕೊಂಡು ಹೋಗಿರುವರು.

ದಿನಾಂಕ ೧೩-೧-೧೯೮೬ರಂದು ರಾತ್ರಿ ೧-೪೫ ಗಂಟೆ ಸಮಯದಲ್ಲಿ ಮಹದೇವಪುರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಚಿನ್ನಪ್ಪನಹಳ್ಳಿ ಗ್ರಾಮದ ಹೊರವಲಯದ ಶ್ರೀ ಎಂ. ಟಿ. ಥಾಮಸ್‌ರವರ ತೋಟದ ಮನೆಗೆ ೮ ಜನ ಡಕಾಯಿತರು ನುಗ್ಗಿ ಸುಮಾರು ೪೬ ಸಾವಿರ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಯಾರಿಗೂ ಪ್ರಾಣಾಪಾಯವಾಗಿಲ್ಲ.

ದಿನಾಂಕ ೧೫-೧-೧೯೮೬ರಂದು ಸಂಜೆ ೬-೩೦ ಗಂಟೆ ಸಮಯದಲ್ಲಿ ನಗರದ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಬ್ಲೂಮೂನ್ ಸಿನೆಮಾ ಕಾಂಪ್ಲೆಕ್ ೨ನೇ ಮಹಡಿಯಲ್ಲಿರುವ ಸೂರಜ್‌ಮಲ್ ಡೈಮಂಡ್ ಅಂಗಡಿಗೆ ಶಸ್ತ್ರಧಾರಿಗಳಾದ ೪ ಆಗಂತುಕರು ಪ್ರವೇಶಿಸಿ ಭದ್ರತಾ ಪಹರೆಯವನಾದ ಶ್ರೀ ಅಂಥೋಣಿಯವರಿಗೆ ಗುಂಡು ಹಾರಿಸಿ ಸಾಯಿಸಿದರು. ಆದರೆ ಯಶವಂತಪುರ ಆರಕ್ಷಕ ಉಪನಿರೀಕ್ಷಕರು ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದ ಶ್ರೀಲಂಕಾದ ಕನ್ನದಾಸ ಎಂಬುವವನನ್ನು ದಸ್ತಗಿರಿ ಮಾಡಿದರು.

ದಿನಾಂಕ ೮-೨-೧೯೮೬ರಂದು ಮಧ್ಯ ರಾತ್ರಿ ೧-೩೦ ರಿಂದ ೨ ಗಂಟೆ ಸಮಯದಲ್ಲಿ ಯಲಹಂಕ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಹೊರವಲಯದ ಬೆಂಕಟಲ ಗ್ರಾಮದ ಬಳಿ ಮಾರುತಿ ಬಡಾವಣೆಯಲ್ಲಿರುವ ಥಾಮಸ್‌ನ ಮನೆಗೆ ನುಗ್ಗಿ ೬ ಕೈಗಡಿಯಾರಗಳು ೫ ಸೂಟ್ ಕೇಸುಗಳು, ೩ ಕಾಂಚಿಪುರಂ ಸೀರೆಗಳು, ೧ ಟೂ ಇನ್ ಒನ್ ನ್ಯಾಷನಲ್ ಪ್ಯಾನಾಸಿಕ್, ಟೇಪ್ ರೆಕಾರ್ಡರ್, ಒಂದು ಪ್ಲಾಷ್ ಕ್ಯಾಮರ, ಒಂದು ಟಾಂಗೋ ಮೀಟರ್ ಒಂದು ಇಸ್ತ್ರಿ ಪೆಟ್ಟಿಗೆ, ಒಂದು ಮೆಟಲ್ ಬೀರ್ ಮೊಗ್ ಮತ್ತು ೨೮ ಸಾವಿರ ಬೆಲೆ ಬಾಳುವ ರಿಂಗ್ಸ್, ಬೆಳ್ಳಿಗಳು ಸೀರೆಗಳು, ಕಿವಿ ಓಲೆಗಳು ಮತ್ತು ಸ್ವಲ್ಪ ಹಣವನ್ನು ದೋಚಿಕೊಂಡು ಹೋದರು. ಯಾರಿಗೂ ಪ್ರಾಣಹಾನಿಯಾಗಿರುವುದಿಲ್ಲ.

ದಿನಾಂಕ ೧೧-೨-೧೯೮೬ರಂದು ರಾತ್ರಿ ೧-೩೦ ರಿಂದ ೨-೧೦ ಗಂಟೆ ಸಮಯದಲ್ಲಿ ಹೆಬ್ಬಾಳ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುವ ಚಾಮುಂಡಿ ನಗರ ಹೊರವಲಯದಲ್ಲಿ ರಾಮಣ್ಣನವರ ಮನೆಗೆ ನುಗ್ಗಿ ರಾಮಣ್ಣನ ಎಡಗೈಗೆ ಗುಂಡು ಹಾರಿಸಿದರು. ಮತ್ತು ಗಾರೆ ಕೆಲಸ ಮಾಡುವ ರಾಮಣ್ಣನ ಪಕ್ಕದ ಮನೆಯವನಾದ ವೆಂಕಟಯ್ಯನು ಡಕಾಯಿತರ ಗುಂಡಿಗೆ ಬಲಿಯಾದನು. ಅನಂತರ ಆಸ್ಪತ್ರೆಯಲ್ಲಿ ರಾಮಣ್ಣನು ಮೃತಪಟ್ಟನು. ಈ ಪ್ರಕರಣದಲ್ಲಿ ಸುಮಾರು ೪೫೦೦ ರೂಪಾಯಿಗಳು ಹಣವನ್ನು ಮತ್ತು ಸುಮಾರು ಒಂದು ಸಾವಿರ ಬೆಲೆ ಬಾಳುವ ಒಡವೆ ವಸ್ತುಗಳನ್ನು ದೋಚಿಕೊಂಡು ಹೋದರು. ಅನಂತರ ಡಕಾಯಿತರು ಅದೇ ಬಡಾವಣೆಯ ನಾರಾಯಣಪ್ಪ ಬ್ಲಾಕಿನ ಸುಬ್ಬಯ್ಯನ ಮನೆಗೆ ನುಗ್ಗಿ ಸುಮಾರು ೧೫೦೦ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಂಡು ಹೋದರು. ಈ ಪ್ರಕರಣದಲ್ಲಿ ಸುಬ್ಬಯ್ಯನ ಸಹಾಯಕ್ಕೆ ಬಂದ ಸೋಮಣ್ಣನು ಡಕಾಯಿತರ ಗುಂಡಿಗೆ ಬಲಿಯಾದನು.

ಅದೇ ರಾತ್ರಿ ಬೆಳಗಿನ ಜಾವ ೨-೪೫ ರಿಂದ ೩ ಗಂಟೆಯೊಳಗೆ ಮೇಲ್ಕಂಡ ಡಕಾಯಿತರು ಚೋಳನಾಯಕನಹಳ್ಳಿ ದಿಣ್ಣೆ ಮನೋರಾಯನಪಾಳ್ಯ ಗೌಡರ ನಾರಣಪ್ಪನ ಬ್ಲಾಕ್‌ನ ವೆಂಕಟರಾಮಯ್ಯನವರ ಮಗ ಶ್ರೀ ವಿ. ಗಿರಿಯಾವರ ಮನೆಗೆ ನುಗ್ಗಿ ೪೫೦೦ ರೂ. ಬೆಲೆ ಬಾಳುವ ವಸ್ತುಗಳನ್ನು ಹಾಗೂ ನಗದನ್ನು ದೋಚಿಕೊಂಡು ಹೋದರು. ಈ ಪ್ರಕರಣದಲ್ಲಿ ಯಾರಿಗೂ ಗಾಯಗಳಾಗಿಲ್ಲ.

ದಿನಾಂಕ ೧೩-೨-೮೬ರಂದು ರಾತ್ರಿ ಸುಮಾರು ೩ ಗಂಟೆ ಸಮಯದಲ್ಲಿ ನಲ್ಲೂರಹಳ್ಳಿ ಗ್ರಾಮದ ದಿಲೀಪ್‌ಸಿಂಗ್‌ರವರ ಮನೆಗೆ ಕೆಲವು ಡಕಾಯಿತರು ನುಗ್ಗಿ ದಿಲೀಪ್‌ಸಿಂಗ್‌ರವರ ಮೇಲೆ ಹಲ್ಲೆ ನಡೆಸಿ ಸುಮಾರು ೫ ಸಾವಿರ ರೂಪಾಯಿಗಳ ಬೆಲೆಬಾಳುವ ಚಿನ್ನದ ಒಡವೆಗಳನ್ನು ಮತ್ತು ಪೋರ್ಟಬಲ್ ಟಿ.ವಿ.ಯನ್ನು ದೋಚಿಕೊಂಡು ಹೋದರು. ಈ ಪ್ರಕರಣದಲ್ಲಿ ದಿಲೀಪ್‌ಸಿಂಗ್‌ರವರು ಡಕಾಯಿತರ ಗುಂಡಿಗೆ ಬಲಿಯಾದರು.

ಮೇಲ್ಕಂಡ ಪ್ರಕರಣಗಳಲ್ಲಿ ಈ ಕೆಳಕಂಡ ವಿಶೇಷ ಲಕ್ಷಣಗಳುಳ್ಳ ಡಕಾಯಿತರು ಆಯ್ಕೆ ಮಾಡಿರುವುದು ಕಂಡುಬರುತ್ತದೆ.

೧. ಒಂಟಿ ಮನೆಗಳನ್ನು ಆಯ್ಕೆ ಮಾಡಿ ಹೆಚ್ಚಿನ ಪ್ರಕರಣಗಳಲ್ಲಿ ಶ್ರೀಮಂತರ ಮನೆಗಳನ್ನು ಕೆಲವು ಪ್ರಕರಣಗಳಲ್ಲಿ ಮಧ್ಯಮ ವರ್ಗದವರ ಮನೆಗಳನ್ನು ಆಯ್ಕೆ ಮಾಡಿರುವುದು.

೨. ಅವರು ಬೆಂಗಳೂರು ನಗರದ ಹೊರವಲಯದಲ್ಲಿರುವ ತೋಟದ ಮನೆಗಳನ್ನು ಆಯ್ಕೆ ಮಾಡಿರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅನುಕೂಲಕ್ಕೆ ತಕ್ಕ ಹಾಗೆ ಆಯ್ಕೆ ಮಾಡಿದ್ದಾರೆ.

ಶ್ರೀ ಬಿ. ರಾಚಯ್ಯ.—ನಡುವೆ ಎದ್ದು ಮಾತನಾಡಿದರೆ ಹೇಗೆ ?

ಶ್ರೀ ಆರ್. ವೆಂಕಟರಾಮಯ್ಯ.—ಅದೆಲ್ಲ ಪತ್ರಿಕೆಯಲ್ಲಿ ಬಂದಿದೆ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಳ್ಳರು ಕಳ್ಳತನ ಮಾಡುವುದಕ್ಕೆ ಬೇಕಾದ ಹಾಗೆ ಅನುಕೂಲ ಮಾಡಿಕೊಳ್ಳುತ್ತಾರೆ.

ಅಧ್ಯಕ್ಷರು.—ನೀವು ಕೇಳದಿದ್ದರೆ ಅಡ್ಡಿಯಿಲ್ಲ. ನೀವು ಹೇಳಿದ್ದನ್ನು ನಾನು ಕೇಳಿದ್ದೇನೆ ಈಗ ಅವರು ಹೇಳುವುದನ್ನು ನಾನು ಕೇಳಬೇಕಾಗಿದೆ.

ಶ್ರೀ ಬಿ. ರಾಚಯ್ಯ.— ೩) ಡಕಾಯಿತರು ಬಂದೂಕು, ಗಂಡ್ಗಲಿ, ಮಾರಕ ಆಯುಧಗಳು, ಕಲ್ಲುಗಳನ್ನು ಉಪಯೋಗಿಸಿರುವುದು.

೪. ಬಲಾತ್ಕಾರದಿಂದ ಬಾಗಿಲುಗಳನ್ನು ತೆಗೆಸಿರುವುದು.

೫. ಸ್ವಲ್ಪ ಪ್ರತಿಭಟನೆ ಸೂಚಿಸಿದ್ದಕ್ಕೆ ಮನೆಯವರನ್ನು ಗುಂಡಿನಿಂದ ಸಾಯಿಸಿರುವುದು.

೬. ಅವರು ನಗದು ಹಣ, ಗಡಿಯಾರ, ಒಡವೆ, ಎಲೆಕ್ಟ್ರಾನಿಕ್ ಉಪಕರಣಗಳು, ಬ್ಲಾಂಕೆಟ್ಸ್, ಟಿ.ವಿ. ವಿ.ಸಿ.ಆರ್. ಮುಂತಾದವುಗಳನ್ನು ದೋಚಿರುವುದು.

೭. ಮೇಲ್ಕಂಡ ಹೆಚ್ಚಿನ ಪ್ರಕರಣಗಳಲ್ಲಿ ಡಕಾಯಿತರು ಅವರ ಮುಖವನ್ನು ಮುಚ್ಚಿಕೊಂಡಿದ್ದು ಇನ್ನು ಕೆಲವು ಪ್ರಕರಣಗಳಲ್ಲಿ ಅವರನ್ನು ಗುರುತಿಸುವುದರ ಬಗ್ಗೆ ಲೆಕ್ಕಿಸದೆ ಇರುವುದು.

೮. ಅವರು ಕ್ಯಾನ್ವಾಸ್ ಷೂಗಳನ್ನು ಅಥವಾ ಆ್ಯಂಕಲ್ ಬೂಟ್‌ಗಳನ್ನು ಉಪಯೋಗಿಸಿರುವುದು.

೯. ಅವರು ಕೆಲವು ಪ್ರಕರಣಗಳಲ್ಲಿ ಮನೆಯವರನ್ನು ಒಂದು ಕೊಠಡಿಯಲ್ಲಿ ಸೇರಿಸಿ ಹೊರಗಡೆಯಿಂದ ಚಿಲಕವನ್ನು ಹಾಕಿರುವುದು.

೧೦. ಅವರು ಸಾಮಾನ್ಯವಾಗಿ ಕತ್ತಲೆಯ ರಾತ್ರಿಗಳನ್ನು ಆರಿಸಿಕೊಂಡಿರುವುದು.

೧೧. ಡಕಾಯಿತರು ಅರ್ಧಂಬರ್ಧ ಹಿಂದಿ, ಕನ್ನಡ, ಇಂಗ್ಲೀಷನ್ನು ಮನೆಯವರ ಜೊತೆಯಲ್ಲಿ ಮಾತನಾಡುವಾಗ ಉಪಯೋಗಿಸಿರುವುದು.

೧೨. ಕೆಲವು ಪ್ರಕರಣಗಳಲ್ಲಿ ಅವರು ಪೋಲೀಸರೇ ಎಂದು ಹೇಳಿಕೊಂಡಿರುವುದು, ಮತ್ತು ಖಾಕಿ ಬಟ್ಟೆಯಲ್ಲಿ ಇದ್ದದ್ದು.

೧೩. ಅವರು ಪ್ರಕರಣಗಳ ಸ್ಥಳಗಳಿಗೆ ವಾಹನ ಅಥವಾ ಕಾಲು ನಡಿಗೆಯಿಂದ ಹೋದರು ಎಂಬುದು ಖಚಿತವಾಗಿಲ್ಲ. ಆದರೆ ಅವರು ಸರ್ವೆ ತೋಪು ಅಥವಾ ನೀಲಗಿರಿ ತೋಪನ್ನು ತಪ್ಪಿಸಿಕೊಳ್ಳಲು ಉಪಯೋಗಿಸಿಕೊಂಡಿರುವುದು.

ಡಕಾಯಿತರು ಸ್ಥಳೀಯರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದು ಅಥವಾ ಸ್ಥಳೀಯ ದುಷ್ಕರ್ಮಿಗಳ ಸಹಕಾರವನ್ನು ಹೊಂದಿರಬಹುದು. ಅದು ಈ ಕೆಳಕಂಡ ಅಂಶಗಳಿಂದ ಊಹಿಸಬಹುದಾಗಿದೆ.

೧ ಅವರು ಬೆಂಗಳೂರು ನಗರದಲ್ಲಿ ಇದ್ದು ಅನುಕ್ರಮವಾಗಿ ರಾತ್ರಿ ವೇಳೆಯಲ್ಲಿ ನಡೆಸಿರುವುದು.

೨ ಅವರು ಅವರ ಗುರಿಗಳನ್ನು ಆಯ್ಕೆ ಮಾಡಿರುವುದು.

೩ ಡಕಾಯಿತಿ ಗುಂಪಿನ ಕೆಲವರು ಕನ್ನಡದಲ್ಲಿ ಮಾತನಾಡಿರುವುದು.

೪ ಅವರು ಟಿ.ವಿ. ಮತ್ತು ವಿ.ಸಿ.ಆರ್. ಮುಂತಾದ ಭಾರವಾದ ವಸ್ತುಗಳನ್ನು ದೋಚಿರುವುದು.

ಈ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು ದಿನಾಂಕ ೧೧-೨-೮೬ ರಂದು ಸಭೆ ಸೇರಿ ಮೇಲ್ಕಂಡ ಪ್ರಕರಣಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದರು, ಡಕಾಯಿತಿ ನಡೆದಿರುವ ಸ್ಥಳಗಳನ್ನು ಪರೀಕ್ಷಿಸಲಾಗಿ ಡಕಾಯಿತರು ನಿಗದಿತ ಮತ್ತು ಅನುಕೂಲವಾದ ಸ್ಥಳದಿಂದ ನಡೆಸಿರಬಹುದು ಎಂದು ತಿಳಿದುಬರುತ್ತದೆ. ಅನಂತಪುರ ಜಿಲ್ಲೆ ಹಾಗೂ ಹೈದರಾಬಾದ್‌ನಗರದಲ್ಲಿ ಡಕಾಯಿತಿ ಮಾಡುವುದಕ್ಕೆ ಅಳವಡಿಸಿದ ವಿಧಾನಗಳ ಬಗ್ಗೆ ಚರ್ಚಿಸಲಾಯಿತು. ಹೈದರಾಬಾದ್ ನಗರದಲ್ಲಿ ಕೆಲವು ಕುಪ್ರಸಿದ್ಧ ದುಷ್ಕರ್ಮಿಗಳು ಬಾಡಿಗೆಮನೆ ಪಡೆದು ಅಲ್ಲಿಂದ ಪ್ರಾರಂಭಿಸಿದರೆಂದು ಹೇಳಲಾಗಿದ್ದು ಆದ್ದರಿಂದ ಅಪರಿಚಿತ ವ್ಯಕ್ತಿಗಳನ್ನು ಕೂಲಂಕುಷವಾಗಿ ಪರೀಕ್ಷಿಸಬೇಕಾಗುತ್ತದೆ. ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಸಶಸ್ತ್ರ ಡಕಾಯಿತಿಯಲ್ಲಿ ತೊಡಗಿದ್ದ ಸಿದ್ದಾಪುರ ಗ್ಯಾಂಗ್‌ನ ದುಷ್ಕರ್ಮಿಗಳ ಬಗ್ಗೆ ಪರೀಕ್ಷಿಸಲು ಕೋರಲಾಯಿತು. ಅವರುಗಳಿಗೆ ದಿನಾಂಕ ೩೦-೬-೮೩ರಂದು ೨ ವರ್ಷ ಕಠಿಣ ಸಜೆಯಾಗಿದ್ದು ಅವರು ಈಗ ಹೊರಗೆ ಬಂದಿರುವುದು ಸಾಧ್ಯತೆ ಇದೆ. ಮೈಕೋ ಕಾರ್ಖಾನೆಯ ಬಿಡಿ ಭಾಗಗಳ ಕಳ್ಳತನದಲ್ಲಿ ಕೆಲವು ದುಷ್ಕರ್ಮಿಗಳು ಇದ್ದು ಅವರಲ್ಲಿ ಒಬ್ಬನಿಗೆ ಟೆಂಪೋ ಗಾಡಿ ಇದ್ದು ಆತನು ಲಿಂಗರಾಜಪುರದ ನಿವಾಸಿಯಾಗಿರುವನು. ಈ ಗುಂಪಿನ ತಪ್ಪು ನಡವಳಿಕೆಯನ್ನು ಪರೀಕ್ಷಿಸಲಾಗುತ್ತಿದೆ. ಷೇರ್ ನಾಗ ಎಂಬುವನ ಮುಂದಾಳತ್ವದಲ್ಲಿರುವ ಧರ್ಮಾವರಂ ದುಷ್ಕರ್ಮಿಗಳು ಗ್ಯಾಂಗ್‌ನ ಚಟುವಟಿಕೆಗಳ ಬಗ್ಗೆ ಮಾತನಾಡಲಾಯಿತು. ಅವರ

ನಡವಳಿಕೆಯ ಬಗ್ಗೆ ನೋಡುವುದು. ಮೇಲ್ಕಂಡ ಪ್ರಕರಣಗಳಿಗೆ ಈಡಾದ ಪ್ರದೇಶಗಳನ್ನು ವಿಂಗಡಿಸಿ ಅಪರಿಚಿತ ವ್ಯಕ್ತಿಗಳು ಮನೆಗಳನ್ನು ತೆಗೆದುಕೊಂಡಿದ್ದಲ್ಲಿ ತ್ವರಿತವಾಗಿ ಶೋಧನೆಗೆ ಒಳಪಡಿಸುವುದು.

ಬೆಂಗಳೂರು ಜಿಲ್ಲಾ ಪೋಲೀಸರು ಅವರ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ರಾತ್ರಿ ೯ ಗಂಟೆಯಿಂದ ಬೆಳಗ್ಗೆ ೫ ಗಂಟೆವರೆಗೆ ಅಪರಿಚಿತ ವ್ಯಕ್ತಿಗಳು ಮತ್ತು ದುಷ್ಕರ್ಮಿಗಳು ಬರದಂತೆ ತಡೆಯುವಂತೆ ತೀರ್ಮಾನಿಸಲಾಯಿತು. ರೈಲ್ವೆ ಆರಕ್ಷಕ ಉಪ ಮಹಾ ನಿರೀಕ್ಷಕರವರಿಗೆ ಅಪರಿಚಿತ ವ್ಯಕ್ತಿಗಳನ್ನು ಪರೀಕ್ಷಿಸುವಂತೆಯೂ ಮತ್ತು ಟ್ರಾಲಿ ಪೆಟ್ರೋಲಿಂಗ್ ವ್ಯವಸ್ಥೆ ಮಾಡುವಂತೆಯೂ ಸೂಚಿಸಲಾಯಿತು. ಬೆಂಗಳೂರು ನಗರದ ಹೊರ ವಲಯದಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಸ್ವಯಂ ರಕ್ಷಣೆಗಾಗಿ ಬಂದೂಕು ಪರವಾನಗಿಯನ್ನು ಕೊಡಲು ಒತ್ತಿ ಹೇಳಲಾಗಿದೆ. ಚರ್ಚೆಯ ಸಮಯದಲ್ಲಿ ವಾಹನಗಳನ್ನು ರೂಢಿ ಪದ್ಧತಿಯಂತೆ ಪರೀಕ್ಷಿಸುವುದು, ನಾಕಾ ಬಂಧಿ ಜಾರಿಗೊಳಿಸುವುದು ಕಳ್ಳ ಮಾಲುಗಳನ್ನು ಪಡೆಯುವವರ ಬಗ್ಗೆ ಪರೀಕ್ಷಿಸುವುದು. ಸಶಸ್ತ್ರ ಮೀಸಲು ಪಡೆಯ ವ್ಯವಸ್ಥೆಯನ್ನು ಮಾಡುವ ಬಗ್ಗೆ ಮತ್ತೊಮ್ಮೆ ಸೂಚಿಸಲಾಯಿತು.

ಗಮನಾರ್ಹ ಪತ್ತೆಗಳು

ಕರ್ನಾಟಕ ರಾಜ್ಯದಲ್ಲಿ ಡಕಾಯಿತಿ ಪ್ರಕರಣಗಳನ್ನು ಪತ್ತೆ ಹಚ್ಚಿರುವುದು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಪ್ರಗತಿ ಪಥದಲ್ಲಿದೆ.

೧೯೮೦	೪೯.೪೯	ಪರ್ಸೆಂಟ್
೧೯೮೧	೫೨.೮೪	,,
೧೯೮೨	೪೭.೮೯	,,
೧೯೮೩	೭೨.೬೬	,,
೧೯೮೪	೬೩.೯೧	,,

೧೯೮೫ ನೇ ಸಾಲಿನಲ್ಲಿ ರಾಜ್ಯದ ಪೋಲೀಸರು ಡಕಾಯಿತಿ ಪ್ರಕರಣಗಳನ್ನು ಹೆಚ್ಚಾಗಿ ಪತ್ತೆ ಹಚ್ಚಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಬಿ. ಆರ್. ಪ್ರಾಜೆಕ್ಟ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ದಿನಾಂಕ ೨೪-೧-೮೫ ರಂದು ನಡೆದ ಡಕಾಯಿತಿಯು ಭದ್ರಾವತಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ ೧೫-೮೫ ಎಂದು ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದ ೧೫ ಜನ ಅಪರಾಧಿಗಳನ್ನು ದಸ್ತಗಿರಿ ಮಾಡಿ ಶಿವಮೊಗ್ಗ ಜಿಲ್ಲೆ ಚಿತ್ರದುರ್ಗ ಜಿಲ್ಲೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದ ಪ್ರಕರಣಗಳಿಗೆ ಸಂಬಂಧಿಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಾಸನ ಜಿಲ್ಲೆಯ ಗಂಡಸಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವರದಿಯಾದ ಡಕಾಯಿತಿ ಬಗ್ಗೆ, ಗುಲ್ಬರ್ಗ ಜಿಲ್ಲೆಯ ಗ್ರಾಮಾಂತರ ಪೋಲೀಸ್ ಠಾಣೆಯ ಮತ್ತು ಸೈದಾಪುರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವರದಿಯಾದ ಪ್ರಕರಣಗಳ ಬಗ್ಗೆ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ಮತ್ತು ಹರಿಹರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಡಕಾಯಿತರನ್ನು ಪತ್ತೆ ಹಚ್ಚುವುದರಲ್ಲಿ ಯಶಸ್ವಿಯಾಗಿ ಕೆಲಸ ನಿರ್ವಹಿಸಿದ್ದಾರೆ.

ಹರಿಹರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸುಬ್ಬರಾವ್, ಕೈಗಾರಿಕೋದ್ಯಮಿ ಆತನ ತಮ್ಮ ಹಾಗೂ ಪತ್ನಿಯನ್ನು ವೃತ್ತಿ ನಿರತ ಡಕಾಯಿತರು ಮಾರಕ ಆಯುಧಗಳಿಂದ ಹಾಗೂ ಕಲ್ಲುಗಳಿಂದ ಹೊಡೆದು ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದರು ತೀವ್ರ ತನಿಖೆ ಕೈಗೊಂಡಿದ್ದರ ಪರಿಣಾಮವಾಗಿ ಅದು ಪತ್ತೆಯಾಗಿ ಕುಖ್ಯಾತ ಡಕಾಯಿತರ ಗುಂಪನ್ನು ದಸ್ತಗಿರಿ ಮಾಡಿ, ಮತ್ತು ಅವರುಗಳು ಕೊಟ್ಟ ಸುಳಿವಿನ ಮೇಲೆ ಇತರ ಪ್ರಕರಣಗಳನ್ನು ಪತ್ತೆ ಹಚ್ಚಲಾಯಿತು. ತುಮಕೂರು ಜಿಲ್ಲೆಯಲ್ಲಿ ಆರು ಕುಖ್ಯಾತ ಕೊಲೆಗಾರರನ್ನು ಪತ್ತೆ ಹಚ್ಚಿ ಕೊಲೆ ಪ್ರಕರಣಗಳು, ದೋಚಿದ ಮತ್ತು ದರೋಡೆ ಪ್ರಕರಣಗಳನ್ನು ಪತ್ತೆ ಹಚ್ಚಿ ಅವರುಗಳಿಂದ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು.

ವೈಟ್‌ಫೀಲ್ಡ್ ಪ್ರದೇಶದಲ್ಲಿ ಸ್ಕೂಟರಿನಲ್ಲಿ ಒಬ್ಬೊಬ್ಬರೇ ಹೋಗುವಾಗ ಅವರನ್ನು ತಡೆದು ದೋಚುತ್ತಿದ್ದ ಪರ್ದಿ ಗ್ಯಾಂಗ್‌ಗೆ ಸೇರಿದ ಡಕಾಯಿತರನ್ನು ಪತ್ತೆ ಹಚ್ಚಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ.

ಇತ್ತೀಚೆಗೆ ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯಲ್ಲಿ ನಡೆದ ಆಭರಣದ ಅಂಗಡಿಯನ್ನು ದೋಚಲು ಪ್ರಯತ್ನಿಸಿದ ಗುಂಪಿನ ಶ್ರೀಲಂಕಾದ ಕನಕದಾಸು ಎಂಬುವವನನ್ನು ದಸ್ತಗಿರಿ ಮಾಡಿ ತನಿಖೆ ಕೈಗೊಳ್ಳಲಾಗಿದೆ ಮತ್ತು ಅವನಿಂದ ಗ್ರೈನೈಡ್ಸ್, ರಿವಾಲ್ವಾರ್ ಹರಿತವಾದ ಕತ್ತಿ, ಹಾಗೂ ೧೮ ಸುತ್ತಿನ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆಂಧ್ರ ಪ್ರದೇಶದ ಕೆಲವು ದರೋಡೆ ಗುಂಪುಗಳು, ಬಿಹಾರದ ತೋಲರಾ ಗ್ರಾಮದ ಕೆಲವು ಗುಂಪುಗಳು, ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡಿನಲ್ಲಿ ಕಾರ್ಯನಿರತವಾಗಿವೆ ಎಂದೂ ಮತ್ತು ಮಹಾರಾಷ್ಟ್ರದ ಧುಲಿಯ ಕಂಜರ್‌ಬಟ್ ಗುಂಪು, ಸೋಲ್ಲಾಪುರ ಮತ್ತು ಜಲಗಾನ್ ಗುಂಪುಗಳು. ಪರ್ದಿ ಗುಂಪುಗಳು ಇವೆಯೆಂದು ಪೋಲೀಸರ ಗಮನಕ್ಕೆ ಬಂದಿದೆ.

ಗುಲ್ಬರ್ಗಾದ ವಾಡಿ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ೪-೨-೮೬ ರ ರಾತ್ರಿ ಗಸ್ತಿನಲ್ಲಿದ್ದಾಗ ೪ ಜನರನ್ನು ದಸ್ತಗಿರಿ ಮಾಡಿ ಅವರಿಂದ ಕಂಟ್ರಿ ಪಿಸ್ತೂಲುಗಳನ್ನೂ, ೫ ಸುತ್ತುಗುಂಡುಗಳು, ನಕಲಿ ಬೀಗದ ಕೀ ಗೊಂಚಲು, ಆಕ್ಸಲ್ ಬ್ಲೇಡ್‌ಗಳು, ಮುಖ ಮುಚ್ಚಿಕೊಳ್ಳುವ ಬಟ್ಟೆ, ಕತ್ತಿ ಹ್ಯಾಂಡ್ ಗ್ಲೌಸ್ ಮತ್ತು ಇತರ ಮನೆಯ ಒಡೆಯುವ ಆಯುಧಗಳನ್ನು ವಶಪಡಿಸಿಕೊಳ್ಳಲಾಯಿತು. ಅವರನ್ನು ಪರಿಪ್ರಶ್ನಿಸಲಾಗಿ ಎಸಿಸಿ ಕೋ-ಅಪರೇಟೀವ್ ಸ್ಟೋರ್‌ನಲ್ಲಿ ಅಪರಾಧ ಮಾಡಿದ್ದರೆಂದು ಒಪ್ಪಿಕೊಂಡು ಮತ್ತು ಇದೇ ಸ್ಥಳದಲ್ಲಿ ದಿನಾಂಕ ೧-೭-೮೫ ರಲ್ಲಿ ೧೪ ಲಕ್ಷ ಕ್ಯಾಷ್ ಉಳ್ಳ ಚೆಸ್ಟನ್ನು ಅಪಹರಿಸುವುದಕ್ಕೆ ಪ್ರಯತ್ನ ಪಟ್ಟಿದ್ದರೆಂದು ಒಪ್ಪಿಕೊಂಡರು. ಅವರು ಇತರ ಸ್ಥಳಗಳಲ್ಲಿಯೂ ಕೂಡ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡರು.

ಬಳ್ಳಾರಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ದಿನಾಂಕ ೫-೧-೮೬ ಮತ್ತು ೬-೧-೮೬ ರಲ್ಲಿ ನಡೆದ ಕಳವು ಮತ್ತು ಡಕಾಯಿತಿ ಪ್ರಕರಣಗಳಲ್ಲಿ ಅಪರಾಧ ಸಂಖ್ಯೆ ೨-೮೬ ಕ್ಕೆ ಸಂಬಂಧಿಸಿದಂತೆ ತೀವ್ರ ತನಿಖೆ ಕೈಗೊಳ್ಳಲಾಗಿ ಈ ಕೆಳಕಂಡ ಅಂತರ ರಾಜ್ಯ ಗುಂಪಿನವರನ್ನು ದಸ್ತಗಿರಿ ಮಾಡಲಾಗಿದೆ. ರಂಗಪ್ಪನ ಮಗ ಶಿವಾಜಿ (೨೫ ವರ್ಷ) ನಾಗೇಶ್ ಉರುಫ್ ನಾಗರಾಜ (೩೦ ವರ್ಷ) ಆಂಜನಪ್ಪನ ಮಗ ತಿಪ್ಪೇಸ್ವಾಮಿ (೨೨ ವರ್ಷ) ಹನುಮಂತನ ಮಗ ಹೇಮಾ ಕಾಳಪ್ಪ (೨೮ ವರ್ಷ) ಹನುಮಂತಪ್ಪನ ಮಗ ನಾರಾಯಣ (೩೦ ವರ್ಷ) ಮಾರಪ್ಪನ ಮಗ ರಾಮಾಂಜನೇಯಲು (೨೪ ವರ್ಷ) ಅದೂ ಅಲ್ಲದೆ ಆಂಧ್ರ ಪ್ರದೇಶದ ಗುಂತಕಲ್ ಪೋಲೀಸರು ರಾಮದಾಸ್ ಉರುಫ್ ಗಂಗಣ್ಣ ಮತ್ತು ರಾಮಪ್ಪನ ಮಗ ತಿಪ್ಪೇಸ್ವಾಮಿ ಎಂಬವರನ್ನು ದಸ್ತಗಿರಿ ಮಾಡಿ ಗುಂತಕಲ್ಲಿನ ನ್ಯಾಯಾಲಯದ ಅಭಿರಕ್ಷೆಯಲ್ಲಿದ್ದಾರೆ. ಕಳುವಾದ ೬,೫೦೦-೦೦ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ಅಪರಾಧಿಗಳು ಕೊಟ್ಟ ಸುಳಿವಿನ ಮೇಲೆ ವಶಪಡಿಸಿಕೊಳ್ಳಲಾಗಿದೆ. ತನಿಖೆಯ ಸಮಯದಲ್ಲಿ ಅವರು ಹಿಂದಿನ ವರ್ಷ ಬಳ್ಳಾರಿ ಹೊರ ವಲಯದಲ್ಲಿ ಮೂರು ದರೋಡೆಗಳನ್ನು ಮಾಡಿರುವುದಾಗಿ ಒಪ್ಪಿಕೊಂಡರು. ಈ ಗುಂಪನ್ನು ಬೊಮ್ಮಲಾಟ ಗ್ಯಾಂಗ್ ಎಂದು ಕರೆಯುತ್ತಾರೆ. ಅವರ ಮೂಲ ಸ್ಥಳ ಯಾವುದೆಂದು ತಿಳಿಯದಿದ್ದರೂ ಅವರು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ಕಲ್ಯಾಣ ದುರ್ಗ ತಾಲ್ಲೂಕುಗಳ ವಿವಿಧ ಗ್ರಾಮಗಳ ನಿವಾಸಿಗಳೆಂದು ತಿಳಿದುಬಂದಿದೆ.

೨-೦೦ ಪಿ. ಎಂ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಅಧ್ಯಕ್ಷರೇ, ಇದು ಗಂಭೀರವಾದ ವಿಚಾರ. ಸರ್ಕಾರದ ವತಿಯಿಂದ ಈ ತರಹ ಉತ್ತರವನ್ನು ಯಾರೂ ನಿರೀಕ್ಷಣೆ ಮಾಡುತ್ತಿಲ್ಲ. ಹರಿಕಥೆ ಓದಿದಹಾಗೆ ಹೇಳಿದರೆ ಹೇಗೆ ? ತೆಗೆದುಕೊಂಡಿರತಕ್ಕ ಕ್ರಮ ಹೇಳಲಿ.

ಶ್ರೀ ಬಿ. ರಾಚಯ್ಯ.—ನಿನ್ನೆಯ ದಿವಸ ಹೇಳಿದ್ದೇನೆ, ದಕ್ಷಿಣ ಕನ್ನಡ ಜಿಲ್ಲೆಯ ದಕಾಯಿತಿಗಳಿಗೆ ಸಂಬಂಧಪಟ್ಟಂತೆ ಎಂಟು ದಿವಸದೊಳಗೆ ಆ ತಂಡವನ್ನು ಹಿಡಿಯತಕ್ಕ ಸಾಧ್ಯತೆ ಇದೆ, ಅದನ್ನು ಹಿಡಿದೇತೀರುತ್ತೇವೆ ಎಂದು. ನಾನು ಏನೂ ಮಾಡಿಲ್ಲ ಎಂದು ಹೇಳುವ ಬದಲಾಗಿ ಪತ್ತೇದಾರಿ ಮಾಡಿ

ತಕ್ಕ ಸಂದರ್ಭದಲ್ಲಿ ಅವರ ದೃಷ್ಟಿಯಿಂದ, ನನ್ನ ದೃಷ್ಟಿಯಿಂದ, ಮತ್ತು ಸಾರ್ವಜನಿಕರ ದೃಷ್ಟಿಯಿಂದ ಕೆಲವು ಕ್ರಮಗಳನ್ನು ನಾನು ಬಹಿರಂಗಪಡಿಸುವುದು ಈ ಹಂತದಲ್ಲಿ ಕಷ್ಟವಾಗುತ್ತದೆ. ಆದ್ದರಿಂದ ಹಿಡಿದಮೇಲೆ ಅದನ್ನು ಸಭೆಗೆ ಒಪ್ಪಿಸುತ್ತೇನೆ ಎಂದು ಹೇಳಿದ್ದೇನೆ. ೮ ದಿವಸದ ಅವಧಿ ಕೇಳಿದ್ದೇನೆ. ೮ ದಿವಸದಲ್ಲಿ ಹಿಡಿಯದೇ ಇದ್ದರೆ ಅವರು ಹೇಳುವ ಶಿಕ್ಷೆಗೆ (ವಿರೋಧಪಕ್ಷದವರು) ಒಳಗಾಗುತ್ತೇನೆ. ಸೌತ್ ಕೆನರಾ ಜಿಲ್ಲೆಯಲ್ಲಿ ಆಗಿರತಕ್ಕ ಡಕಾಯಿತಿಗೆ ಸಂಬಂಧಪಟ್ಟ ಡಕಾಯಿತರನ್ನು ಎಂಟು ದಿವಸಗಳಲ್ಲಿ ಹಿಡಿಯದಿದ್ದರೆ ನೀವು (ವಿರೋಧಪಕ್ಷದವರಿಗೆ) ಹೇಳುವ ಶಿಕ್ಷೆಗೆ ಒಳಗಾಗುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಇಷ್ಟು ಆತ್ಮವಿಶ್ವಾಸದಿಂದ ಹೇಳುವುದನ್ನು ನೋಡಿದರೆ ಅವರು ಎಲ್ಲಿದ್ದಾರೆ ಎಂಬುದು ಮಂತ್ರಿಗಳಿಗೆ ಗೊತ್ತಿದೆ. ಅವರಿಗೆ ರಕ್ಷಣೆ ನಿಮ್ಮಿಂದ ಸಿಗುತ್ತದೋ ಏನೋ ಎಂಬ ಶಂಕೆ ಬರುತ್ತದೆ. ೮ ದಿವಸಗಳಲ್ಲಿ ಹಿಡಿಯುತ್ತೇನೆ ಎಂದು ಹೇಳಬೇಕಾದರೆ...

ಅಧ್ಯಕ್ಷರು.—ಸುಳಿವು ಸಿಗುತ್ತಿದೆ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ನಾಳೆ ಅವರು ಉರುಳು ಹಾಕಿಕೊಂಡರೆ...

ಅಧ್ಯಕ್ಷರು.—ಸುಳಿವು ಸಿಗುತ್ತಿದೆ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಶಿಕ್ಷೆಗೆ ಒಳಗಾಗುತ್ತೇನೆ ಎಂದು ಆವೇಶದಿಂದ ಹೇಳುವುದು ಬೇಡ.

ಶ್ರೀ ಬಿ. ರಾಚಯ್ಯ.—ಜನರಲ್ಲಿ ಭರವಸೆ ಕೊಟ್ಟು ಅವರು ನೆಮ್ಮದಿಯಿಂದ ನಿದ್ದೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಈಗ ಕಳವಳ ಆಗಿದೆ. ಮನೆ ಬಿಟ್ಟು ಹೊರಗಡೆ ಯುವಕರು ಮಲಗುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾವಂತರು ಹೆಚ್ಚಾಗಿದ್ದಾರೆ, ವಿಚಾರವಂತರು ಹೆಚ್ಚಾಗಿದ್ದಾರೆ. ಇಂಥ ಸಂದರ್ಭದಲ್ಲಿ ಹೀಗಾಯಿತಲ್ಲಾ ಎಂದು ಚಿಂತನೆ ಮಾಡತಕ್ಕ ಜನರು ಹೆಚ್ಚಾಗಿದ್ದಾರೆ. ಅವರ ಸಹಕಾರ ಪಡೆದು ಡಕಾಯಿತರನ್ನು ಹಿಡಿಯುವ ವಿಶ್ವಾಸ ಮತ್ತು ಭರವಸೆ ಇದೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಯಾವುದೇ ಪ್ರಯತ್ನ ಮಾಡಿಲ್ಲ ಎಂದು ಹೇಳಬೇಡಿ. ಈ ಹಂತದಲ್ಲಿ ಎಲ್ಲರೂ ಸಹಕಾರ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಡಕಾಯಿತರನ್ನು ಹಿಡಿಯಬೇಕು, ಜನರಿಗೆ ಶಾಂತಿ ಕೊಡಬೇಕು ಎಂದು ಅವರಿಗೆ ಎಷ್ಟು ಕಾತುರತೆ ಇದೆಯೋ ಅದೇರೀತಿ ನನಗೂ ಇದೆ. ನಾನು ಜವಾಬ್ದಾರಿ ಹೊತ್ತಮೇಲೆ ನನ್ನ ಪೀರಿಯಡ್‌ನಲ್ಲಿ ಹೀಗಾಯಿತಲ್ಲಾ ಎಂದು ಚಿಂತನೆ ನನಗಿದೆ. ಚಿಂತನೆ ಇರಬಾರದು ಎಂಬ ಅಭಿಪ್ರಾಯ ಅವರಲ್ಲಿದ್ದರೆ ಅದು ನನ್ನ ತಪ್ಪಲ್ಲ. ಇಷ್ಟು ಮಾತ್ರ ನಾನು ಹೇಳಬಲ್ಲೆ. ಇಂಥ ಸಂದರ್ಭದಲ್ಲಿ ಸಾರ್ವಜನಿಕರ ಮನಸ್ಸು ಕಲಕಿರುವಾಗ ಎಲ್ಲ ಕ್ರಮಗಳನ್ನೂ ನಾವು ತೆಗೆದುಕೊಂಡಿದ್ದೇವೆ. ಡಕಾಯಿತರಿಗಿಂತ ಹೆಚ್ಚಾಗಿ ಪೋಲೀಸರಲ್ಲಿ ಸಾಧನಸಂಪತ್ತುಗಳಿಲ್ಲ ನಾನು ಹೇಳಲಾರೆ. ಆದರೆ ಒಳ್ಳೆಯ ಜನ ತೊಂದರೆಗೆ ಈಡಾಗುತ್ತಾರೆ ಎಂಬ ಭಯದಿಂದ ಒಂದು ರೀತಿಯಲ್ಲಿ ನಿಜವಾಗಿ ತಪ್ಪು ಮಾಡಿರುವವರನ್ನು ಕಂಡುಹಿಡಿಯುವುದಕ್ಕೆ ಕೆಲವು ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಆ ದೃಷ್ಟಿಯಿಂದ ತಡವಾಗಿದೆ. ಡಕಾಯಿತರು ಅನುಸರಿಸತಕ್ಕ ದಿನಗಳು ಎಂದರೆ ಅಮಾವಾಸ್ಯೆ ಹಿಂದಿನ ದಿವಸ ಅಥವಾ ಮುಂದಿನ ದಿವಸ. ಕತ್ತಲು ದಿನಗಳನ್ನು ಹುಡುಕಿದ್ದಾರೆ. ದೀಪಗಳನ್ನು ಕೆಡಿಸಿದ್ದಾರೆ. ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ಪೋಲೀಸರು ಸಾಧ್ಯವಾದಮಟ್ಟಿಗೆ ಭಾಗಗಳನ್ನು ವಿಂಗಡಣೆ ಮಾಡಿ ಸುತ್ತುಹಾಕಿದ್ದಾರೆ. ಆದ್ದರಿಂದ ದಯಮಾಡಿ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಬಾರದು. ರಿಸಲ್ಟ್ಸ್ ಇಲ್ಲದೇ ಇರುವುದರಿಂದ ಅವರಿಗೆ ಹಾಗೆ ಅನ್ನಿಸಬಹುದು. ಅದು ಸ್ವಾಭಾವಿಕ ಕರ್ನಾಟಕ ರಾಜ್ಯ ಪೋಲೀಸರು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಕಾಯಿತಿ ಆಗುವುದು ರಾತ್ರಿ ಕತ್ತಲಲ್ಲೇ. ಬೆಳಕಿನಲ್ಲಿ ಆಗುವುದಿಲ್ಲ. ರಾತ್ರಿ ಲೈಟ್ ಹಾಕಿಕೊಂಡು ಮಾಡುವುದಿಲ್ಲ. ಅಮಾವಾಸ್ಯೆ ಸಂದರ್ಭವನ್ನು ನೋಡೇ ಡಕಾಯಿತಿ ಮಾಡುತ್ತಾರೆ. ಅದನ್ನು ಕಂಡುಹಿಡಿಯುವುದು ಮಹತ್ವವಲ್ಲ.

ಶ್ರೀ ಬಿ. ರಾಚಯ್ಯ.—ನಿಮ್ಮಿಂದ ಹಿಡಿಯುವುದಕ್ಕೆ ಆಗಲಿಲ್ಲ, ಆದ್ದರಿಂದ ಕಂಟ್ರಾಕ್ಟ್ ಕೊಡಿ ಎಂದು ಹೇಳಿದರು. ಯಾರು ಡಕಾಯಿತರ ಬಗ್ಗೆ ಸೂಚನೆ ಕೊಡುತ್ತಾರೋ ಅವರಿಗೆ ಸ್ವಲ್ಪಮಟ್ಟಿಗೆ ಪ್ರೋತ್ಸಾಹ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ರೀತಿ ಮಂತ್ರಿಗಳು ಹೇಳಿಕೆ ಕೊಡುವುದು ಹೊಸದಲ್ಲ. ಹೆಚ್ಚಿನ ರೀತಿಯಲ್ಲಿ ಪ್ರಾಣ ಹಾನಿಯಾಗಿರುವುದರ ಜೊತೆಗೆ ಜನ ಅದನ್ನು ನೋಡಿ ಭಯಭೀತರಾಗಿದ್ದಾರೆ. ಅದನ್ನು ಕಂಡುಹಿಡಿಯುವುದಕ್ಕೆ ಸಾರ್ವಜನಿಕರ ಸಹಕಾರ ಪಡೆಯೋಣ ಎಂದು

ಸುಳಿವು ಕೊಡುವವರಿಗೆ ಸರ್ಕಾರ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುತ್ತದೆಂದು ಹೇಳಿದ್ದೇನೆಯೇ ವಿನಹ ನಮ್ಮ ಕೈಯಲ್ಲಿ ಆಗಲಿಲ್ಲ ಎಂದು ಹೇಳಿಲ್ಲ. ಅವರೂ ಸಹಕರಿಸಿದರೆ ಹೆಚ್ಚಿನರೀತಿಯಲ್ಲಿ ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂದು ಆ ರೀತಿ ಹೇಳಿದ್ದೇವೆ. ಅವರಿದ್ದಾಗ ಯಾವ ಪೋಲೀಸರಿದ್ದರೋ ಅವರೇ ಈಗಲೂ ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಬಹಳ ಒಳ್ಳೆಯ ಮಾತು ಹೇಳಿದರು. ಡಕಾಯಿತರನ್ನು ಹಿಡಿಯದಿದ್ದರೆ ಏನು ಶಿಕ್ಷೆಗೆ ಬೇಕಾದರೂ ಒಳಗಾಗುತ್ತೇನೆ ಎಂದು ಹೇಳಿದ್ದಾರೆ. ೮ ದಿವಸದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಡಕಾಯಿತಿ ಬಗ್ಗೆ ಕಂಡುಹಿಡಿಯದೇ ಹೋದರೆ ಶಿಕ್ಷೆಗೊಳಗಾಗುತ್ತೇನೆ ಎಂದು ಹೇಳಿದ್ದಾರೆ. ಅದೇರೀತಿ ಬೆಂಗಳೂರು ಸುತ್ತ ಮುತ್ತ ಇರುವವರನ್ನು ಎಷ್ಟು ದಿವಸದಲ್ಲಿ ಕಂಡುಹಿಡಿಯುತ್ತೀರಿ ? ಇದಕ್ಕೂ ಗಡುವು ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪೋಲೀಸರಿಗೆ ಅನುಕೂಲವಾಗುವ ರೀತಿಯಲ್ಲಿ ಡಕಾಯಿತಿ ಮಾಡಬೇಕು ಎಂದು ಸೂಚನೆಯಾದರೂ ಕೊಡಬೇಕು. (ನಗು)

ಶ್ರೀ ಬಿ. ರಾಚಯ್ಯ.—ಏನಾದರೂ ಮಾಡಿ ಬೇಗ ಹಿಡಿದು ಜನರಿಗೆ ಶಾಂತಿ ದೊರಕಿಸಿ ಎಂಬ ದೃಷ್ಟಿಯಿಂದ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಕೃಷ್ಣನ್ ಅವರು ಹೇಳಿದ್ದಾರೆ. ತಮ್ಮ ಕಾತುರತೆ ತಿಳಿದುಕೊಂಡಿದ್ದೇನೆ. ಅದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡುತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—೮ ದಿವಸದಲ್ಲಿ ಹಿಡಿಯದೇ ಹೋದರೆ, ಶಿಕ್ಷೆಗೆ ಒಳಗಾದರೆ, ಬೆಂಗಳೂರು ಸುತ್ತಮುತ್ತ ಡಕಾಯಿತಿ ಜಾಸ್ತಿಯಾದರೆ ಕಷ್ಟವಾಗುತ್ತದೆ.

ಶ್ರೀ ಬಿ. ರಾಚಯ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫ ಜನ ಶಾಸಕರಿಗೆ ನಮ್ಮ ಜಿಲ್ಲೆಯಲ್ಲೇ ಇದು ನಡೆಯುತ್ತಿದೆ, ನಮ್ಮ ಪಕ್ಷದವರೇ ಅಧಿಕಾರದಲ್ಲಿದ್ದಿದ್ದರೆ ಇದು ಆಗುತ್ತಿರಲಿಲ್ಲವೋ ಏನೋ, ಅವರು ಇದ್ದುದರಿಂದ ಹೀಗಾಗಿದೆ ಎಂಬ ಶಂಕೆ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ನಾವು ಹೇಳಲೇ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.— ಮಂತ್ರಿಗಳು ನಿನ್ನೆ ಮತ್ತು ಇವತ್ತು ಹೇಳಿದ್ದು ನೋಡಿದರೆ ಡಕಾಯಿತರು ಈಗಾಗಲೇ ಪೋಲೀಸ್ ಕಸ್ಟಡಿಯಲ್ಲಿದ್ದಾರೆ ಎಂದು ಅರ್ಥವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಮಾತನಾಡದಿದ್ದರೆ ಸುಮ್ಮನೆ ಕುಳಿತಿರುತ್ತಾರೆ ಎಂಬ ಚಿಂತನೆ ವಿರೋಧ ಪಕ್ಷದ ನಾಯಕರಿಗೆ ಇರುತ್ತದೆ

ಅಧ್ಯಕ್ಷರು.—ಹುರುಪಿನಿಂದ ಕೆಲಸ ಮಾಡಲಿ ಎಂದು ಹೇಳುತ್ತಾರೆ.

ಶ್ರೀ ಬಿ. ರಾಚಯ್ಯ.—ಅದಕ್ಕೆ ಪ್ರಯತ್ನ ಮಾಡಿದ್ದೇನೆ. ಅದಕ್ಕೆ ಅವರ ಸಹಕಾರ ಕೇಳುತ್ತಿದ್ದೇನೆ.

ಬೆಂಗಳೂರು ಜಿಲ್ಲೆ ಮತ್ತು ನಗರದಲ್ಲಿ ಅಪರಾಧ ಕೃತ್ಯಗಳನ್ನು ತಡೆಯಲು ಮತ್ತು ವರದಿಯಾಗಿರುವ ಪ್ರಕರಣಗಳನ್ನು ಪತ್ತೆ ಹಚ್ಚಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧. ಸಂಚಾರಿ ಪೋಲೀಸ್ ಹಾಗೂ ನಗರ ಸಶಸ್ತ್ರ ಮೀಸಲು ಪಡೆಯು ಸೇರಿದಂತೆ ಸಂಪೂರ್ಣ ಪೋಲೀಸ್ ದಳವನ್ನು ಸಜ್ಜುಗೊಳಿಸಲಾಗಿದೆ.

೨. ನಗರದಲ್ಲಿ ಅದರಲ್ಲೂ ವಿಶೇಷವಾಗಿ ಹೊರ ವಲಯದಲ್ಲಿ ೭೫ ಸಂಚಾರಿ ದಳಗಳನ್ನು ವ್ಯವಸ್ಥೆ ಮಾಡಲಾಗಿದೆ.

೩. ದುರ್ನಡತೆಯ ಚಿರಪರಿಚಿತ ಅಪರಾಧಿಗಳು ಅಡಗಿಕೊಳ್ಳುವ ಸ್ಥಳವನ್ನು ಪರೀಕ್ಷಿಸಲಾಗಿದೆ.

೪. ಈ ಪ್ರಕರಣಗಳ ತನಿಖೆಗೆ ಪತ್ತೇದಾರಿ ದಳಗಳಿಂದ ಸಹಾಯವನ್ನು ಪಡೆಯಲಾಗಿದೆ.

೫. ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧ ಸ್ಥಳಕ್ಕೆ ಅಪರಾಧ ತನಿಖಾ ಪ್ರಯೋಗಾಲಯದ ತಜ್ಞರು ಭೇಟಿ ನೀಡಿರುತ್ತಾರೆ.

೬. ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ ಮತ್ತು ಗೋವಾ ಪೋಲೀಸ್ ದಳಗಳ ನೆರವನ್ನು ಸಹ ಪಡೆಯಲಾಗಿದೆ.

೭. ಚಿರಪರಿಚಿತ ಡಕಾಯಿತರ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ನೆರೆರಾಜ್ಯಗಳಿಗೆ ಪೋಲೀಸರನ್ನು ಕಳುಹಿಸಲಾಗಿದೆ.

೮. ಲಂಕಾ ದೇಶದ ವ್ಯಕ್ತಿ ಎಂದು ಆಪಾದಿತನಾಗಿರುವ ಮತ್ತು ಸದರಿ ವ್ಯಕ್ತಿಯು ತಮಿಳು ನಾಡಿನಿಂದ ಬಂದವನಾದ ಕಾರಣ ತಮಿಳುನಾಡು ಪೋಲೀಸರ ಸಹಾಯವನ್ನು ಕೋರ ಲಾಗಿದೆ.

೯. ಡಕಾಯಿತರನ್ನು ಪತ್ತೆ ಹಚ್ಚಲು ಸಾಧನೋಪಾಯಗಳನ್ನು ಕಂಡುಕೊಳ್ಳುವ ಬಗ್ಗೆ ಸಭೆ ಗಳನ್ನು ನಡೆಸಲಾಗುತ್ತಿದೆ.

೧೦. ನಾಕಾ ಬಂಧಿಯನ್ನು ಬೆಂಗಳೂರು ನಗರದಲ್ಲಿ ಜಾರಿಗೊಳಿಸಲಾಗಿದೆ ಮತ್ತು ರಾತ್ರಿ ಸಮಯದಲ್ಲಿ ಅಪರಿಚಿತ ವ್ಯಕ್ತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗುತ್ತಿದೆ.

೧೧. ಮುಂಜಾಗ್ರತಾ ಕ್ರಮವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ರಕ್ಷಣಾ ದಳಗಳನ್ನು ರಚಿಸಿ, ವಾಹನಗಳ ಮತ್ತು ಕಾಲುನಡಿಗೆಯ ಗಸ್ತನ್ನು ವ್ಯವಸ್ಥೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಅಪರಾಧಗಳನ್ನು ತಡೆಯಲು ಮತ್ತು ವರದಿಯಾಗಿರುವ ಪ್ರಕರಣಗಳನ್ನು ಪತ್ತೆ ಹಚ್ಚಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇಂತಹ ಅಪರಾಧ ಕೃತ್ಯಗಳು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ನಡೆದಿರುವುದರಿಂದ ಇದು ಅಂತರ ರಾಜ್ಯ ಕುಖ್ಯಾತ ಅಪರಾಧಿಗಳ ಗುಂಪಿನ ಕೈವಾಡವೆಂದು ತೋರುತ್ತದೆ. ಜಿಲ್ಲಾ ಪೋಲೀಸರು ವಿಶೇಷ ಗಸ್ತು ಮಾಡುವ ಯೋಜನೆಯನ್ನು ಹಾಕಿ ಆಕ್ರಮಣ ಸ್ಥಳಗಳ ಕಡೆ ವಿಶೇಷ ಗಮನ ಕೊಡಲಾಗಿದೆ. ಜಿಲ್ಲೆಯಲ್ಲಿ ೧೫೦ ಗ್ರಾಮಗಳನ್ನು ಆಕ್ರಮಣ ಸ್ಥಳಗಳೆಂದು ಗುರುತಿಸಿ ಸಶಸ್ತ್ರ ಧಾರಿಗಳಾದ ಇಬ್ಬರು ಆರಕ್ಷಕ ಪೇದೆಗಳನ್ನು ನಿಯಮಿಸಿ ಗ್ರಾಮ ರಕ್ಷಕ ದಳದ ಸದಸ್ಯರ ಹಾಗೂ ನಾಗರೀಕ ಸಮಿತಿಯ ಜೊತೆಯಲ್ಲಿ ಗಸ್ತು ಮಾಡಲಾಗುತ್ತಿದೆ. ಈ ದಳಗಳಿಗೆ ವೈರ್‌ಲೆಸ್ ಸೆಟ್ಟುಗಳನ್ನು ಒದಗಿಸಲಾಗಿದೆ. ವಿಶೇಷ ಸಶಸ್ತ್ರ ಪೋಲೀಸರನ್ನು ಆಯಕಟ್ಟಿನ ಸ್ಥಳಗಳಿಗೆ ಹಾಕಲಾಗಿದೆ. ಜಿಲ್ಲೆಯ ಪೋಲೀಸ್ ಇಲಾಖೆಯಲ್ಲಿರುವ ಎಲ್ಲಾ ವಾಹನಗಳನ್ನು ಕ್ರೋಢೀಕರಿಸಿ ಗಸ್ತನ್ನು ತೀವ್ರಗೊಳಿಸಲಾಗಿದೆ. ಚಿಕ್ಕಮಂಗಳೂರು ಉತ್ತರ ಕನ್ನಡ ಜಿಲ್ಲೆಯಿಂದ ಅಧಿಕ ಆಫೀಸರುಗಳನ್ನು ಪಡೆದು ತೀವ್ರ ಗಸ್ತಿಗಾಗಿ ಉಪಯೋಗಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಆರಕ್ಷಕ ಅಧೀಕ್ಷಕರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಆಕ್ರಮಣದ ಸುಳಿವುಗಳನ್ನು ಸಂಗ್ರಹಿಸಿ ಕುಖ್ಯಾತರ ಗುಂಪನ್ನು ಗುರುತಿ ಸಲು ಪ್ರಯತ್ನಿಸಲಾಗಿದೆ. ಅವರನ್ನು ದಸ್ತಗಿರಿ ಮಾಡಲು ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗು ತ್ತಿದೆ.

ಬೆಂಗಳೂರು ನಗರದಲ್ಲಿ ಹಿಂದೆಯೂ ಕೂಡಾ ಡಕಾಯಿತಿ ನಡೆದದ್ದನ್ನು ನಾವು ನೋಡಿದ್ದೇವೆ. ಆಗ ಚಾಕು ಚೂರಿ ಎಂದು ಹೇಳುತ್ತಿದ್ದರು. ಇವತ್ತು ಅದಕ್ಕೆ ಕತ್ತಿ ಗುರಾಣಿ ಎಂದು ಹೇಳುತ್ತಿದ್ದಾರೆ.

SRI S. BANGARAPPA.— We are prepared to discuss that issue. Don't mix up that issue with this.

ಚಾಕು ಚೂರಿ ಸಂಸ್ಕೃತಿ ಬಗ್ಗೆ ಹೇಳುವುದಾದರೆ ಆ ಬಗ್ಗೆ ನಾವೂ ಕೂಡಾ ಚರ್ಚೆ ಮಾಡುವುದಕ್ಕೆ ಒತ್ತಾಯ ಮಾಡುತ್ತೇವೆ. ಚಾಕೂ ಚೂರಿಯಂತಹ ದೊಡ್ಡ ವಿಚಾರವನ್ನು...

ಶ್ರೀ ಜಿ. ನಾರಾಯಣಕುಮಾರ್.— ಅವರು ಅವರ ಸಂಸ್ಕೃತಿ ಬಗ್ಗೆ ಹೇಳುತ್ತಿದ್ದಾರೆ ಅವರು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ನೀವು ಇವರನ್ನು ಕಂಟ್ರೋಲ್ ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ.

(Inturruption)

ಅವರು ಯಾವ ರೀತಿ ಯಾವ ಮಜಲಿನಲ್ಲಿ ಮಾತನಾಡುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಚಾಕು ಚೂರಿ ಸಂಸ್ಕೃತಿ ಬಗ್ಗೆ ತೆಗೆದುಕೊಂಡರೆ don't dry to take shelter under that. ಯಾವುದೋ ಒಂದು ರೀತಿಯ ಆರ್ಗ್ಯುಮೆಂಟ್ ಇಡುವುದಕ್ಕೆ ಹೋಗಬೇಡಿ. ಚಾಕು ಚೂರಿ ಸಂಸ್ಕೃತಿ...

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಅವರ ಆಡಳಿತದಲ್ಲಿ, ಕಾಂಗ್ರೆಸ್ ಆಡಳಿತದಲ್ಲಿ ಚಾಕು ಚೂರಿ ಸಂಸ್ಕೃತಿ ರುಜುವಾತು ಆಗಿದೆ. ಕುಂಬಳಕಾಯಿ ಕಳ್ಳ ಎಂದರೆ ಅವರು ಏತಕ್ಕೆ ಹೆಗಲು ಮುಟ್ಟಿಕೊಂಡು ನೋಡತ್ತಾರೆ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಈ ರೀತಿ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟರೆ ಸದನ ನಡೆಯುವುದಕ್ಕೆ ಕಷ್ಟವಾಗುತ್ತದೆ.

ಅಧ್ಯಕ್ಷರು.— ನಾನು ಅವರಿಗೆ ಅವಕಾಶ ಕೊಟ್ಟಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಯಾರು ಯಾರು ಗೂಂಡಾಗಳಿಗೆ ಆಶ್ರಯ ಕೊಟ್ಟಿದ್ದಾರೆ, ಯಾರು ಯಾರು ಗೂಂಡಾಗಿರಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಯಾರು ಯಾರು ಗೂಂಡಾಗಳನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನೆಲ್ಲಾ ತಿಳಿದ ಜನ ಜನತಾ ಪಕ್ಷಕ್ಕೆ ತಮ್ಮ ಮತವನ್ನು ನೀಡಿ ಜನತಾ ಪಕ್ಷವನ್ನು ಆರಿಸಿ ಕಳುಹಿಸಿದ್ದಾರೆ. ಚಾಕು ಚೂರಿ ಸಂಸ್ಕೃತಿಗೆ ಬೇಸತ್ತ ಜನ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಅವರು ಏನು ಮಾತನಾಡುತ್ತಿದ್ದಾರೆ ? ಅಧ್ಯಕ್ಷರೇ...

ಅಧ್ಯಕ್ಷರು.— ಅವರು ಏನು ಮಾತನಾಡುತ್ತಿದ್ದಾರೆ ಎನ್ನುವ ಬಗ್ಗೆ ನಾನು ಲಕ್ಷ್ಯ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಅವರು ಮಧ್ಯೆ ಎದ್ದು ಈ ರೀತಿ ಮಾತನಾಡತಕ್ಕದ್ದು ಸರಿಯೇ ?

ಅಧ್ಯಕ್ಷರು.— ಅವರು ಏನು ಮಾತನಾಡಿದ್ದಾರೆ ಎಂಬುದನ್ನು ತರಿಸಿ ನೋಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ಅವರು ಏನು ಹೇಳುತ್ತಿದ್ದಾರೆ ಎಂದರೆ ..

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಅಧ್ಯಕ್ಷರೇ, ಇದ್ದದ್ದನ್ನು...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಚಾಕು ಚೂರಿ ಸಂಸ್ಕೃತಿ ಬಗ್ಗೆ ಚರ್ಚೆ ನಮ್ಮ ಮುಂದೆ ಇಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಾದರೆ ನಾವೂ ಕೂಡಾ ಸಿದ್ಧರಿದ್ದೇವೆ, ಆದರೆ ಆ ಚರ್ಚೆ ಇವತ್ತು ಇಲ್ಲ ಈ ವಿಷಯವನ್ನು ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರು ಎತ್ತಿಲ್ಲ. ಇವತ್ತು ಈ ಸದನದಲ್ಲಿ ಬಂದಿರತಕ್ಕ ವಿಚಾರ ಡಕಾಯಿತಿ ಮತ್ತು ದರೋಡೆಗೆ ಸಂಬಂಧಪಟ್ಟದ್ದು. ಆದರಲ್ಲೂ ಕಳೆದ ೩-೪ ತಿಂಗಳ ಅವಧಿಯಲ್ಲಿ ರಾಜ್ಯದ ಅನೇಕ ಕಡೆ ಇಂತಹ ದುರ್ಘಟನೆ ನಡೆದಿರುವುದರಿಂದ ಜನರ ಮನಸ್ಸಿನಲ್ಲಿ ಆತಂಕವುಂಟಾಗಿದೆ. ನಮ್ಮ ಮನಸ್ಸಿನಲ್ಲೂ ಆತಂಕ ಉಂಟಾಗಿದೆ, ಆ ಕಡೆ ಇರಲಿ, ಈ ಕಡೆ ಇರಲಿ ಎಲ್ಲರ ಮನಸ್ಸಿನಲ್ಲೂ ಆತಂಕ ಉಂಟಾಗಿದೆ. ಮತ್ತು ಈ ಘಟನೆಗಳು ಒಂದಾದ ನಂತರ ಇನ್ನೊಂದು ನಡೆದಿದೆ. ಎಂದರೆ ಕೆಲವೇ ಸಣ್ಣ ಅವಧಿಯಲ್ಲಿ ಅನೇಕ ಘಟನೆಗಳು ಆಗಿವೆ. ಇದರಿಂದ ಜನರ ಮನಸ್ಸಿನಲ್ಲಿ ಬಹಳ ಚಿಂತನೆಗೆ ಕಾರಣವಾಗಿದೆ, ಅವರು ಹೌಹಾರಿದ್ದಾರೆ. ಈ ಬಗ್ಗೆ ಹೆಣ್ಣು ಮಕ್ಕಳೂ ಕೂಡಾ ನನಗೆ ಪತ್ರ ಬರೆದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಈ ಘಟನೆಯನ್ನು ನೋಡಿದರೆ ನಮಗೆ

ಎರಡು ವಿಚಾರಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ಈ ಘಟನೆಗಳಲ್ಲಿ ಒಂದು ಸಾಮ್ಯ ಇದೆ. ಅನೇಕ ಕಡೆಗಳಲ್ಲಿ ಆಗಿರತಕ್ಕ ಘಟನೆಗಳಲ್ಲಿ ಕೆಲವು ವಿಧದಲ್ಲಿ ಒಂದೇ ರೂಪದ ಘಟನೆಗಳು ಆಗಿವೆ ಮತ್ತೊಂದು ವಿಚಾರಕ್ಕೆ ನಾವು ಬರುವುದೇನೆಂದರೆ, ಈ ಘಟನೆಗಳಿಗೆ ಕಾರಣರಾದವರು ಬಹುಶಃ ಕರ್ನಾಟಕದವರಲ್ಲ, ಹೊರಗಿನವರು ಎಂದು ತಿಳಿದುಬರುತ್ತದೆ. ಅದೂ ಕೂಡಾ ಇಲ್ಲಿಯವರೆಗೆ ಸಿಕ್ಕ ಸಮಾಚಾರದ ಮೇಲೆ ನಾವು ಈ ಒಂದು ಕನ್‌ಕ್ಲೂಷನ್ ಬರಬಹುದು. ಇಷ್ಟರವಟ್ಟಿಗೆ ನಮಗೆ ಗೊತ್ತಾಗಿದೆ, ಮಾನ್ಯ ಸಭೆಗೂ ಗೊತ್ತಾಗಿಟು. ಸುಮಾರು ೨ ವರ್ಷಗಳ ಹಿಂದೆ ಹೆದ್ದಾರಿ ದರೋಡೆಗಳಾದವು. ಶಿವಮೊಗ್ಗದಲ್ಲಿ. ಮಂಡ್ಯದ ಹತ್ತಿರ. ಮೈಸೂರಿನ ಹತ್ತಿರ, ಬಳ್ಳಾರಿ ಹತ್ತಿರ ಅನೇಕ ಹೆದ್ದಾರಿ ದರೋಡೆಗಳು ಕೇವಲ ಒಂದೂವರೆ ಎರಡು ತಿಂಗಳ ಅವಧಿಯಲ್ಲಿ ನಡೆದವು. ಮೊಟ್ಟಮೊದಲನೆಯದಾಗಿ, ಅವತ್ತು ನಮಗೂ ಕೂಡ ಯಾರು ಮಾಡುತ್ತಾರೆ ಎಂದು ಗೊತ್ತಾಗಲಿಲ್ಲ. ಆದರೆ ಅದನ್ನು ನಾವು ಕಂಡು ಹಿಡಿದು, ಆ ಗ್ಯಾಂಗ್‌ನ್ನು ಹಿಡಿದು ತಕ್ಕ ಕ್ರಮ ತೆಗೆದುಕೊಂಡಿದ್ದರಿಂದ ಆ ರೀತಿ ಘಟನೆಗಳು ಮುಂದೆ ಆಗಲಿಲ್ಲ. ಈಗ ನಮ್ಮ ಗೃಹ ಸಚಿವರು ಒಂದು ಮಾತನ್ನು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿ ಆಗಿದ್ದು ಸಾಮಾನ್ಯವಾದುದಲ್ಲ. ಅಲ್ಲಿ ಜನ ಜಗಳ ಮಾಡುವುದಾದರೂ ಮಾತಿನಿಂದ ಅಥವಾ ಬುದ್ಧಿ ಉಪಯೋಗಿಸಿ ಜಗಳ ಮಾಡುತ್ತಾರೆಯೋ ಹೊರತು ಈ ರೀತಿ ಘಟನೆ ಆಗಿದ್ದು ಇಲ್ಲ. ಇತ್ತೀಚೆಗೆ ಮಂಗಳೂರಿನಲ್ಲೂ ಕೂಡ ಬಹಳ ಬದಲಾವಣೆಗಳು ಆಗಿವೆ, ಅಲ್ಲಿ ಹೊಸ ಹೊಸ ಕೈಗಾರಿಕೆಗಳು ಬಂದಿವೆ. ಕೈಗಾರಿಕೆಗಳು ಬಂದ ಮೇಲೆ ಬೇರೆ ಕಡೆಯ ಜನರೂ ಅಲ್ಲಿಗೆ ಬಂದಿದ್ದಾರೆ. ಕೇವಲ ಇದು ನಮ್ಮ ರಾಜ್ಯದಲ್ಲಿ ಮಾತ್ರ ಆಗುವುದಲ್ಲ. ಇಂತಹ ಘಟನೆಗಳು ಆಗತಕ್ಕದ್ದು ಸರಿ ಎಂದು ನಾನು ಹೇಳುವುದಿಲ್ಲ. ಆದರೆ ಇದು ಸ್ವಾಭಾವಿಕ. ಈಗ ನನಗನಿಸಿದ್ದು, ಈಗಿತ್ತಲಿನ ಘಟನೆಗಳನ್ನು ನೋಡಿ ಇತ್ತೀಚೆಗೆ ಇವುಗಳ ಸಂಖ್ಯೆ ಹೆಚ್ಚು ಆಗಿರಬಹುದು. ಅದಕ್ಕಾಗಿ ನಾನು ಕೆಲವು ಅಂಕಿಸಂಖ್ಯೆಗಳನು ತರಿಸಿದೆ, ನನ್ನ ಮನಸ್ಸಿಗೆ ಖಾತರಿ ಮಾಡಿಕೊಳ್ಳುವುದಕ್ಕೆ ಯಾರ ಬಗ್ಗೆಯೂ ಆಕ್ಷೇಪಕ್ಕೆ ನಾನು ಇದನ್ನು ಹೇಳುತ್ತಿಲ್ಲ. ಈ ವಿಷಯವನ್ನು ನಾನು ಸದನದ ಮುಂದೆ ಇಟ್ಟರೆ ಸದಸ್ಯರಿಗೆ ಮತ್ತು ಇವರ ಮುಖಾಂತರ ಕನ್ನಡ ನಾಡಿನ ಜನರಿಗೆ ಗೊತ್ತಾಗಬೇಕು. ಈಗಿತ್ತಲಾಗಿನ ಘಟನೆಗಳು ಹೆಚ್ಚಾಗಿದ್ದರೂ ಕೂಡಾ ಇಡೀ ವರ್ಷದ ಸ್ಥಿತಿಯನ್ನು ನೋಡಿದರೆ ಇಷ್ಟೊಂದು ವಿಕೋಪಕ್ಕೆ ಹೋಗಿದ್ದು ಇಲ್ಲ. ಇನ್ನೂ ವಿಕೋಪಕ್ಕೆ ಹೋಗುವುದನ್ನು ತಡೆಯಬೇಕು, ಈ ಬಗ್ಗೆ ನಮ್ಮಲ್ಲಿ ಧೈರ್ಯ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ನಡೆದಿರತಕ್ಕ ಡಕಾಯಿತಿಗಳ ಬಗ್ಗೆ ಹೇಳುತ್ತೇನೆ. ೧೯೮೧ರಲ್ಲಿ ೨೩೧, ೧೯೮೨ರಲ್ಲಿ ೧೭೧, ೧೯೮೩ರಲ್ಲಿ ೧೬೬, ೧೯೮೪ರಲ್ಲಿ ೨೨೩ ಹಾಗೂ ೧೯೮೫ರಲ್ಲಿ ೧೬೫ ಆಗಿವೆ. ಮಧ್ಯೆ ಒಂದು ವರ್ಷ ಬಿಟ್ಟರೆ ಇತರ ವರ್ಷಗಳಲ್ಲಿ ಕಡಿಮೆ ಆಗಿದೆ. ೧೯೮೫ರಲ್ಲೂ ಕಡಿಮೆಯಾಗಿದೆ. ಇನ್ನು ರಾಬರಿ ಬಗ್ಗೆ ಹೇಳಬೇಕೆಂದರೆ, ೧೯೮೧ರಲ್ಲಿ ೭೭೧, ೧೯೮೨ರಲ್ಲಿ ೫೧೩, ೧೯೮೩ರಲ್ಲಿ ೫೮೯. ೧೯೮೪ರಲ್ಲಿ ೫೩೭ ಹಾಗೂ ೧೯೮೫ರಲ್ಲಿ ೪೭೧ ಆಗಿವೆ. ಇದೂ ಕೂಡಾ ಕಡಿಮೆ ಆಗುತ್ತಾ ಹೋಗಿದೆ. ನಂತರ ಹೌಸ್ ಬ್ರೇಕಿಂಗ್ ಬಗ್ಗೆ ಹೇಳಬೇಕೆಂದರೆ ೧೯೮೧ರಲ್ಲಿ ೯೭೧೨, ೧೯೮೨ರಲ್ಲಿ ೮೦೫೧ ೧೯೮೩ರಲ್ಲಿ ೯೦೬೯, ೧೯೮೪ರಲ್ಲಿ ೮೦೬೦ ಹಾಗೂ ೧೯೮೫ರಲ್ಲಿ ೬೯೭೮ ಆಗಿವೆ. ಕಿಡ್‌ನ್ಯಾಪಿಂಗ್ ಬಗ್ಗೆ ಹೇಳಬೇಕೆಂದರೆ ೧೯೮೧ರಲ್ಲಿ ೩೨೩, ೧೯೮೨ರಲ್ಲಿ ೨೭೦, ೧೯೮೩ರಲ್ಲಿ ೩೦೧, ೧೯೮೪ರಲ್ಲಿ ೨೭೮ ಹಾಗೂ ೧೯೮೫ರಲ್ಲಿ ೩೭೦ ಆಗಿವೆ. ಇದು ಒಂದರಲ್ಲೇ ಮಾತ್ರ ಹಿಂದಿನ ವರ್ಷಗಳಿಗಿಂತ ಈ ವರ್ಷ ಹೆಚು ಆಗಿದೆ. ಇನ್ನು ಬೆಂಗಳೂರು ನಗರದಲ್ಲಿ ಈ ರೀತಿಯ ಕೃತ್ಯಗಳು ಎಷ್ಟು ಆಗಿದೆ ಎಂದು ನೋಡೋಣ. ಡಕಾಯಿತಿ.—೧೯೮೧ರಲ್ಲಿ ೧೯, ೧೯೮೨ರಲ್ಲಿ ೧೫, ೧೯೮೩ರಲ್ಲಿ ೧೧, ೧೯೮೪ರಲ್ಲಿ ೧೫, ೧೯೮೫ರಲ್ಲಿ ೧೩ ಆಗಿವೆ ರಾಬರಿ.—೧೯೮೧ ೪೩೪, ೧೯೮೨ರಲ್ಲಿ ೨೧೯, ೧೯೮೩ರಲ್ಲಿ ೨೮೫, ೧೯೮೪ರಲ್ಲಿ ೨೪೯ ಹಾಗೂ ೧೯೮೫ರಲ್ಲಿ ೧೯೫. ಹೌಸ್ ತೆಫ್ಟ್.—೧೯೮೧ರಲ್ಲಿ ೨೨೨೨. ೧೯೮೨ರಲ್ಲಿ ೧೬೭೭, ೧೯೮೩ರಲ್ಲಿ ೧೭೬೭, ೧೯೮೪ರಲ್ಲಿ ೧೫೭೭, ಹಾಗೂ ೧೯೮೫ರಲ್ಲಿ ೧೩೨೧.

ಹಿಂದೆ ದನಗಳ ಕಳುವು ೬೭ ಇದ್ದರೆ ಈಗ ೬೧, ೫೯, ೪೦ಕ್ಕೆ ಇಳಿದಿದೆ. ಇದರಲ್ಲಿ ಡಿಟೆಕ್ಷನ್ ಮಾಡಿದಾಗ, ೧೯೮೧ರಲ್ಲಿ ೫೨.೮೪, ೧೯೮೨ರಲ್ಲಿ ೪೭.೮೯, ೧೯೮೩ರಲ್ಲಿ ೭೨.೬೬, ೧೯೮೪ರಲ್ಲಿ ೬೯.೯೧ ಇದೆ ಈಗ ಈ ಡಕಾಯಿತಿ, ಕೊಲೆ, ಸುಲಿಗೆ ಇವುಗಳ ದೃಷ್ಟಿಯಿಂದ ನಮ್ಮ ರಾಷ್ಟ್ರದಲ್ಲಿ ಒಂದು ಗಂಭೀರವಾದ ಪರಿಸ್ಥಿತಿ ಉಂಟಾಗಿದೆ. ಪಂಜಾಬ್‌ನಲ್ಲಿ ಏನು ವಾತಾವರಣ ಇದೆ, ಉಳಿದ ಕಡೆ ಏನು ವಾತಾವರಣವಿದೆ ಎಂಬುದನ್ನು ಚರ್ಚಿಸಮಾಡುವುದು ಅನಗತ್ಯ, ಕಾರಣ ಹುಡುಕುವುದು ಅಸಂಭವ. ಆದ್ದರಿಂದ,

ನಾವು ಬೇರೆ ಬೇರೆ ದೊಡ್ಡದೊಡ್ಡ ಪಟ್ಟಣಗಳನ್ನು ನಮ್ಮ ಕರ್ನಾಟಕದ ಬೆಂಗಳೂರಿಗೆ ಹೋಲಿಸಿ ನೋಡಿದಾಗ, ಇಂತಹ ಅಪರಾಧಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾ ಹೋಗಿವೆ. ೧೯೭೫ರ ಅಂಕಿಸಂಖ್ಯೆ ಇಲ್ಲ, ೧೯೭೪ರದ್ದು ಇದೆ ೧೯೭೧ರಲ್ಲಿ ದೆಹಲಿಯಲ್ಲಿ ೧೬೧ ಕೊಲೆ ಆಗಿದ್ದರೆ, ೧೯೭೪ರಲ್ಲಿ ೩೧೭ ರಾಬರಿ ೧೯೭೧ರಲ್ಲಿ ೧೭೩, ೧೯೭೪ರಲ್ಲಿ ೨೩೫, ಕಿಡ್‌ನ್ಯಾಪ್ ೧೯೭೧ರಲ್ಲಿ ೬೮೨, ೧೯೭೪ರಲ್ಲಿ ೧೧೬೮. ರೇಪ್ ೧೯೭೧ರಲ್ಲಿ ೬೮, ೧೯೭೪ರಲ್ಲಿ ೧೦೨. ರಾಯಟಿಂಗ್ ೧೯೭೧ರಲ್ಲಿ ೩೪, ೧೯೭೪ರಲ್ಲಿ ೪೩೧. ಇದರರ್ಥ, ಸಮರ್ಥನೆ ಮಾಡುತ್ತೇನೆಂದಲ್ಲ. ಬೆಂಗಳೂರಿನಲ್ಲಿ ಮತ್ತು ನಮ್ಮ ಕರ್ನಾಟಕ ಇನ್ನಿತರ ಕಡೆಗಳಲ್ಲಿ ನಡೆದರೆ, ಖಂಡನೀಯ. ಸರ್ಕಾರ ಇವುಗಳನ್ನು ತಡೆಯಲು ಪ್ರಯತ್ನ ಮಾಡುತ್ತದೆ ಮತ್ತು ಇಂತಹ ಘಟನೆಗಳಿಗೆ ಯಾರೇ ಜವಾಬ್ದಾರರಾಗಿರಲಿ, ಎಲ್ಲೇ ಅಡಗಿರಲಿ, ಯಾವುದೇ ರಾಜ್ಯದವರಾಗಿರಲಿ, ಅವರನ್ನು ಹುಡುಕಿ ತೆಗೆದು, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ನೂರಕ್ಕೆ ನೂರರಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಜನರ ಸಹಕಾರವೂ ಬೇಕು. ಮೊನ್ನೆ ಶ್ರೀ ರಾಚಯ್ಯನವರು ೨೫ ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ. ಅದನ್ನು ಹೆಚ್ಚು ಮಾಡಿ ಒಂದು ಲಕ್ಷ ರೂಪಾಯಿಗಳನ್ನು ಬಹುಮಾನವಾಗಿ ಕೊಡುತ್ತೇವೆಂದೂ ಹೇಳಿದ್ದಾರೆ. ಇದರ ಉದ್ದೇಶ, ನಮ್ಮ ಕೈಯಲ್ಲಿ ಏನೂ ಆಗುವುದಿಲ್ಲವೆಂದಲ್ಲ. ಕೆಲವು ಸಂದರ್ಭದಲ್ಲಿ, ಈ ಡಕಾಯಿತರು ಟೆಲಿವಿಷನ್ ಸೆಟ್ ಅನೇಕ ಆಭರಣಗಳನ್ನು ಮತ್ತು ಕ್ಯಾಷ್ ದರೋಡೆ ಮಾಡಿಕೊಂಡು ಹೋಗಿದ್ದಾರೆ. ಅವರ ಜೊತೆ ಸಣ್ಣಪುಟ್ಟ ಆಸೆಗಾಗಿ ಅವರ ಜೊತೆಗೆ ಕೆಲವು ಜನರು ಶಾಮೀಲಾಗಿರಬಹುದು. ಅಂತಹ ಜನ ಕ್ಲೂ ಕೊಡುವುದಾದರೆ ಅದಕ್ಕಾಗಿ ಆಕರ್ಷಕ ಮೊತ್ತ ಇದ್ದರೆ ಒಳ್ಳೆಯದೆಂದು ಅವರು ಇಷ್ಟು ಹಣವನ್ನು ಘೋಷಣೆ ಮಾಡಿದ್ದಾರೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಂತಹ ಹೇಳಿಕೆಯನ್ನು ನಾವು ಕೇಳಿದ್ದೇವೆ. ಇದನ್ನು ತಡೆಗಟ್ಟಬೇಕೆಂಬ ಅವರ ಮಾತು ಎಲ್ಲರೂ ಕೂಡ ಒಪ್ಪತಕ್ಕಂಥಾದ್ದು. ಏಕೆಂದರೆ, ಎಲ್ಲರ ಸಹಕಾರದಿಂದ ಇದನ್ನು ನಿಲ್ಲಿಸಬೇಕೆಂಬ ದೃಷ್ಟಿಯಿಂದ. ಆದರೆ ಸರ್ಕಾರದ ಜವಾಬ್ದಾರಿ ಏನು ಎನ್ನತಕ್ಕ ವಿಚಾರದಲ್ಲಿ ಎಲ್ಲರ ಸಹಕಾರವನ್ನು ಸರ್ಕಾರವು ಕೋರತಕ್ಕಂತಹ ಸಂದರ್ಭದಲ್ಲಿ ಇದರಲ್ಲಿ ರಾಜಕೀಯ ಕೈವಾಡ ಇದೆಯೆಂದು ಹೇಳಿದರೆ, ಅದು ಕಷ್ಟವಾಗುತ್ತದೆ. ರಾಜಕೀಯವಾಗಿ ಎಂದರೆ, ಜನತಾ ಇರಬಹುದು, ಕಾಂಗ್ರೆಸ್ ಇರಬಹುದು. ಈ ಮಾತನ್ನು ನಾನು ಇದ್ದಾಗ ತಾವು ಹೇಳಲಿಲ್ಲ. ಸ್ಥಳೀಯವಾಗಿ ಯಾರಾದರೂ ರಾಜಕೀಯವಾಗಿ ಬೆಂಬಲ ಕೊಡುತ್ತಾರೆಂಬ ಪ್ರಶ್ನೆ ಬೇರೆ. ಆದರೆ ಸಾರಾಸಗಟಾಗಿ ಹೇಳತಕ್ಕಂತಹ ಮಾತು ಸರಿಯಲ್ಲ. ಈ ವಿಷಯದಲ್ಲಿ ಮಾನ್ಯ ರಾಚಯ್ಯನವರು ವಿಶದೀಕರಿಸಲಿಲ್ಲ. ಇದನ್ನು ವಿಶದೀಕರಿಸಬೇಕಾದ್ದು ಅತಗತ್ಯ. ಕೊಟ್ಟಿರತಕ್ಕಂತಹ ಅಂಕಿಸಂಖ್ಯೆಗಳನ್ನು ತಾವು ಸಮರ್ಥನೆ ಮಾಡುತ್ತಿಲ್ಲವೆಂಬ ತಾವು ಹೇಳಿದ್ದೀರಿ. ನಾನು ಮತ್ತೆ ಅದನ್ನು ಮುಂದುವರಿಸುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವೊಮ್ಮೆ. ಅಖಿಲ ಭಾರತ ಮಟ್ಟದಲ್ಲಿ ನೋಡುವುದಾದರೆ, ಅಂದಾಜು ಮಾಡುವುದಕ್ಕೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಹೇಳಿದ್ದೀರಿ. ಕರ್ನಾಟಕ ಚರಿತ್ರೆ ನೋಡಿದಾಗ ಈ ರೀತಿಯ ದರೋಡೆ, ಸುಲಿಗೆಗಳು ಇಂತಹ ಮಟ್ಟದಲ್ಲಿ ಇರಲಿಲ್ಲ. ಅದಕ್ಕಾಗಿ ದೆಹಲಿ ಅಥವಾ ಮತ್ತೊಂದು ಪ್ರದೇಶದಲ್ಲಿರತಕ್ಕಂಥಾದ್ದನ್ನು ಹೋಲಿಸುವುದಕ್ಕಾಗುವುದಿಲ್ಲ. ಕೇರಳದಲ್ಲಿ ನಕ್ಸಲೈಟ್ಸ್ ಹಾವಳಿ ಇದೆ. ಅದಕ್ಕೆ ನಮ್ಮ ರಾಜ್ಯವನ್ನು ಹೋಲಿಸುವುದಕ್ಕಾಗುವುದಿಲ್ಲ. ಕಮ್ಯೂನಿಸ್ಟ್ ರಾಷ್ಟ್ರವಾದ ರಷ್ಯಾವನ್ನು ಬಿಟ್ಟರೆ, ಇತರೆಡೆ ಮುಷ್ಕರ ಕಡಿಮೆಯೆಂದು ಕೇಳಿದ್ದೇವೆ. ಅನೇಕ ರಾಷ್ಟ್ರಗಳ ರಾಜಧಾನಿಯಲ್ಲಿ ಹಲವಾರು ರಾಜಕೀಯವಾದ ದೂತಾವಾಸ ಏನು ಇದೆ ಒಟ್ಟಾರೆ ಯಾವುದೇ ರಾಜ್ಯದ ಅಂಕಿಸಂಖ್ಯೆಗಳನ್ನು ಇಲ್ಲಿ ಹೋಲಿಕೆ ಮಾಡುವುದು ಸರಿಯಲ್ಲ. ಆದರೆ, ಈ ವಿಚಾರದಲ್ಲಿ ಕರ್ನಾಟಕ ರಾಜ್ಯದ ಚರಿತ್ರೆಯೇ ವಿಭಿನ್ನವಾಗಿದೆ. ನೀವು ಪ್ರಯತ್ನ ಮಾಡಿದ್ದೀರೆಂಬ ಉದ್ದೇಶದಿಂದ ನಾನು ಹೇಳಲಿಲ್ಲ. ಗೃಹ ಸಚಿವರು ಯಾವ ರೀತಿ ತೀವ್ರವಾಗಿ ಕೆಲಸ ಮಾಡಬೇಕೆಂಬ ಆತಂಕದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಷಯವಾಗಿ ಮಾನ್ಯ ಆರ್. ವೆಂಕಟರಾಮಯ್ಯನವರು ಮತ್ತು ಮಾನ್ಯ ಎಂ. ಎಸ್. ಕೃಷ್ಣನ್‌ರವರು ಬೆಂಗಳೂರಿನ ಹೊರವಲಯಗಳಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಂತಹ ದರೋಡೆಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡಿದ್ದಾರೆ. ಹಾಗೂ ಈ ಪರಿಸ್ಥಿತಿಯು ಗಂಭೀರವಾಗಿದೆಯೆಂಬುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಮಾನ್ಯ ಗೃಹಸಚಿವರು ತಾವು ಇನ್ನೊಂದು ವಾರದಲ್ಲಿ ಈ ದರೋಡೆಗಾರರನ್ನು ಹಿಡಿಯುತ್ತೇನೆಂದು ಹೇಳಿದರು. ಆದರೆ, ಆ ರೀತಿ ಆಗದಿದ್ದಲ್ಲಿ ರಾಜೀನಾಮೆ ನೀಡುವ ಪ್ರಶ್ನೆ ಬರುತ್ತದೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ, ೮ ದಿನಗಳಲ್ಲಿ ಹಿಡಿಯಲು ಆಗದಿದ್ದರೆ, ರಾಜೀನಾಮೆಯನ್ನು ಕೊಡಿ ಎಂಬ ಪ್ರಶ್ನೆ ಬೇರೆ. ಪೋಲೀಸ್ ಇಲಾಖೆಯಲ್ಲಿ ಕಾಲಮಿತಿಯನ್ನು ಹಾಕಲು ಬರುವುದಿಲ್ಲ. ದರೋಡೆಕೋರರು ನಾಳೆ ಬೆಳಿಗ್ಗೆ ಸಿಗಬಹುದು. ನಾಡಿದ್ದು ಸಿಗಬಹುದು.

೨–೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಜಯಕುಮಾರ್‌ರವರೇ ನಿಮಗೆ ಕಾಲಮಿತಿಯನ್ನು ಹಾಕಬೇಕೆಂದು ನಾನು ಹೇಳಲಿಲ್ಲ. ಸರ್ಕಾರಕ್ಕೂ ಕಾಲಮಿತಿಯನ್ನು ಹಾಕಬೇಕೆಂದು ನಾನು ಹೇಳಲಿಲ್ಲ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನೀವು ಏನು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ ಅದಕ್ಕೆ ಅನುಕೂಲವಾಗುವಂತೆ ನಾನು ಒಂದೆರಡು ಸಲಹೆ, ಸೂಚನೆಗಳನ್ನು ಏನು ಕೊಡುತ್ತೇನೆ. ಅದನ್ನು ಕೂಡ ತಾವು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದು ನಮ್ಮ ಎಲ್ಲ ಮಾನ್ಯ ಸದಸ್ಯರ ಒತ್ತಡವಾಗಿದೆ. ಆದ್ದರಿಂದ ಈಗ ಇದನ್ನು ಚರ್ಚೆಗೆ ತೆಗೆದುಕೊಂಡು ತಮ್ಮ ರೂಲಿಂಗ್ ಏನಿದೆ ಅದನ್ನು ಒಂದು ವಾರಕಾಲ ಮುಂದಕ್ಕೆ ಹಾಕಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಪ್ರಕರಣದ ಬಗ್ಗೆ ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದಲ್ಲಿ ಏನು ದರೋಡೆ ಪ್ರಕರಣಗಳು ನಡೆಯುತ್ತಿವೆ ಇವುಗಳನ್ನು ನಿಲ್ಲಿಸಲು ವ್ಯಾಪಕ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇದನ್ನು ನಮ್ಮ ಪಕ್ಷದವರೂ ಒಪ್ಪಿಕೊಳ್ಳುತ್ತೇವೆ, ನಿಮ್ಮ ಪಕ್ಷದವರು ಅಷ್ಟೇ ಅಲ್ಲ ಈ ಸದನದ ಎಲ್ಲ ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆ. ಆದ್ದರಿಂದ, ಇವತ್ತೇ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡು ನಿಮ್ಮ ರೂಲಿಂಗ್ ಏನಿದೆ ಅದನ್ನು ಒಂದು ವಾರಕಾಲ ಮುಂದೂಡಬೇಕೆಂದು ನಾವು ಒತ್ತಾಯಿಸುತ್ತೇವೆ ಇದು ಕೇವಲ ಬೆಂಗಳೂರು ಅಥವಾ ಇನ್ನೊಂದು ಊರಿನ ಪ್ರಶ್ನೆ ಅಲ್ಲ. ಇದು ಇಡೀ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಕೂಡ ತಾವು ಒಂದು ಮಾತನ್ನು ಹೇಳಿ ಅಲ್ಲಿರತಕ್ಕ ಸಹೋದರ, ಸಹೋದರಿಯರೂ ಕಷ್ಟನಷ್ಟಗಳಿಗೆ ಸಿಕ್ಕಿದ್ದಾರೆ, ಅದೇರೀತಿ ನಮ್ಮ ಬೆಂಗಳೂರಿನಲ್ಲೂ ಕೂಡ ಅದೇ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದೀರಿ. ಅಂದಮೇಲೆ ತಾವು ಈಗಲೇ ಇದರ ಬಗ್ಗೆ ರೂಲಿಂಗ್‌ನ್ನು ಕೊಡಬೇಕಾಗಿಲ್ಲ ತಮ್ಮ ರೂಲಿಂಗ್‌ನ್ನು ಒಂದುವಾರಕಾಲ ಮುಂದೂಡಿ. ಇವತ್ತು ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರತಕ್ಕ ಪ್ರಕರಣದಲ್ಲಿ ಮತ್ತು ಬೆಂಗಳೂರಿನಲ್ಲಿ ನಡೆದಿರತಕ್ಕ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಕೂಡ ಒಂದು ವಾರಕಾಲ ಸಮಯ ಇರಬೇಕೆಂದು ನಾನು ಹೇಳಿದ್ದೇನೆ. ಶಿವಮೊಗ್ಗಾ, ತುಮಕೂರು, ಬೆಂಗಳೂರು, ಇನ್ನೂ ಮುಂತಾದ ಕಡೆಗಳಲ್ಲಿ ಡಕಾಯಿತಿಗಳನ್ನು ಮಾಡಿದವರ ಪೈಕಿ ಕೆಲವರು ಸಿಕ್ಕಿದ್ದಾರೆ. ಅವರುಗಳು ಹಿಂದೆ ಲೆಗಿನೇ ಇಸವಿಯಲ್ಲಿ ಎಲ್ಲೆಲ್ಲಿ ಏನೇನು ಮಾಡಿದ್ದಾರೆ. ಲೆಗಿನೇ ಇಸವಿಯಲ್ಲಿ ಎಲ್ಲೆಲ್ಲಿ ಏನೇನು ಮಾಡಿದ್ದಾರೆ, ಆ ವ್ಯಕ್ತಿಗಳೆಲ್ಲಾ ಒಂದೇ ಗುಂಪಿಗೆ ಸೇರಿದವರೇ? ಅಥವಾ ಬೇರೆ ಬೇರೆಯವರೆ? ಎಂಬ ಅನೇಕ ವಿಚಾರಗಳನ್ನು ಪತ್ತೆ ಮಾಡಬೇಕಾಗಿದೆ. ಹಿಂದೆ ಅನೇಕ ಪ್ರಕರಣಗಳು ಪತ್ತೆ ಆಗಿರಲಿಲ್ಲ. ಆದರೆ ಈಗ ಅವು ಪತ್ತೆಯಾಗುತ್ತಿವೆ. ಬೆಂಗಳೂರಿನಲ್ಲಿ ನಡೆದಿರತಕ್ಕ ಡಕಾಯಿತಿಗಳನ್ನು ಪತ್ತೆ ಹಚ್ಚುವ ವಿಚಾರದಲ್ಲಿ ನಾವು ಯಾವುದೇ ಕಾರಣಕ್ಕೂ ಹಿಂದೆಮುಂದೆ ನೋಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮಲ್ಲಿ ಫೊರೆನ್ಸಿಕ್ ಲಾಬೊರೆಟರಿ ಇದೆ, ಗುಪ್ತ ಪೋಲೀಸ್‌ದಳ ಇದೆ, ಡಕಾಯಿತಿಗಳನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಇವರನ್ನು ಇನ್ನೂ ಹೆಚ್ಚು ಚುರುಕುಗೊಳಿಸುತ್ತಿದ್ದೇವೆ. ಈ ಪತ್ತೆ ಕಾರ್ಯದಲ್ಲಿ ಖಂಡಿತವಾಗಿಯೂ ನಾವು ಯಶಸ್ಸನ್ನು ಗಳಿಸಿಯೇ ಗಳಿಸುತ್ತೇವೆಂಬ ಭರವಸೆ ನನಗಿದೆ. ಇವತ್ತು ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಸಭೆಯ ಗಮನವನ್ನು ಸೆಳೆಯುವುದರ ಮುಖಾಂತರ ಸಾರ್ವಜನಿಕರ ಗಮನವನ್ನೂ ಸೆಳೆದಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಎದ್ದುನಿಂತು ಬಹಳ ದಿಟ್ಟತನದಿಂದ ಮಾತನಾಡಿದ್ದಾರೆ. ಈ ಡಕಾಯಿತರನ್ನು ಹಿಡಿಯುವುದಕ್ಕೆ ತಮ್ಮೆಲ್ಲರ ಸಹಕಾರ, ಸಹಾಯ ಬೇಕೆಂದು ಕೇಳಿದ್ದೇನೆ....

ಶ್ರೀ ಎಸ್. ಬಂಗಾರಪ್ಪ.—ನಮ್ಮ ಸಹಕಾರವನ್ನು ಕೊಡುತ್ತೇವೆಂದು ನಾನು ಈಗಾಗಲೇ ಹೇಳಿದ್ದೇನಲ್ಲಾ.

ಶ್ರೀ ಬಿ. ರಾಚಯ್ಯ.—ತಮ್ಮ ಸಹಕಾರವನ್ನು ಕೇಳಿದ್ದೇನೆ, ಅದೇ ರೀತಿ ಮಾನ್ಯ ಕಾನಡೆಯವರ ಸಹಕಾರವನ್ನೂ ಕೂಡ ಕೇಳಿದ್ದೇನೆ...

ಶ್ರೀ ಎಸ್. ಬಂಗಾರಪ್ಪ.—ಇದು ತೀರಾ ಅತಿಯಾಯಿತು. ನಿಮ್ಮ ಪತ್ರೆ ಕಾರ್ಯಕ್ಕೆ ನಾವು ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದೇವೆ. ಆದರೂ ಕೂಡ ನೀವು ಏತಕ್ಕೆ ಮಾನ್ಯ ಸದಸ್ಯರಾದ ಕಾನಡೆಯವರ ಹೆಸರನ್ನು ಪ್ರಸ್ತಾಪ ಮಾಡುತ್ತೀರಿ? ನೀವು ಅವರ ಹೆಸರನ್ನು ಪ್ರಸ್ತಾಪ ಮಾಡುವುದಾರೆ ನಾವೂ ಕೂಡ ನಿಮ್ಮ ಪಕ್ಷದ ಬೇರೆ ಸದಸ್ಯರ ಹೆಸರನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ನೀವು ಅವರ ಬಗ್ಗೆ ಹೇಳುವುದಾದರೆ ನಿಮ್ಮ ಹತ್ತಿರ ಏನು ಸಾಕ್ಷ್ಯಾಧಾರಗಳಿವೆ? ಹಾಗೇನಾದರೂ ನಿಮ್ಮ ಹತ್ತಿರ ಸಾಕ್ಷಾಧಾರಗಳಿದ್ದರೆ ಅದನ್ನೆಲ್ಲಾ ಸಭೆಯ ಮುಂದೆ ತೆಗೆದುಕೊಂಡು ಬನ್ನಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್ .—ಮಾನ್ಯ ಅಧ್ಯಕ್ಷರೆ...

ಶ್ರೀ ಎಸ್. ಬಂಗಾರಪ್ಪ.—ನೀವು ಮಾನ್ಯ ಸದಸ್ಯರ ಹೆಸರುಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಾದರೆ ನಾವೂ ಕೂಡ ಬೇರೆ ಸದಸ್ಯರ ಹೆಸರುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಬಿ. ರಾಚಯ್ಯ.—ರಾಜಕೀಯ ಮಾಡುವುದರಲ್ಲಿ...

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುತ್ತಿದ್ದ ವಿಚಾರಕ್ಕೆ ಅನುಕೂಲವಾಗಲಿ ಎನುವ ದೃಷ್ಟಿಯಿಂದ ನಾವೂ ಕೂಡ ನಿಮ್ಮ ಜೊತೆಗೆ ಸಹಕರಿಸಿದ್ದೇವೆ.

ನಾವು ಇಷ್ಟೆಲ್ಲಾ ಸಹಕಾರ ನೀಡಿದರೂ ಕೂಡ ನೀವು ಏತಕ್ಕೆ ಮಾನ್ಯ ಸದಸ್ಯರ ಹೆಸರನ್ನು ಹೇಳುತ್ತಿದ್ದೀರಿ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಮನಸ್ಸಿನಲ್ಲಿ ಯಾವ ಉದ್ದೇಶವನ್ನು ಇಟ್ಟುಕೊಂಡು ಈ ಮಾತನ್ನು ಹೇಳಿದಿರಿ ಎಂದು ನನಗೆ ಅರ್ಥವಾಗುತ್ತಿಲ್ಲ.

(ಗೊ ಂ ದ ಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅವರ ಬೆಂಬಲ ಮತ್ತು ಸಹಕಾರವನ್ನು ಕೋರಿದರು. ಆದರೆ ಇವರು ಏತಕ್ಕೆ ಈರೀತಿ ಮಾತನಾಡುತ್ತಾರೆ ?

ಅಧ್ಯಕ್ಷರು —ಬಂಗಾರಪ್ಪನವರೆ, ನಾವು ಸಹಕಾರವನ್ನು ಕೊಡುತ್ತೇವೆಂದು ನೀವು ಹೇಳಿದ್ದೀರಿ. ಅದೇರೀತಿ ನಿಮ್ಮ ಸಹಕಾರವನ್ನು ತೆಗೆದುಕೊಳ್ಳುತ್ತೇವೆಂದೂ ಕೂಡ ಅವರು ಹೇಳಿದ್ದಾರೆ. ಈಗ ದಯವಿಟ್ಟು ಎಲ್ಲರೂ ಕೂತುಕೊಳ್ಳಿ. ನಾನು ಈಗ ರೂಲಿಂಗ್ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ —ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಒಬ್ಬ ಮಾನ್ಯ ಸದಸ್ಯರ ಹೆಸರು ರೆಕಾರ್ಡ್‌ನಲ್ಲಿ ಹೋಗಿದೆ. ಅದನ್ನು ತೆಗೆಸಬೇಕು. ಮಾನ್ಯ ಸಚಿವರು ಮಾತನಾಡುವಾಗ ಕಾನಡೆಯವರು ಎಂದುಹೆಸರನ್ನು ಹೇಳಿದ್ದಾರೆ...........

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ನಾನು ಈಗ ರೂಲಿಂಗ್ ಕೊಡುತ್ತೇನೆ. ಇದುವರೆಗೆ ಮಾನ್ಯ ಬಂಗಾರಪ್ಪನವರು ಹೇಳಿದ್ದನ್ನೂ ಕೇಳಿದ್ದೇನೆ, ಮಾನ್ಯ ಇದಿನಬ್ಬನವರು ಹೇಳಿದ್ದನ್ನೂ ಕೇಳಿದ್ದೇನೆ, ಮಾನ್ಯ ಗೃಹ ಸಚಿವರು ಕೊಟ್ಟಂಥ ವಿವರಗಳನ್ನೂ ಕೇಳಿದ್ದೇನೆ. ಮಾನ್ಯ ಕಾನೂನು ಸಚಿವರು ಹೇಳಿದ್ದನ್ನೂ ಕೇಳಿದ್ದೇನೆ. ಅದೇರೀತಿ ಆ ಕಡೆಯ ಸದಸ್ಯರೂ, ಮತ್ತು ಈ ಕಡೆಯ ಸದಸ್ಯರೂ ಎಲ್ಲರೂ ಏನು ಹೇಳಿದರು ಅವರೆಲ್ಲರದ್ದೂ ಒಂದೇ ಅಭಿಪ್ರಾಯವಾಗಿದೆ. ಆಡಳಿತದಲ್ಲಿ ಸುವ್ಯವಸ್ಥಿತವಾಗಿರಬೇಕು, ಪ್ರಜೆಗಳಿಗೆ ಏನು ತೊಂದರೆಗಳಾಗುತ್ತಿವೆ ಅವು ಆಗದಂತೆ ಇರಬೇಕೆಂಬುದೇ ಈ ಸದನದ ಎಲ್ಲ ಸದಸ್ಯ ಮುಖ್ಯ ಉದ್ದೇಶ, ಮತ್ತು ಸರ್ಕಾರದ ಉದ್ದೇಶ ಕೂಡ. ಈ ದಿಶೆಯಲ್ಲಿ ಈ ಕಡೆಯವರೂ, ಆ ಕಡೆಯವರೂ ತಮ್ಮ ತಮ್ಮ ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಯವರು ಏನು ಮಾಡಿದ್ದಾನೆಂದರೆ ಕರ್ನಾಟಕ ಸ್ಟೇಟ್ ಲೆಜಿಸ್ಲೇಚರ್ ಕನ್ಸಲ್ಟೇಟಿವ್ ಕಮಿಟಿ ಎಂದು ಮಾಡಿದ್ದಾರೆ. ಇದನ್ನು ೩-೨-೮೬ರಲ್ಲಿ ರಚನೆ ಮಾಡಿದ್ದಾರೆ. ಇದು ರಾಜ್ಯಪತ್ರದಲ್ಲಿ ಕೂಡ ಪ್ರಕಟವಾಗಿದೆ. ಒಟ್ಟು ಇವರು ೨೬ ಕನ್ಸಲ್ಟೇಟಿವ್ ಕಮಿಟಿಗಳನ್ನು ಮಾಡಿದ್ದಾರೆ. ಇದರಲ್ಲಿ ಹೋಂ ಡಿಪಾರ್ಟ್‌ಮೆಂಟ್‌ನಲ್ಲೂ ಕೂಡ ಒಂದು ಕಮಿಟಿಯನ್ನು ಮಾಡಿದ್ದಾರೆ. ಅದಕ್ಕೆ ಮಾನ್ಯ ಸಚಿವರೇ ಅಧ್ಯಕ್ಷರಾಗಿದ್ದಾರೆ, ಈ ಕಮಿಟಿಯಲ್ಲಿ ಕೆಳಕಂಡ ವಿಧಾನ ಸಭಾ ಸದಸ್ಯರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಲಾಗಿದೆ.

೧ ಶ್ರೀ ಕಲ್ಯಾಣರಾವ್ ಮಾಲ್‌ಕೆರೆ

೨ ಶ್ರೀ ಬಿ ಎಸ್ ಚಂದ್ರಶೇಖರಯ್ಯ

೩ ಶ್ರೀ ಕೆ ಆರ್ ಶ್ರೀನಿವಾಸಯ್ಯ

೪ ಶ್ರೀ ಬಿ ಅಪ್ಪಾಜಿಗೌಡ

೫ ಶ್ರೀ ಎಸ್ ಬಂಗಾರಪ್ಪ

೬ ಶ್ರೀ ಜಿ ಮಾದೇಗೌಡ

೭ ಶ್ರೀ ಎಂ ಪಿ ಕೇಶವಮೂರ್ತಿ

೮ ಶ್ರೀ ಕೆ ಕೆಂಪೇಗೌಡ

ಇವರ ಜೊತೆಗೆ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಖಾದ್ರಿ ಶಾಮಣ್ಣನವರು ಹಾಗೂ ಎ ಕೆ ಸುಬ್ಬಯ್ಯನವರಂಗಳನ್ನು ಇದರಲ್ಲಿ ಹಾಕಿದ್ದಾರೆ.. ....

ಒಬ್ಬ ಮಾನ್ಯ ಸದಸ್ಯರು.—ಇದನ್ನು ಮಾನ್ಯ ಗುಂಡೂರಾಯರು ಇದ್ದ ಕಾಲದಲ್ಲೇ ಮಾಡಿದ್ದರು.

ಅಧ್ಯಕ್ಷರು.—ಹಿಂದೆ ಅವರು ಮಾಡಿರಬಹುದು. ಆದರೆ ಈಗ ಇವರು ಇದನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಇದುವರೆಗೆ ಮಾನ್ಯ ಸದಸ್ಯರುಂಗಳು ಏನೇನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಮತ್ತು ಮುಂದೆ ಕೊಡುತ್ತಾರೆ ಅವುಗಳನ್ನೆಲ್ಲಾ ಸರ್ಕಾರದವರು ತೆಗೆದುಕೊಂಡು ರಾಜ್ಯದಲ್ಲಿ ಯಾವರೀತಿ ಶಾಂತಿ ಸುವ್ಯವಸ್ಥೆಯನ್ನು ಉಂಟುಮಾಡಬೇಕೋ ಆ ರೀತಿ ಮಾಡುತ್ತಾರೆ. ಇನ್ನೂ ಹೆಚ್ಚಿನ ವಿಷಯ ಗಳನ್ನು ಚರ್ಚೆಮಾಡತಕ್ಕ ಸದಸ್ಯರು ಯಾರಾದರೂ ಇದ್ದರೆ ಮುಂದೆ ಜನರಲ್ ಡಿಸ್ಕಷನ್ ಹೋಂ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಂತೆ ಡಿಸ್ಕಷನ್ ಬಂದಾಗ ಎಷ್ಟು ಅವಕಾಶವನ್ನು ಮಾಡಿಕೊಡ ಬೇಕೋ ಅಷ್ಟು ಅವಕಾಶವನ್ನೂ ಮಾಡಿಕೊಡುತ್ತೇನೆ. ಈಗ ಸದನದ ಮುಂದೆ ವಿರೋಧಪಕ್ಷದ ನಾಯಕರಾದ ಮಾನ್ಯ ಬಂಗಾರಪ್ಪನವರು ಏನೊಂದು ಸೂಚನೆಯನ್ನು ಮಂಡಿಸಿದ್ದಾರೆ ಅದನ್ನು ನಾನು ನಿರಾಕರಣೆ ಮಾಡಿದ್ದೇನೆ. ಈಗ ಮಾನ್ಯ ಸದಸ್ಯರಾದ ಕುಶಾಲ ಅವರ ಗಮನ ಸೆಳೆಯುವ ಸೂಚನೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾಳೆ ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಮಾನ್ಯ ರಾಚಯ್ಯನವರಾಗಲಿ ಅಥವಾ ಮಾನ್ಯ ದೇವೇಗೌಡರು ಆಗಲಿ ಉತ್ತರವನ್ನು ಕೊಡಲಿ. ಆದರೆ ನಾಳೆಯ ದಿವಸ "ಭಾರತ ಬಂದ್" ಇದೆ. ನಾಳೆ ಈ ಸದನ ನಡೆಯಬೇಕಾಗಿದೆ. ಕೆಲವು ರಾಜ್ಯಗಳು ಈ ಬಂದ್‌ನ್ನು ಆಚರಣೆ ಮಾಡುತ್ತಿವೆ. ನಮ್ಮ ಸರ್ಕಾರ ಇದಕ್ಕೆ ಬೆಂಬಲ ಕೊಟ್ಟಿದೆಯೋ ? ಇಲ್ಲವೇ ಎಂಬುದನ್ನು ತಿಳಿಸಬೇಕು.........

ಅಧ್ಯಕ್ಷರು.—ಇವತ್ತು ಇನ್ನೂ ಸಂಜೆ ೫ ಗಂಟೆಯವರೆಗೂ ಸದನ ಇರುತ್ತದೆ, ಆ ಮಧ್ಯೆ ಮಾನ್ಯ ಸಭಾ ನಾಯಕರನ್ನು ಬರಮಾಡಿಕೊಂಡು ಈ ವಿಷಯವನ್ನು ಚರ್ಚೆಮಾಡಿ ನಂತರ ಸದನಕ್ಕೆ ತಿಳಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ಸುಳ್ಯ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ ಸುಳ್ಯ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶ ಗಳಲ್ಲಿ ಕುಡಿಯುವ ನೀರಿನ ಅಭಾವದ ಗಂಭೀರ ಪರಿಸ್ಥಿತಿ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ. ಸುಳ್ಯ ತಾಲ್ಲೂಕಿನಲ್ಲಿ ಒಟ್ಟು ೪೦ ಗ್ರಾಮಗಳಿದ್ದು ೫೦೦ರಿಂದ ೧೦೦೦ ಜನಸಂಖ್ಯೆ ಇರುವ ೫ ಹಳ್ಳಿಗಳಿವೆ. ೧೦೦೦ ಜನಸಂಖ್ಯೆ ಮೇಲಿರುವ ೩೫ ಹಳ್ಳಿಗಳಿವೆ.